
ಗುರುವಾರ, ಜುಲೈ 13, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 193 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,393 ▼	19,384 ▼	₹60,780 (ಬೆಂಗಳೂರು) ▲	₹73,000 (ಬೆಂಗಳೂರು)	82.22 ▲

₹111.78 ಕೋಟಿ ಕಮಿಷನ್ ಸಂಗ್ರಹಿಸುವ ಗುರಿ: ಜೆಡಿಎಸ್ ನಾಯಕನ ಆರೋಪ

ವರ್ಗ: ದರಪಟ್ಟಿ ಕೊಟ್ಟ ಕುಮಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಂದ ಮೇಲೆ ಅಧಿಕಾರಿಗಳ ವರ್ಗಾವಣೆಯಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಆರೋಪ ಮಾಡುತ್ತಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಕೃಷಿ ಇಲಾಖೆಯಲ್ಲಿ ಅಧಿಕಾರಿಗಳ ವರ್ಗಾವಣೆ ಮತ್ತು ವಿವಿಧ ಯೋಜನೆಗಳಿಗೆ ನಿಗದಿಪಡಿಸಲಾಗಿದೆ ಎನ್ನಲಾದ 'ಕಮಿಷನ್ ದರಪಟ್ಟಿ'ಯೊಂದನ್ನು ಬುಧವಾರ ವಿಧಾನಸಭೆಗೆ ಸಲ್ಲಿಸಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಕುರಿತ ಚರ್ಚೆಯ ಮಧ್ಯದಲ್ಲೇ ಭ್ರಷ್ಟಾಚಾರ ನಿಯಂತ್ರಣದ ಬಗ್ಗೆ ಪ್ರಸ್ತಾಪಿಸಿದ ಕುಮಾರಸ್ವಾಮಿ, ಎರಡು ಪುಟಗಳ ಪಟ್ಟಿಯೊಂದನ್ನು ಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ಕಳುಹಿಸಿದರು. ಸ್ಪೀಕರ್ ಮೂಲಕವೇ ಮುಖ್ಯಮಂತ್ರಿಗೂ ಕಳುಹಿಸಿದರು.

'ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದ ನೀವು (ಕಾಂಗ್ರೆಸ್), ನೇಮಕಾತಿ, ಅಧಿಕಾರಿಗಳ ವರ್ಗಾವಣೆ ಹಾಗೂ ಸ್ಥಳ ನಿಯುಕ್ತಿಗೆ ದರ ನಿಗದಿ ಮಾಡಿದ್ದ ಬಗ್ಗೆ ಜಾಹೀರಾತನ್ನೂ ನೀಡಿದ್ದೀರಿ. ದರಪಟ್ಟಿಯನ್ನೂ ಪ್ರಕಟಿಸಲಾಗಿತ್ತು. ಈಗ ಒಂದು ಇಲಾಖೆಯ ದರಪಟ್ಟಿ ನನ್ನ ಬಳಿ ಇದೆ. ಅಧಿಕಾರಿಗಳೇ ನನಗೆ ಕೊಟ್ಟಿದ್ದಾರೆ' ಎಂದು ತಮ್ಮ ಬಳಿ ಇದ್ದ ಪಟ್ಟಿಯನ್ನು ಪ್ರದರ್ಶಿಸಿದರು.

ಸಭಾಧ್ಯಕ್ಷರು ಮತ್ತು ಮುಖ್ಯಮಂತ್ರಿಯವರಿಗೆ ಪಟ್ಟಿ ಕಳುಹಿಸುವಾಗ ಕುಮಾರಸ್ವಾಮಿ ಯಾವುದೇ ಇಲಾಖೆಯ ಹೆಸರು ಉಲ್ಲೇಖಿಸಲಿಲ್ಲ. ಆದರೆ, ಚರ್ಚೆ ಮುಗಿಸಿ ಸದನದಿಂದ ಹೊರಬಂದ ಬಳಿಕ ಮಾಧ್ಯಮಗಳಿಗೆ ಆ ಪಟ್ಟಿಯನ್ನು ಬಿಡುಗಡೆ ಮಾಡಿದರು. ಅದರಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳ ವರ್ಗಾವಣೆ, ಹಾಲಿ ಇರುವ ಸ್ಥಳದಲ್ಲೇ ಮುಂದುವರಿಸುವುದು ಮತ್ತು ವಿವಿಧ ಯೋಜನೆಗಳ ಅನುಷ್ಠಾನಕ್ಕೆ ನಿಗದಿಪಡಿಸಿರುವ ಕಮಿಷನ್ ಮೊತ್ತ ಹಾಗೂ ಶೇಕಡವಾರು ಪ್ರಮಾಣದ ವಿವರಗಳಿವೆ.

ಕೃಷಿ ಇಲಾಖೆಯ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು, ಆಡಳಿತಾಧಿಕಾರಿಗಳು ಸೇರಿದಂತೆ ವಿವಿಧ ಅಧಿಕಾರಿಗಳ ವರ್ಗಾವಣೆ ಮತ್ತು ಇಲಾಖೆಯಲ್ಲಿನ ಹಲವು ಯೋಜನೆಗಳ ಅನುಷ್ಠಾನದಲ್ಲಿ ಒಟ್ಟು ₹111.78 ಕೋಟಿ ಸಂಗ್ರಹಿಸುವ ಗುರಿ ಇದೆ ಎಂಬ ಮಾಹಿತಿ ಪಟ್ಟಿಯಲ್ಲಿದೆ.

'ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರದಿಂದ ₹ 1.5 ಲಕ್ಷ ಕೋಟಿ ನಷ್ಟವಾಗಿದೆ ಎಂಬ ಆರೋಪವನ್ನು ನೀವು ಮಾಡಿದ್ದಿರಿ. ಅದಕ್ಕೆ ಯಾವ ದಾಖಲೆಯನ್ನೂ ಕೊಟ್ಟಿರಲಿಲ್ಲ. ನೀವೇ ಅಧಿಕಾರದಲ್ಲಿದ್ದೀರಿ. ಈಗ ತನಿಖೆ ಮಾಡಬೇಕು' ಎಂದು ಆಗ್ರಹಿಸಿದರು.

'ಈಗ ಭ್ರಷ್ಟಾಚಾರದ ಆರೋಪಕ್ಕೆ ದಾಖಲೆ ಎಲ್ಲಿದೆ ಎಂದು ಕೇಳುತ್ತೀರಿ. ಈ ಸರ್ಕಾರ ಭ್ರಷ್ಟಾಚಾರ ನಿಯಂತ್ರಿಸಲಿದೆ ಎಂದು ರಾಜ್ಯಪಾಲರ ಮೂಲಕ ಹೇಳಿಸಿದ್ದೀರಿ. ಭ್ರಷ್ಟಾಚಾರ ತೊಡೆದು ಹಾಕುವುದಾದರೆ ನಾನು ಸಂಪೂರ್ಣ ಸಹಕಾರ ನೀಡುವೆ' ಎಂದರು.

'ಈ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ತಿಂಗಳಾಗಿದೆ. ಬೀದಿಯಲ್ಲಿ ಏನು ಚರ್ಚೆ ನಡೆಯುತ್ತಿದೆ ಎಂಬುದರ ಕುರಿತು ಮುಖ್ಯಮಂತ್ರಿಯವರಿಗೆ ಗುಪ್ತದಳ ಹಾಗೂ ಇತರ ಇಲಾಖೆಗಳಿಂದ ವರದಿಗಳು ಬಂದಿರಬಹುದು. ಅದನ್ನು ಸರಿಪಡಿಸಿಕೊಳ್ಳುವುದು ನಿಮಗೆ ಬಿಟ್ಟ ವಿಚಾರ' ಎಂದು ಕುಮಾರಸ್ವಾಮಿ ಹೇಳಿದರು.

'ಅಧಿಕಾರ ಸಿಕ್ಕಿಲ್ಲ ಎಂದು ಸಂಕಟದಿಂದ, ಈರ್ಷೆಯಿಂದ, ಅಸೂಯೆಯಿಂದ ಕುಮಾರಸ್ವಾಮಿ ಮಾತನಾಡುತ್ತಿದ್ದಾನೆ ಎಂದು ಹೇಳುತ್ತಿದ್ದೀರಿ. ನಮ್ಮ ಕುಟುಂಬ ಬಹಳ ನೋಡಿದೆ. ಅಧಿಕಾರ ಕೊಟ್ಟಿದ್ದು ದೇವರು. ನಾನೇನೂ 120–130 ಸ್ಥಾನ ಗಳಿಸಿ ಮುಖ್ಯಮಂತ್ರಿ ಆಗಿರಲಿಲ್ಲ' ಎಂದರು.


ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಮಾತನಾಡಿದರು. ಶಾಸಕರಾದ ಸಿದ್ದು ಸವದಿ ಮತ್ತು ಶಾರದಾ ಪೂರ್ಯಾನಾಯ್ಕ್ ಇದ್ದರು

ಕಾಂಗ್ರೆಸ್ ಬಿಜೆಪಿ ಜಟಾಪಟಿ

'ಹಿಂದಿನ ಬಿಜೆಪಿ ಸರ್ಕಾರದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ದರಪಟ್ಟಿಯ ಜಾಹೀರಾತು ನೀಡಿದ್ದಿರಲ್ಲಾ, ದಾಖಲೆ ಒದಗಿಸಿದ್ದೀರಾ' ಎಂದು ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸುತ್ತಿದ್ದಂತೆಯೇ 'ಅದು ಹಿಂದಿನ ಸರ್ಕಾರದಲ್ಲಿ ಬಿಜೆಪಿ ಶಾಸಕರ ಹೇಳಿಕೆ ಆಧರಿಸಿ ರೂಪಿಸಿದ್ದ ಪಟ್ಟಿ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದರು.

'ಸಾಕ್ಷ್ಯ ಇದೆಯಾ? ನೀವು ಹಿಂದೆ ಸಮಾಜ ಕಲ್ಯಾಣ ಸಚಿವರಾಗಿದ್ದ ಅವಧಿಯಲ್ಲಿ ಭ್ರಷ್ಟಾಚಾರ ಮಾಡಿದ್ದ ದಾಖಲೆ ಇದೆ. ಪ್ರಾಮಾಣಿಕತೆ, ನೈತಿಕತೆ ಇಟ್ಟುಕೊಂಡು ಮಾತನಾಡುತ್ತೀರಾ' ಎಂದು ಬಿಜೆಪಿಯ ಅಶ್ವತ್ಥ ನಾರಾಯಣ ಸಚಿವರನ್ನುದ್ದೇಶಿಸಿ ಕೇಳಿದರು.

'ಅಶ್ವತ್ಥ ನಾರಾಯಣ ಅವರು ಇದ್ದ ಸಭೆಯಲ್ಲೇ ಮೈಸೂರಿನ ಸಂಸದರು ಕುಲಪತಿಗಳ ನೇಮಕಾತಿಯಲ್ಲಿ ಭ್ರಷ್ಟಾಚಾರದ ಬಗ್ಗೆ ಹೇಳಿಕೆ ನೀಡಿದ್ದರು. ಅದು ಸುಳ್ಳೇ' ಎಂದು ಪ್ರಿಯಾಂಕ್ ಪ್ರಶ್ನಿಸಿದರು.

'ಕಾಂಗ್ರೆಸ್‌ನ ಭ್ರಷ್ಟಾಚಾರದ ಬಗ್ಗೆ ಕೆ.ಆರ್. ರಮೇಶ್ ಕುಮಾರ್ ಹೇಳಿಕೆ ನೀಡಿದ್ದು ಸುಳ್ಳೇ' ಎಂದು ಬಿಜೆಪಿಯ ಆರ್. ಅಶೋಕ ಕೇಳಿದರು.

ಎಚ್‌ಡಿಕೆ ಕೊಟ್ಟ ದರ ಪಟ್ಟಿ

₹1 ಕೋಟಿಯಿಂದ ₹1.5 ಕೋಟಿ	ಕೇಂದ್ರ ಕಚೇರಿ ಜಂಟಿ ನಿರ್ದೇಶಕರು
₹15 ಲಕ್ಷದಿಂದ ₹75 ಲಕ್ಷ	ಜಿಲ್ಲೆಗಳ ಜಂಟಿ ನಿರ್ದೇಶಕರು
₹10 ಲಕ್ಷದಿಂದ ₹30 ಲಕ್ಷ	ಉಪ ನಿರ್ದೇಶಕರು
₹5 ಲಕ್ಷದಿಂದ ₹15 ಲಕ್ಷ	ಸಹಾಯಕ ನಿರ್ದೇಶಕರು
₹3 ಲಕ್ಷದಿಂದ ₹10 ಲಕ್ಷ	ಜಿಲ್ಲಾ ಕಚೇರಿಯಲ್ಲಿನ ಸಹಾಯಕ ನಿರ್ದೇಶಕರು
₹1 ಲಕ್ಷದಿಂದ ₹2 ಲಕ್ಷ	ರೈತ ಸಂಪರ್ಕ ಕೇಂದ್ರಗಳು

ಈಗ ಭ್ರಷ್ಟಾಚಾರದ ಆರೋಪಕ್ಕೆ ದಾಖಲೆ ಎಲ್ಲಿದೆ ಎಂದು ಕೇಳುತ್ತೀರಿ. ಬಿಜೆಪಿ ಸರ್ಕಾರದ ವಿರುದ್ಧ ಪುಟಗಟ್ಟಲೆ ಜಾಹೀರಾತು ಕೊಟ್ಟಾಗ ನಿಮ್ಮ ಬಳಿ ದಾಖಲೆ ಇತ್ತೇ?
ಎಚ್‌.ಡಿ.ಕುಮಾರಸ್ವಾಮಿ

ಕಮಿಷನ್

8%	ಸೂಕ್ಷ್ಮ ನೀರಾವರಿ
8%	ಯಾಂತ್ರೀಕರಣ
1%- 4%	ಜಲಾನಯನ ಅಭಿವೃದ್ಧಿ ಯೋಜನೆ
5%- 8%	ಕೇಂದ್ರ ಪುರಸ್ಕೃತ ಯೋಜನೆಗಳು

ಕೊಬ್ಬರಿಗೆ ₹1,250 ಪ್ರೋತ್ಸಾಹ ಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಪ್ರತಿ ಕ್ವಿಂಟಲ್ ಉಂಡೆ ಕೊಬ್ಬರಿಗೆ ₹11,750 ಬೆಂಬಲ ಬೆಲೆ ಪ್ರಕಟಿಸಿದ್ದು, ಇದರ ಜೊತೆಗೆ ರಾಜ್ಯ ಸರ್ಕಾರ ಪ್ರತಿ ಕ್ವಿಂಟಲ್‌ಗೆ ₹1,250 ಪ್ರೋತ್ಸಾಹ ಧನ ನೀಡಲಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ವಿಧಾನಸಭೆಯಲ್ಲಿ ಬುಧವಾರ ಗಮನಸೆಳೆಯುವ ಸೂಚನೆಗೆ ಉತ್ತರ ನೀಡಿದ ಅವರು ಈ ವಿಷಯ ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಮೂಲಕ ನಾಫೆಡ್ ಇದೇ 11 ರವರೆಗೆ 45,038 ಟನ್ ಉಂಡೆ ಕೊಬ್ಬರಿ ಖರೀದಿ ಮಾಡಿದೆ. ಬುಧವಾರದಿಂದ (ಜು.12) ಕೇಂದ್ರದ ಬೆಂಬಲ ಬೆಲೆ ಪ್ರತಿ ಕ್ವಿಂಟಲ್‌ಗೆ ₹11,750 ಮತ್ತು ರಾಜ್ಯದ ಪ್ರೋತ್ಸಾಹ ಧನ ₹1,250 ಜಾರಿಯಾಗಲಿದೆ ಎಂದರು.

ಈಗಾಗಲೇ ರಾಜ್ಯ ಸರ್ಕಾರವು ಖರೀದಿ ಪ್ರಮಾಣ ಹೆಚ್ಚಳ ಮತ್ತು ಖರೀದಿ ಅವಧಿ ವಿಸ್ತರಣೆಗೆ ಕೇಂದ್ರ ಸರ್ಕಾರವನ್ನು ಕೋರಿದೆ. ಕೇಂದ್ರ ಸರ್ಕಾರವು ಖರೀದಿ ಪ್ರಮಾಣ ಹೆಚ್ಚಳಕ್ಕೆ ಹಾಗೂ ಅವಧಿ ವಿಸ್ತರಣೆಗೆ ಅನುಮತಿ ನೀಡಿದ ನಂತರ ನೋಂದಾಯಿಸುವ ರೈತರಿಗೂ ಸಹ ಘೋಷಿತ ಬೆಂಬಲ ಬೆಲೆ ಜತೆಗೆ ಘೋಷಿತ ಪ್ರೋತ್ಸಾಹ ಧನವನ್ನೂ ನೀಡಲಾಗುವುದು ಎಂದು ಪಾಟೀಲ ತಿಳಿಸಿದರು. ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ, ಕೇಂದ್ರ ಸರ್ಕಾರ ಬೆಂಬಲ ಬೆಲೆಯನ್ನು ₹15,000ಕ್ಕೆ ಹೆಚ್ಚಿಸಬೇಕು. ರಾಜ್ಯ ಸರ್ಕಾರ ಪ್ರೋತ್ಸಾಹ ಧನವನ್ನು ₹2,000ಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಅಂಕಿ ಅಂಶ

37,632 ರೈತರು
ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ನೋಂದಾಯಿಸಿಕೊಂಡವರು

45,038 ಟನ್
ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಯಾದ ಕೊಬ್ಬರಿ

₹8,020
ಪ್ರತಿ ಕ್ವಿಂಟಲ್‌ಗೆ ಮಾರುಕಟ್ಟೆಯಲ್ಲಿ ಗರಿಷ್ಠ ಧಾರಣೆ

ಎಸ್‌ಡಿಆರ್‌ಎಫ್: ₹348 ಕೋಟಿ ರಾಜ್ಯಕ್ಕೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಹಣಕಾಸು ಸಚಿವಾಲಯದ ವೆಚ್ಚ ಇಲಾಖೆಯು ಗೃಹ ಸಚಿವಾಲಯದ ಶಿಫಾರಸಿನ ಮೇರೆಗೆ ಕರ್ನಾಟಕದ ರಾಜ್ಯ ವಿಪತ್ತು ಸ್ಪಂದನೆ ನಿಧಿಗೆ (ಎಸ್‌ಡಿಆರ್‌ಎಫ್) ₹348.80 ಕೋಟಿಯನ್ನು ಬುಧವಾರ ಬಿಡುಗಡೆ ಮಾಡಿದೆ. 22 ರಾಜ್ಯಗಳ ಈ ನಿಧಿಗಳಿಗೆ ₹7,532 ಕೋಟಿ ಬಿಡುಗಡೆಯಾಗಿದೆ.

ಹಿಂದಿನ ಆರ್ಥಿಕ ವರ್ಷದಲ್ಲಿ ರಾಜ್ಯಗಳಿಗೆ ಒದಗಿಸಿದ ಮೊತ್ತದ ಬಳಕೆ ಪ್ರಮಾಣಪತ್ರ ಸಲ್ಲಿಸಿದ ಬಳಿಕವೇ ಈ ವರ್ಷದ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಆದರೆ, ದೇಶದ ವಿವಿಧ ಭಾಗಗಳಲ್ಲಿ ಭಾರಿ ಮಳೆಯಾಗುತ್ತಿರುವ ಕಾರಣ ಮಾರ್ಗಸೂಚಿಗಳನ್ನು ಸಡಿಲಿಸಿ ರಾಜ್ಯಗಳಿಗೆ ತಕ್ಷಣದ ನೆರವಿನ ರೂಪದಲ್ಲಿ ಈ ಮೊತ್ತ ಬಿಡುಗಡೆ ಮಾಡಲಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಪ್ರತಿ ವರ್ಷ ಎರಡು ಸಮಾನ ಕಂತುಗಳಲ್ಲಿ ಕೇಂದ್ರದ ಪಾಲನ್ನು ಎಸ್‌ಡಿಆರ್‌ಎಫ್‌ಗೆ ಬಿಡುಗಡೆ ಮಾಡಲಾಗುತ್ತದೆ.

11ನೇ ಪುಟ ನೋಡಿ

ನಾಫೆಡ್‌ನಿಂದ ಟೊಮೆಟೊ ಖರೀದಿ

ನವದೆಹಲಿ (ಪಿಟಿಐ): ಆಂಧ್ರಪ್ರದೇಶ ಹಾಗೂ ಕರ್ನಾಟಕದ ಮಾರುಕಟ್ಟೆಗಳಿಂದ ಟೊಮೆಟೊ ಖರೀದಿ ಮಾಡುವಂತೆ ಕೇಂದ್ರ ಸರ್ಕಾರವು ಸಹಕಾರ ಕ್ಷೇತ್ರದ ನಾಫೆಡ್ ಮತ್ತು ಎನ್‌ಸಿಸಿಎಫ್‌ಗೆ ಬುಧವಾರ ಸೂಚನೆ ನೀಡಿದೆ.



ನಾಫೆಡ್ (ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಳ) ಹಾಗೂ ಎನ್‌ಸಿಸಿಎಫ್ (ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ) ಇಲ್ಲಿ ಖರೀದಿ ಮಾಡಿದ್ದನ್ನು, ಟೊಮೆಟೊ ಬಳಕೆ ಹೆಚ್ಚಿರುವ ಹಾಗೂ ರಿಟೇಲ್ ಮಾರಾಟ ದರ ಗರಿಷ್ಠ ಪ್ರಮಾಣದಲ್ಲಿ ಏರಿಕೆ ಆಗಿರುವ ಪ್ರದೇಶಗಳಲ್ಲಿ ಮಾರಾಟ ಮಾಡಲಾಗುತ್ತದೆ.

ಟೊಮೆಟೊ ಸಂಗ್ರಹವನ್ನು ನವದೆಹಲಿಯಲ್ಲಿ ರಿಟೇಲ್ ಮಾರಾಟ ಕೇಂದ್ರಗಳ ಮೂಲಕ ಗ್ರಾಹಕರಿಗೆ ಜುಲೈ 14ರ ನಂತರ ರಿಯಾಯಿತಿ ದರದಲ್ಲಿ ತಲುಪಿಸಲಾಗುತ್ತದೆ ಎಂದು ಗ್ರಾಹಕ ವ್ಯವಹಾರಗಳ ಸಚಿವಾಲಯವು ತಿಳಿಸಿದೆ. ದೇಶದ ಕೆಲವು ಪ್ರದೇಶಗಳಲ್ಲಿ ಟೊಮೆಟೊ ದರವು ಕೆ.ಜಿ.ಗೆ ₹200ಕ್ಕಿಂತ ದುಬಾರಿಯಾಗಿದೆ.

ಜುಲೈ-ಆಗಸ್ಟ್ ಹಾಗೂ ಅಕ್ಟೋಬರ್-ನವೆಂಬರ್ ಅವಧಿಯಲ್ಲಿ ಟೊಮೆಟೊ ಉತ್ಪಾದನೆ ಬಹಳ ಕಡಿಮೆ ಇರುತ್ತದೆ. ಜುಲೈನ ಮಳೆಯು ಟೊಮೆಟೊ ವಿತರಣೆಯ ಸವಾಲನ್ನು ಹೆಚ್ಚಿಸಿದೆ, ಸರಕು ಸಾಗಣೆ ಸಂದರ್ಭದಲ್ಲಿ ನಷ್ಟ ಆಗುವುದು ಹೆಚ್ಚಾಗಿದೆ. ಇವೆಲ್ಲ ಬೆಲೆ ಏರಿಕೆಗೆ ಕಾರಣವಾಗಿವೆ ಎಂದು ಸಚಿವಾಲಯ ಹೇಳಿದೆ.

ದೇಶದ ದಕ್ಷಿಣ ಹಾಗೂ ಪಶ್ಚಿಮ ಭಾಗಗಳಲ್ಲಿ ಟೊಮೆಟೊ ಬೆಳೆ ಹೆಚ್ಚಿನ ಪ್ರಮಾಣದಲ್ಲಿ ಇದೆ. ಇಲ್ಲಿಂದ ಇತರ ಪ್ರದೇಶಗಳಿಗೆ ಟೊಮೆಟೊ ರವಾನೆ ಆಗುತ್ತದೆ.





ಬೆಂಗಳೂರಿನಲ್ಲಿ ಬುಧವಾರ ನಡೆದ ಮೌನ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಸೇರಿದಂತೆ ಕಾಂಗ್ರೆಸ್ ಮುಖಂಡರು ಪಾಲ್ಗೊಂಡಿದ್ದರು (ಎಡ) ಬಿಜೆಪಿಯಿಂದ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ನಡೆದ ಪ್ರತಿಭಟನೆಯಲ್ಲಿ ವಿ.ಸುನೀಲ್ ಕುಮಾರ್, ಬಸವರಾಜ ಬೊಮ್ಮಾಯಿ, ಆರ್ ಅಶೋಕ, ಸಿ.ಎನ್ ಅಶ್ವತ್ಥ ನಾರಾಯಣ ಮತ್ತು ಆರಗ ಜ್ಞಾನೇಂದ್ರ ಭಾಗವಹಿಸಿದ್ದರು

ಕಾಂಗ್ರೆಸ್, ಬಿಜೆಪಿ ಪರಸ್ಪರ ಪ್ರತಿಭಟನೆ

ರಾಹುಲ್ ಗಾಂಧಿ ಅವರ ವಿರುದ್ಧ ಕೇಂದ್ರ ಸೇಡಿನ ಕ್ರಮ ಕೈಗೊಳ್ಳುತ್ತಿದೆ ಎಂದು ದೂರಿ ಕಾಂಗ್ರೆಸ್ ನಾಯಕರು, ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ ಎಂದು ಬಿಜೆಪಿ ನಾಯಕರು ಬುಧವಾರ ಪ್ರತಿಭಟಿಸಿದರು

ಸಿ.ಎಂ, ಡಿಸಿಎಂ ಮೌನ ಧರಣಿ

ಬೆಂಗಳೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ರಾಜಕೀಯ ಜೀವನ ಮುಗಿಸಲು ಕೇಂದ್ರದ ಬಿಜೆಪಿ ಸರ್ಕಾರ ಪಿತೂರಿ ನಡೆಸಿದೆ ಎಂದು ಆರೋಪಿಸಿ ಕಾಂಗ್ರೆಸ್ ನಾಯಕರು ಬುಧವಾರ ಮೌನ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯ ನೇತೃತ್ವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ವಹಿಸಿದ್ದರು. ಪ್ರತಿಭಟನೆಯಲ್ಲಿ ಪಾಲ್ಗೊಂಡ ಕಾಂಗ್ರೆಸ್‌ನ ಎಲ್ಲ ನಾಯಕರು ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದರು.

11ನೇ ಪುಟ ನೋಡಿ

'ರಾಜ್ಯದಲ್ಲಿ ಈಗ ಜಂಗಲ್ ರಾಜ್'

ಬೆಂಗಳೂರು: ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಎರಡು ತಿಂಗಳಲ್ಲೇ 'ಜಂಗಲ್ ರಾಜ್' ಆರಂಭವಾಗಿದೆ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಜೈನ ಮುನಿಗಳ ಹತ್ಯೆ ಪ್ರಕರಣ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಹಾಗೂ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟು ಹೋಗಿದೆ ಎಂದು ಆಪಾದಿಸಿ ಬಿಜೆಪಿ ಶಾಸಕರು ಬೊಮ್ಮಾಯಿ ನೇತೃತ್ವದಲ್ಲಿ ವಿಧಾನಸೌಧದ ಗಾಂಧಿ ಪ್ರತಿಮೆ ಎದುರು ಬುಧವಾರ ಧರಣಿ ನಡೆಸಿದರು. ಬಳಿಕ, ಕಾಲ್ನಡಿಗೆಯಲ್ಲಿ ರಾಜಭವನಕ್ಕೆ ತೆರಳಿದರು.

11ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ



ಒಳಭಾಗ ಕಪ್ಪು, ಕೆಟ್ಟ ವಾಸನೆಯೂ ಬರುತ್ತದೆ: ದೂರು

ಅಂಗನವಾಡಿಗಳಿಗೆ ಕಳಪೆ ಮೊಟ್ಟೆ

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ಮಕ್ಕಳು, ಗರ್ಭಿಣಿಯರಲ್ಲಿ ಅಪೌಷ್ಟಿಕತೆ ನಿವಾರಿಸಲು ಅಂಗನವಾಡಿ ಕೇಂದ್ರಗಳಿಗೆ ವಾರದಲ್ಲಿ ಎರಡು ದಿನ ವಿತರಿಸಲಾಗುವ ಮೊಟ್ಟೆಗಳು ಕಳಪೆಯಾಗಿದ್ದು, ಬೇಯಿಸಿದ ಬಳಿಕ ಕೆಲವು ಕೆಟ್ಟಿರುತ್ತವೆ ಎಂಬ ಆರೋಪ ಕೇಳಿ ಬಂದಿದೆ.

'ಗುತ್ತಿಗೆದಾರರು ಪೂರೈಸಿದ ಮೊಟ್ಟೆಗಳನ್ನು ಬೇಯಿಸಿ ಸಿಪ್ಪೆ ಸುಲಿದಾಗ, ಅವು ಕೆಟ್ಟಿರುವುದು ಗೊತ್ತಾಗುತ್ತದೆ. ಮೊಟ್ಟೆಯ ಒಳಭಾಗ ಕಪ್ಪು ಬಣ್ಣಕ್ಕೆ ತಿರುಗಿರುತ್ತದೆ. ಕೆಲವೊಮ್ಮೆ ಕೆಟ್ಟವಾಸನೆಯೂ ಬರುತ್ತದೆ' ಎಂದು ಹಾವೇರಿ ಜಿಲ್ಲೆಯ ಅಂಗನವಾಡಿ ಕಾರ್ಯಕರ್ತೆಯರು ದೂರಿದರು.

ಮೊಟ್ಟೆಗಳ ಕೊರತೆ: 'ಗುತ್ತಿಗೆದಾರರು ಸಣ್ಣ ಗಾತ್ರದ ಹಾಗೂ ಕಳಪೆ ಗುಣಮಟ್ಟದ ಮೊಟ್ಟೆಗಳನ್ನು ಅಂಗನವಾಡಿ ಕೇಂದ್ರಗಳಿಗೆ ಪೂರೈಸುತ್ತಾರೆ. ಬೇಡಿಕೆಗೆ ತಕ್ಕಷ್ಟು ನೀಡುವುದಿಲ್ಲ' ಎಂದು ಅಂಗನವಾಡಿ ಕಾರ್ಯಕರ್ತೆಯರು ತಿಳಿಸಿದರು.

5ನೇ ಪುಟ ನೋಡಿ


ಅಂಗನವಾಡಿ ಕೇಂದ್ರಗಳಿಗೆ ಪೂರೈಕೆಯಾದ ಕಳಪೆ ಮೊಟ್ಟೆಗಳು

ಟೆಂಡರ್ ಪದ್ಧತಿ ರದ್ದುಪಡಿಸಬೇಕು. ಮೊಟ್ಟೆ ಖರೀದಿ ಜವಾಬ್ದಾರಿ ಮೊದಲಿನಂತೆ ಬಾಲ ವಿಕಾಸ ಸಮಿತಿಗೆ ನೀಡಬೇಕು. ಇಲ್ಲದಿದ್ದರೆ, ಮೊಟ್ಟೆ ಚಳವಳಿ ಆರಂಭಿಸುತ್ತೇವೆ
ಹೊನ್ನಪ್ಪ ಮರೆಮ್ಮನವರ, ಅಧ್ಯಕ್ಷ, ಎಐಟಿಯುಸಿ ಜಿಲ್ಲಾ ಸಮಿತಿ, ಹಾವೇರಿ

ಗುಣಮಟ್ಟದ ಮೊಟ್ಟೆ ಪೂರೈಕೆಗೆ ಕ್ರಮ ಕೈಗೊಳ್ಳುವಂತೆ ಸಿಡಿಪಿಓಗಳಿಗೆ ನಿರ್ದೇಶಿಸಲಾಗಿದೆ. ಕಳಪೆ ಮೊಟ್ಟೆ ಪೂರೈಕೆ ಕಂಡು ಬಂದರೆ ಕ್ರಮ ಕೈಗೊಳ್ಳುತ್ತೇವೆ
ಶ್ರೀನಿವಾಸ ಆಲದರ್ತಿ, ಡಿ.ಡಿ, ಮಹಿಳಾ, ಮಕ್ಕಳ ಅಭಿವೃದ್ಧಿ ಇಲಾಖೆ, ಹಾವೇರಿ

ಮಲ್ಟಿಪ್ಲೆಕ್ಸ್ ಟಿಕೆಟ್ ದರ ₹250 ಮೀರದಂತೆ ನಿಗದಿಪಡಿಸಲು ಮನವಿ

ಪ್ರಜಾವಾಣಿ ವಾರ್ತೆ


ಭಾ.ಮ.ಹರೀಶ್

ಬೆಂಗಳೂರು: 'ನೆರೆ-ರಾಜ್ಯಗಳಲ್ಲಿ ನಿಗದಿಪಡಿಸಿರುವಂತೆ ಕರ್ನಾಟಕದಲ್ಲೂ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ₹250 ಮೀರದಂತೆ ಹಾಗೂ ಏಕಪರದೆ ಚಿತ್ರಮಂದಿರಗಳಲ್ಲಿ ₹150 ಮೀರದಂತೆ ಚಿತ್ರಗಳಿಗೆ ಪ್ರವೇಶದರ ನಿಗದಿಪಡಿಸಿ ಆದೇಶ ಹೊರಡಿಸಿ' ಎಂಬ ಬೇಡಿಕೆಯನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಎದುರಿಗಿರಿಸಿದೆ.

ಮಂಡಳಿಯ ಅಧ್ಯಕ್ಷ ಭಾ.ಮ.ಹರೀಶ್ ಅವರು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಬೇಡಿಕೆ ಪತ್ರ ಸಲ್ಲಿಸಿದ್ದು, 'ರಾಜ್ಯದಾದ್ಯಂತ ಚಿತ್ರಮಂದಿರಗಳಲ್ಲಿ ಪ್ರವೇಶದರ ದುಬಾರಿಯಾಗಿದ್ದು, ಕನ್ನಡ ಪ್ರೇಕ್ಷಕರಿಗೆ ಹೊರೆಯಾಗುತ್ತಿದೆ. ಆದಕಾರಣ ಏಕರೀತಿಯ ಪ್ರವೇಶದರ ನಿಗದಿಪಡಿಸಿದರೆ, ಚಿತ್ರಮಂದಿರಗಳಿಗೆ ಹೆಚ್ಚಿನ ಪ್ರೇಕ್ಷಕರು ಬರುವಂತಾಗಲಿದೆ' ಎಂದು ಉಲ್ಲೇಖಿಸಿದ್ದಾರೆ.

'ರಾಜ್ಯದ ಚಿತ್ರಮಂದಿರಗಳಲ್ಲಿನ ಪ್ರೊಜೆಕ್ಟರ್‌ಗಳು ವಿದೇಶದಿಂದ, ಅದರಲ್ಲೂ ಒಂದಿಬ್ಬರು ಸರ್ವೀಸ್ ಪ್ರೊವೈಡರ್‌ಗಳಿಂದ ಪಡೆಯಬೇಕಾಗಿದೆ. ಚಿತ್ರಮಂದಿರಗಳು ಇಂದಿಗೂ ಬಾಡಿಗೆ ರೂಪದಲ್ಲಿ ಇವುಗಳನ್ನು ಪಡೆದು ಪ್ರದರ್ಶನ ನಡೆಸುತ್ತಿವೆ. ಸ್ವಂತ ಪ್ರೊಜೆಕ್ಟರ್ ಖರೀದಿಸಲು ₹40-50 ಲಕ್ಷ ಬಂಡವಾಳ ಹೂಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರದರ್ಶಕರಿಗೆ ತಲಾ ಒಂದು ಪ್ರೊಜೆಕ್ಟರ್ ಖರೀದಿಗೆ ₹10 ರಿಂದ 15 ಲಕ್ಷ ಸಹಾಯಧನ ನೀಡಬೇಕು' ಎನ್ನುವ ಮನವಿಯನ್ನೂ ಮಂಡಳಿ ಮುಂದಿಟ್ಟಿದೆ. ಈ ಸಂದರ್ಭದಲ್ಲಿ ಮಂಡಳಿಯ ಪದಾಧಿಕಾರಿಗಳಾದ ಎಚ್.ಸಿ. ಶ್ರೀನಿವಾಸ, ಸುಂದರ್ ರಾಜ್ ಮತ್ತಿತರರು ಉಪಸ್ಥಿತರಿದ್ದರು.

ಮೂಲಸೌಕರ್ಯ ಕೊರತೆ: ಜೆ.ಸಿ. ಮಾರುಕಟ್ಟೆ ಸ್ಥಳಾಂತರಿಸಲು ವ್ಯಾಪಾರಿಗಳ ಆಗ್ರಹ

ಎತ್ತ ನೋಡಿದರತ್ತ ಕಸದ ರಾಶಿ

• ಖಲೀಲಅಹ್ಮದ ಶೇಖ



ಮಾರುಕಟ್ಟೆ ಕಷ್ಟ ಸಿಕ್ಕಾಪಟ್ಟೆ

ಬೆಂಗಳೂರು: ಎತ್ತ ನೋಡಿದರೂ ಕೊಳೆತ ತರಕಾರಿಗಳ ರಾಶಿ. ಕೊಳೆಗೇರಿಯಂತಾದ ಸ್ಥಳದಲ್ಲೇ ನಿತ್ಯವೂ ನಡೆಯುತ್ತಿರುವ ವ್ಯಾಪಾರ, ಎಲ್ಲೆಡೆ ಕಸದ ರಾಶಿ, ದುರ್ನಾತ....

ಕಲಾಸಿಪಾಳ್ಯದಲ್ಲಿರುವ ಜಯ ಚಾಮರಾಜೇಂದ್ರ ಹಣ್ಣು, ತರಕಾರಿ ಮಾರುಕಟ್ಟೆಯ ದುಃಸ್ಥಿತಿ ಇದು.

ನಗರದ ಹೃದಯಭಾಗದಲ್ಲಿರುವ ಐತಿಹಾಸಿಕ ಹಣ್ಣು ಮತ್ತು ತರಕಾರಿ ಸಗಟು ಮಾರುಕಟ್ಟೆ ಮೂಲ ಸೌಕರ್ಯಗಳಿಂದ ವಂಚಿತವಾಗಿದೆ. ಮಾರುಕಟ್ಟೆ ಸ್ಥಳಾಂತರಿಸಬೇಕು ಎಂಬ ವ್ಯಾಪಾರಿಗಳ ಬಹುವರ್ಷಗಳ ಬೇಡಿಕೆ ಇದುವರೆಗೂ ಈಡೇರಿಲ್ಲ. ನಿತ್ಯ ಕಸದ ರಾಶಿಯಲ್ಲಿ ಹೆಜ್ಜೆ ಹಾಕುವ ರೈತರ ಅಸಹಾಯಕತೆಯನ್ನು ನೋಡಿ ಸಗಟು ವ್ಯಾಪಾರವನ್ನಾದರೂ ಶೀಘ್ರವಾಗಿ ಸ್ಥಳಾಂತರ ಮಾಡಿ ಎಂಬ ವ್ಯಾಪಾರಿಗಳ ಬೇಡಿಕೆಗೆ ಸರ್ಕಾರ ಸ್ಪಂದಿಸುತ್ತಿಲ್ಲ.

'ತರಕಾರಿಗಳನ್ನು ವಾಹನಗಳ ಮೂಲಕ ಹೊತ್ತು ತರುವ ರೈತರ ವಾಹನಗಳಿಗೆ ಈ ಮಾರುಕಟ್ಟೆಯಲ್ಲಿ ನಿಲುಗಡೆಗೆ ಸ್ಥಳಾವಕಾಶ ಇಲ್ಲ. ಇಡೀ ಪ್ರದೇಶದಲ್ಲಿ ಪಾರ್ಕಿಂಗ್ ಮಾಫಿಯಾ ಮೀತಿಮೀರಿದೆ. ಜೆ.ಸಿ. ಮಾರುಕಟ್ಟೆಯನ್ನು ಸಂಪೂರ್ಣವಾಗಿ ಬಿಬಿಎಂಪಿಯೇ ನಿರ್ವಹಣೆ ಮಾಡಲಿ. ಇದರಿಂದ, ಮೂಲಸೌಕರ್ಯಗಳು ಖಾತ್ರಿಯಾಗುತ್ತವೆ' ಎನ್ನುವುದು ವ್ಯಾಪಾರಿಗಳ ಒತ್ತಾಯ.

'ರಾಜ್ಯದ ವಿವಿಧ ಜಿಲ್ಲೆಗಳಿಂದ ಹಾಗೂ ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ಸೇರಿ ಹಲವು ರಾಜ್ಯಗಳಿಂದ ಪ್ರತಿನಿತ್ಯ ಮಾರುಕಟ್ಟೆಗೆ ನೂರಾರು ರೈತರು ಬರುತ್ತಾರೆ. ಇವರಿಗೆಲ್ಲ ಶೌಚಾಲಯ ವ್ಯವಸ್ಥೆಯೇ ಇಲ್ಲದಾಗಿದೆ. ಇದರಿಂದಾಗಿ ಇಡೀ ಮಾರುಕಟ್ಟೆಯಲ್ಲಿ ದುರ್ನಾತ ತುಂಬಿಕೊಂಡಿದೆ. ಜತೆಗೆ, ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲ' ಎನ್ನುವುದು ವ್ಯಾಪಾರಿಗಳ ಆರೋಪ.

ಅಕ್ರಮ ಅಂಗಡಿಗಳೇ ಜಾಸ್ತಿ: 'ಮಾರುಕಟ್ಟೆಯಲ್ಲಿ ಪರವಾನಗಿ ಹೊಂದಿರುವ ಅಂಗಡಿಗಳಿಗಿಂತ ಅಕ್ರಮವಾಗಿ ತೆರೆದಿರುವ ಅಂಗಡಿಗಳೇ ಹೆಚ್ಚಿದ್ದು, ಇವುಗಳಿಗೆ ಕಡಿವಾಣ ಹಾಕಬೇಕು ಎಂದು ವರ್ತಕರ ಸಂಘದಿಂದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಮಾರುಕಟ್ಟೆಯಲ್ಲಿ ಸಿಸಿಟಿವಿ ಕ್ಯಾಮೆರಾವನ್ನೂ ಅಳವಡಿಸಬೇಕು ಎನ್ನುವ ಬೇಡಿಕೆಯೂ ಈಡೇರಿಲ್ಲ' ಎಂದು ವ್ಯಾಪಾರಿ ಮಂಜುನಾಥ ದೂರಿದರು.



ಮಳೆ ಬಂದ ಕಾರಣ ಜೆ.ಸಿ ಮಾರುಕಟ್ಟೆಯಲ್ಲಿ ಕೊಳಚೆ ನೀರು ಸಂಗ್ರಹವಾಗಿದ್ದು, ತರಕಾರಿ ತ್ಯಾಜ್ಯ ತಿನ್ನುತ್ತಿರುವ ಜಾನುವಾರುಗಳು. –ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್‌.ಜಿ



ಕಲಾಸಿಪಾಳ್ಯದಲ್ಲಿರುವ ಜೆ.ಸಿ. ಮಾರುಕಟ್ಟೆಯಲ್ಲಿ ಕಾರ್ಮಿಕರು ಎಲೆಕೋಸು ಕೆಳಗೆ ಇಳಿಸಿಕೊಳ್ಳುತ್ತಿರುವುದು.

ಐತಿಹಾಸಿಕ ಮಾರುಕಟ್ಟೆ ಮಾಹಿತಿ

- ಕೆ.ಆರ್. ಮಾರುಕಟ್ಟೆಯ ಅಧೀನದಲ್ಲಿದ್ದ ಜೆ.ಸಿ. ಮಾರುಕಟ್ಟೆಯು **1992**ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಅಧೀನಕ್ಕೆ ಸೇರಿತು
- **1984**ರಲ್ಲಿ ಜೆ.ಸಿ. ಮಾರುಕಟ್ಟೆಯು ಕಲಾಸಿಪಾಳ್ಯಕ್ಕೆ ಸ್ಥಳಾಂತರಗೊಂಡಿತು
- ಮಾರುಕಟ್ಟೆ ವ್ಯಾಪ್ತಿಯು ಮೂರು ಎಕರೆಯಷ್ಟಿದೆ
- **493**ಕ್ಕೂ ಹೆಚ್ಚು ಅಂಗಡಿಗಳಿದ್ದು, ಅಂಗಡಿಗಳನ್ನು ತೆರೆಯಲು **970** ಜನ ಪರವಾನಗಿ ಪಡೆದುಕೊಂಡಿದ್ದಾರೆ

ಮಾರುಕಟ್ಟೆ ಸ್ಥಳಾಂತರಿಸಿ




'ನಗರದ ಹೃದಯ ಭಾಗದಲ್ಲಿರುವುದೇ ಈ ಮಾರುಕಟ್ಟೆಯ ದೊಡ್ಡ ಸಮಸ್ಯೆ. ಬೆಳಿಗ್ಗೆ 7 ಗಂಟೆ ಒಳಗೆ ಮತ್ತು ರಾತ್ರಿ 7 ಗಂಟೆ ನಂತರ ವಾಹನಗಳು ಮಾರುಕಟ್ಟೆಗೆ ಪ್ರವೇಶಿಸಬೇಕು. ಇಲ್ಲದಿದ್ದರೆ, ವಾಹನ ದಟ್ಟಣೆ ಉಂಟಾಗುತ್ತದೆ. ಈ ಎಲ್ಲ ಕಾರಣಕ್ಕೆ ನಗರದ ಹೊರವಲಯಕ್ಕೆ ಈ ಮಾರುಕಟ್ಟೆಯನ್ನು ಸ್ಥಳಾಂತರಿಸಬೇಕು ಎನ್ನುವುದು ವ್ಯಾಪಾರಿಗಳ ಬಹುವರ್ಷಗಳ ಬೇಡಿಕೆ. ಆದರೆ, ಇದುವರೆಗೂ ಈಡೇರಿಲ್ಲ' ಎಂದು ವ್ಯಾಪಾರಿ ಗಿರೀಶ್ ತಿಳಿಸಿದರು.

'ಸ್ಥಳಾಂತರ ಸದ್ಯಕ್ಕೆ ಕಷ್ಟಸಾಧ್ಯ'

'ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಬ್ಯಾಟರಾಯನಪುರದ ಬಳಿ 30 ಎಕರೆ ಪ್ರದೇಶದಲ್ಲಿ ಮಾರುಕಟ್ಟೆ ನಿರ್ಮಿಸಲು ಯೋಜನೆ ರೂಪಿಸಲಾಗಿತ್ತು. ಆದರೆ, ಹಲವು ವರ್ಷಗಳಾದರೂ ಮಾರುಕಟ್ಟೆ ನಿರ್ಮಾಣವಾಗಲೇ ಇಲ್ಲ. ಇತ್ತೀಚೆಗೆ ಮಾರುಕಟ್ಟೆಯನ್ನು ಎಲೆಕ್ಟ್ರಾನಿಕ್ ಸಿಟಿ ಸಮೀಪದಲ್ಲಿರುವ ಸಿಂಗೇನ ಅಗ್ರಹಾರದ ಬಳಿ ಎಪಿಎಂಸಿಗೆ ನೀಡಿರುವ 42 ಎಕರೆ ಜಾಗಕ್ಕೆ ಮಾರುಕಟ್ಟೆ ಸ್ಥಳಾಂತರ ಆಗಲಿದೆ ಎನ್ನಲಾಗುತ್ತಿದೆ. ಆದರೆ, ಇಲ್ಲಿ ಮಾರುಕಟ್ಟೆ ನಿರ್ಮಿಸಬಾರದು ಎಂದು ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ಪ್ರಕರಣ ಇತ್ಯರ್ಥವಾಗುವವರೆಗೆ ಮಾರುಕಟ್ಟೆ ಸ್ಥಳಾಂತರ ಆಗುವುದಿಲ್ಲ' ಎಂದು ಎಪಿಎಂಸಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ವಾಹನ ದಟ್ಟಣೆ ನಿಯಂತ್ರಿಸಿ'



ಜೆ.ಸಿ. ಮಾರುಕಟ್ಟೆಯಲ್ಲಿ ಉಂಟಾಗುತ್ತಿರುವ ವಾಹನ ದಟ್ಟಣೆಯನ್ನು ನಿಯಂತ್ರಿಸಬೇಕು. ಯಾವ ದ್ವಾರದಿಂದ ವಾಹನಗಳು ಮಾರುಕಟ್ಟೆಗೆ ಬರುತ್ತವೆಯೋ ಅದೇ ರಸ್ತೆಯಲ್ಲಿ ಮರಳಿ ಹೋಗಬೇಕೆಂಬ ಎಪಿಎಂಸಿ ಅಧಿಕಾರಿಗಳ ಅಲಿಖಿತ ನಿಯಮದಿಂದ ವ್ಯಾಪಾರಿಗಳು ಪರದಾಡುತ್ತಿದ್ದಾರೆ. ಸಂಬಂಧಪಟ್ಟ ಸಚಿವರು ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಬೇಕು

ಆಶ್ಫಾಕ್ ಉಲ್ಲಾ ಶರೀಫ್, ವ್ಯಾಪಾರಿ



ಜೆ.ಸಿ. ಮಾರುಕಟ್ಟೆಯನ್ನು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಎರಡು ಬಾರಿ ಸ್ವಚ್ಛಗೊಳಿಸಿದರೆ ಮಾತ್ರ ಗ್ರಾಹಕರು ಮಾರುಕಟ್ಟೆಗೆ ಬರುತ್ತಾರೆ. ಪಾದಚಾರಿ ಮಾರ್ಗದಲ್ಲಿ ಹಚ್ಚಿರುವ ಅಂಗಡಿಗಳಿಂದಲೇ ತರಕಾರಿ ಖರೀದಿಸುತ್ತಾರೆ.

ಫಯಾಜ್ ಅಹ್ಮದ್, ವ್ಯಾಪಾರಿ,



ಕಲಾಕೃತಿ ವೀಕ್ಷಣೆ ಕರ್ನಾಟಕ ಚಿತ್ರಕಲಾ ಪರಿಷತ್ತಿಗೆ ಬುಧವಾರ ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರು ಭೇಟಿ ನೀಡಿ ಕಲಾಕೃತಿಗಳನ್ನು ವೀಕ್ಷಿಸಿದರು. ಸುರೇಂದ್ರ ಹೆಗ್ಗಡೆ, ಕಾಮತ್ ಕಲಾರುಚಿಯ ವೀರೇಂದ್ರ ಕಾಮತ್, ಸಂತೋಷ್ ಪೈ, ಕುಂಬ್ಳೆ ಲಕ್ಷ್ಮಣ ಪ್ರಭು ಇದ್ದರು.

ತಾಂತ್ರಿಕ ದೋಷ: ವಿಮಾನ ತುರ್ತು ಭೂಸ್ಪರ್ಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೋಸ್ ಲ್ಯಾಂಡಿಂಗ್ ಗೇರ್' ವೈಫಲ್ಯದಿಂದ ಖಾಸಗಿ ವಿಮಾನವು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ. ಪೈಲಟ್, ಸಹಪೈಲಟ್ ಅಪಾಯದಿಂದ ಪಾರಾಗಿದ್ದಾರೆ.

ಎಂಟು ಸೀಟುಗಳ ಖಾಸಗಿ ವಿಮಾನವು ಮಂಗಳವಾರ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ವಿಮಾನ ನಿಲ್ದಾಣದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊರಟಿತ್ತು. ಪೈಲಟ್, ಸಹಪೈಲಟ್ ಮಾತ್ರ ವಿಮಾನದಲ್ಲಿದ್ದರು.

ವಿಮಾನದ 'ನೋಸ್ ಲ್ಯಾಂಡಿಂಗ್ ಗೇರ್'ನಲ್ಲಿ ತಾಂತ್ರಿಕ ತೊಂದರೆ ಇರುವುದು ವಿಮಾನ ಟೇಕ್‌ಆಫ್ ಆದ ಮೇಲೆ ಪೈಲಟ್ ಗಮನಕ್ಕೆ ಬಂದಿದೆ. ವಿಮಾನವನ್ನು ಎಚ್‌ಎಎಲ್‌ಗೆ ವಾಪಸ್ ಕೊಂಡೊಯ್ಯಲು ನಿರ್ಧರಿಸಿದ ಪೈಲಟ್ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿದರು.

ತುರ್ತು ಭೂಸ್ಪರ್ಶ ಸಂದರ್ಭದಲ್ಲಿ ಉಂಟಾಗಬಹುದಾದ ಹಾನಿ ತಪ್ಪಿಸಲು ಅಗ್ನಿ ಅವಘಡ ತಪ್ಪಿಸುವ ರಾಸಾಯನಿಕವನ್ನು ರನ್‌ವೇನಲ್ಲಿ ಹಾಕಲಾಯಿತು. ಪೈಲಟ್ ಚಾಕಚಕ್ಯತೆಯಿಂದ ಮೊದಲು ವಿಮಾನದ ಮುಂಭಾಗವನ್ನು ಗಾಳಿಯಲ್ಲೇ ಇರಿಸಿ, ಎರಡೇ ಚಕ್ರಗಳನ್ನು ರನ್‌ವೇಗೆ ತಾಗಿಸಿ ಇಳಿಸಿದರು. ಬಳಿಕ ಮುಂಭಾಗ ಕೆಳಗೆ ಅಪ್ಪಳಿಸಿತು. ಪೈಲಟ್, ಸಹಪೈಲಟ್ ಅಪಾಯವಿಲ್ಲದೇ ಹೊರಬಂದರು.

ನಗರದಲ್ಲಿ ಸಾಧಾರಣ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಬುಧವಾರ ಸಾಧಾರಣ ಮಳೆಯಾಗಿದೆ.

ಬೆಳಿಗ್ಗೆಯಿಂದ ಬಿಸಿಲು ವಾತಾವರಣ ಇತ್ತು. ಸಂಜೆ ರಾಜಾಜಿನಗರ, ಯಶವಂತಪುರ, ಮಲ್ಲೇಶ್ವರ, ರಾಜರಾಜೇಶ್ವರಿನಗರ, ನಾಯಂಡನಹಳ್ಳಿ ವಿದ್ಯಾರಣ್ಯಪುರ, ದೊಡ್ಡಬೊಮ್ಮಸಂದ್ರ, ಹೆಬ್ಬಾಳ, ಆರ್‌.ಟಿ.ನಗರ, ವಸಂತನಗರ, ನಾಗಾವರ, ಹೆಣ್ಣೂರು, ಬಾಣಸವಾಡಿ ಸುತ್ತಮುತ್ತ ಸ್ಥಳಗಳಲ್ಲಿ ಸಾಧಾರಣ ಮಳೆಯಾಗಿದೆ.

ಜಯನಗರ, ಜೆ.ಪಿ.ನಗರ, ಬನಶಂಕರಿ, ಹನುಮಂತನಗರ, ಬಸವನಗುಡಿ, ಚಾಮರಾಜಪೇಟೆ, ಮೆಜೆಸ್ಟಿಕ್, ಶಿವಾಜಿನಗರ, ಎಂ.ಜಿ. ರಸ್ತೆ, ಅಶೋಕನಗರ, ಕೋರಮಂಗಲ, ಮಡಿವಾಳದಲ್ಲೂ ಮಳೆಯಾಗಿದೆ.

ನಗರದಲ್ಲಿ ಇಂದು

'ಅಡ್ವಾನ್ಸಸ್ ಇನ್ ಮೆಕಾನಿಕಲ್ ಎಂಜಿನಿಯರಿಂಗ್' ಕುರಿತ ಅಂತರ-ರಾಷ್ಟ್ರೀಯ ಸಮ್ಮೇಳನ: ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಅತಿಥಿಗಳು: ಎಂ.ಕೆ. ಸ್ವಾಮಿ, ಎಂ.ಎಲ್. ಮಂಜುಳ, ಡಿ. ಜವಾಹರ್, ಜೆ. ಸೂರ್ಯಪ್ರಸಾದ್, ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಬನಶಂಕರಿ 3ನೇ ಹಂತ, ಬೆಳಿಗ್ಗೆ 9.30

ಹರಿನಾಮ ಸಂಕೀರ್ತನೆ: ಗಾಯನ: ಅನನ್ಯಾ ಬೆಳವಾಡಿ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸುದರ್ಶನ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, ಸಂಜೆ 7


ಅನನ್ಯಾ ಬೆಳವಾಡಿ

ಕಾಂಕ್ರೀಟ್ ಪನೋರಮಾ ಡೆಮಿನಾರ್: ಅತಿಥಿಗಳು: ಶಿವಶೈಲಂ, ಮನು ಶಾಂತನಮ್, ಆಯೋಜನೆ: ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್, ಸ್ಥಳ: ಪ್ರೆಸ್ಟೀಜ್ ಶ್ರೀಹರಿ ಖೋಡೆ ಸೆಂಟರ್ ಫಾರ್ ಪರ್‌ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ, ಬೆಳಿಗ್ಗೆ 10

ಪ್ರೌಢಶಾಲಾ ಶಿಕ್ಷಕರಿಗೆ ಗುರುತ್ವಾಕರ್ಷಣೆ ಕಮ್ಮಟ: ಆಯೋಜನೆ ಮತ್ತು ಸ್ಥಳ: ಜವಾಹರ್ ಲಾಲ್ ನೆಹರೂ ತಾರಾಲಯ, ಟಿ. ಚೌಡಯ್ಯ ರಸ್ತೆ, ಹೈ ಗ್ರೌಂಡ್ಸ್, ಬೆಳಿಗ್ಗೆ 10.30

ದಾಸರ ಪದಗಳ ಗಾಯನ: ಪ್ರತೀಕ್ಷಾ ಜಿ. ರಾವ್, ಹಾರ್ಮೋನಿಯಂ: ವಿಘ್ನೇಶ್ ಭಾಗವತ್, ತಬಲಾ: ಪರಮೇಶ್ವರ ಹೆಗ್ಡೆ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಸಂಜೆ 7


ಪ್ರತೀಕ್ಷಾ ಜಿ. ರಾವ್

ಪ್ರವಚನ ವಾಹಿನಿ: 'ಭಗವಂತ ಮತ್ತು ಭಕ್ತನ ಅವಿನಾಭಾವ ಸಂಬಂಧ' ಕುರಿತ ಉಪನ್ಯಾಸ: ವೀಣಾ ನಾಗರಾಜ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ

nagaradalli_indu@prajavani.co.in

'ಜಿ–ನೆಟ್' ಮಾಲೀಕ ಅರುಣ್ ಕುಮಾರ್‌ನಿಂದ ಸುಪಾರಿ, ಮೂವರು ಆರೋಪಿಗಳ ಬಂಧನ

ವ್ಯಾವಹಾರಿಕ ವೈಷಮ್ಯಕ್ಕೆ ಜೋಡಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರೋನಿಕ್ಸ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಫಣೀಂದ್ರ ಹಾಗೂ ಸಿಇಒ ವಿನುಕುಮಾರ್ ಅವರ ಕೊಲೆ ಪ್ರಕರಣದ ಮೂವರು ಆರೋಪಿಗಳನ್ನು ಅಮೃತಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಬನ್ನೇರುಘಟ್ಟ ರಸ್ತೆಯ ಚಿಕ್ಕನಹಳ್ಳಿ ನಿವಾಸಿ, 'ರೀಲ್ಸ್ ಸ್ಟಾರ್' ಶಬರೀಶ್ ಅಲಿಯಾಸ್ ಫಿಲಿಕ್ಸ್ (27), ಆತನ ಸ್ನೇಹಿತರಾದ ರೂಪೇನ ಅಗ್ರಹಾರದ ವಿನಯ್ ರೆಡ್ಡಿ (23) ಹಾಗೂ ಮಾರೇನಹಳ್ಳಿ ನಿವಾಸಿ ಸಂತು ಅಲಿಯಾಸ್ ಸಂತೋಷ್ (26) ಬಂಧಿತರು. ಇವರು ಕುಣಿಗಲ್‌ನಲ್ಲಿ ತಲೆ ಮರೆಸಿಕೊಂಡಿದ್ದರು.


ಕೊಲೆಗೆ ಸುಪಾರಿ ನೀಡಿರುವ ಆರೋಪದ ಮೇಲೆ 'ದೇಟಾಲ್ ನೆಟ್ ವರ್ಕ್ ಸಂಸ್ಥೆ' (ಜಿ–ನೆಟ್) ಮಾಲೀಕ ಅರುಣ್ ಕುಮಾರ್‌ನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

'ಕೃತ್ಯ ನಡೆದು 7 ಗಂಟೆಯೊಳಗೆ ಆರೋಪಿಗಳನ್ನು ಬಂಧಿಸಲಾಯಿತು. ಕಂಪನಿ ವ್ಯವಹಾರದ ದ್ವೇಷದಿಂದ ಆರೋಪಿಗಳು ಕೃತ್ಯ ಎಸಗಿದ್ದಾರೆ. ಕೃತ್ಯಕ್ಕೆ ಬಳಸಿದ ಕತ್ತಿ ಹಾಗೂ ಡ್ರ್ಯಾಗರ್ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಫಣೀಂದ್ರನೇ ಗುರಿ: 'ಆರೋಪಿಗಳು ಫಣೀಂದ್ರ ಅವರನ್ನೇ ಗುರಿಯಾಗಿಸಿ ಕೊಲೆ ಮಾಡಲು ಬಂದಿದ್ದರು. ಕಂಪನಿ ಪಾಲುದಾರ ವಿನುಕುಮಾರ್ ಅಡ್ಡ ಬಂದಿದ್ದರಿಂದ ಅವರ ಮೇಲೂ ಕತ್ತಿ ಬೀಸಿದ್ದರು. 6 ತಿಂಗಳ ಹಿಂದೆಯೇ ಕೊಲೆಗೆ ಸಂಚು ರೂಪಿಸಲಾಗಿತ್ತು. ಅದು ಸಾಧ್ಯವಾಗಿರಲಿಲ್ಲವೆಂದು ಆರೋಪಿಗಳು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.


ಫಿಲಿಕ್ಸ್


ವಿನಯ್ ರೆಡ್ಡಿ


ಸಂತೋಷ್


ಅರುಣ್ ಕುಮಾರ್

ಸಾಲದಲ್ಲಿ ಮುಳುಗಿದ್ದ 'ಜಿ–ನೆಟ್': 'ಆರಂಭದಲ್ಲಿ ಫಣೀಂದ್ರ, ವಿನು ಕುಮಾರ್, ಮಾರಾಟ ವಿಭಾಗದ ಹಿರಿಯ ವ್ಯವಸ್ಥಾಪಕ ಶಂಕರ ನಾರಾಯಣ ಸೇರಿದಂತೆ 12 ಮಂದಿ ಅರುಣ್‌ಕುಮಾರ್ ಮಾಲೀಕತ್ವದ 'ಜಿ–ನೆಟ್' ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಕಳೆದ ವರ್ಷದ ನವೆಂಬರ್‌ನಲ್ಲಿ ನವೋದ್ಯಮ ಕ್ಷೇತ್ರದಲ್ಲಿ ಸಾಧನೆ ಮಾಡುವ ಉದ್ದೇಶದಿಂದ ಫಣೀಂದ್ರ ಸೇರಿದಂತೆ ಹಲವರು ರಾಜೀನಾಮೆ ನೀಡಿ ಹೊಸ ಕಂಪನಿ ಸ್ಥಾಪಿಸಿದ್ದರು. ಕಂಪನಿಯ ವ್ಯವಹಾರ ದಿನದಿಂದ ದಿನಕ್ಕೆ ವೃದ್ಧಿಯಾಗುತ್ತಲೇ ಸಾಗಿತು. ಜಿ–ನೆಟ್ ಗ್ರಾಹಕರು ಏರೋನಿಕ್ಸ್ ಕಡೆಗೆ ಬರಲು ಆರಂಭಿಸಿದ್ದರು. ಇದರಿಂದ ಜಿ–ನೆಟ್ ನಷ್ಟಕ್ಕೆ ಸಿಲುಕಿತ್ತು. ಇದು ವೈಷಮ್ಯಕ್ಕೆ ಕಾರಣವಾಗಿತ್ತು. ಏರೋನಿಕ್ಸ್‌ನಿಂದ ಕೆಲಸ ಕಳೆದುಕೊಂಡಿದ್ದ ಫಿಲಿಕ್ಸ್‌ಗೆ ಅರುಣ್ ಕೊಲೆ ಮಾಡಲು ಸುಪಾರಿ ನೀಡಿದ್ದ ಎಂದು ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ಫಿಲಿಕ್ಸ್ ನೈಜ ಹೆಸರು ಶಬರೀಷ್

'ರೀಲ್ಸ್ ಸ್ಟಾರ್' ಫಿಲಿಕ್ಸ್ ಪೊಲೀಸರ ವಿಚಾರಣೆ ವೇಳೆ ವಿಚಿತ್ರವಾಗಿ ವರ್ತಿಸುತ್ತಿದ್ದಾನೆ. ವಿಚಾರಣೆಯಲ್ಲಿ ಕ್ಷಣಕ್ಕೊಂದು ಹೇಳಿಕೆ ನೀಡುತ್ತಿದ್ದಾನೆ. ಈತನ ನೈಜ ಹೆಸರು ಶಬರೀಶ್. ಆದರೆ, 'ಫಿಲಿಕ್ಸ್ ಜೋಕರ್' ಎಂದೇ ಕರೆಯುವಂತೆ ಎಲ್ಲರಿಗೂ ಬೆದರಿಕೆ ಹಾಕುತ್ತಿದ್ದ. ಕೃತ್ಯ ನಡೆದ ಮೇಲೆ 'ನಾನೇ ಕೊಲೆ ಮಾಡಿದ್ದು' ಎಂದು ಫಿಲಿಕ್ಸ್ ವಾಟ್ಸ್‌ಆ್ಯಪ್ ಸ್ಟೇಟಸ್ ಸಹ ಹಾಕಿಕೊಂಡಿದ್ದ.

ಕೃತ್ಯ ಎಸಗಿ ಮೂವರು ಕಚೇರಿಯ ಕಾಂಪೌಂಡ್ ಹಾರಿ ಪರಾರಿಯಾಗಿದ್ದರು. ಅಮೃತಹಳ್ಳಿಯಿಂದ ಕ್ಯಾಬ್ ಬುಕ್ ಮಾಡಿಕೊಂಡು ಮೆಜೆಸ್ಟಿಕ್ ತಲುಪಿದ್ದರು. ಅಲ್ಲಿಂದ ರೈಲು ಮೂಲಕ ಕುಣಿಗಲ್ ತಲುಪಿದ್ದರು. ಮೊಬೈಲ್ ಲೊಕೇಶನ್ ಆಧರಿಸಿ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಫಿಲಿಕ್ಸ್ ಮುಖ, ಮೈತುಂಬ ಟ್ಯಾಟು ಹಾಕಿಸಿಕೊಂಡಿದ್ದಾನೆ. ಅಲ್ಲದೇ ವಿಚಿತ್ರವಾಗಿ ರೀಲ್ಸ್ ಮಾಡುವುದೇ ಇವನ ಹವ್ಯಾಸ. ರೀಲ್ಸ್ ಮಾಡುವುದು ಹಾಗೂ ರಸ್ತೆಗಳಲ್ಲಿ ವಿಚಿತ್ರವಾಗಿ ವರ್ತಿಸುತ್ತಿದ್ದ. ಕತ್ತಿಗೆ ತುಂಬೆಲ್ಲಾ ನಕಲಿ ಆಭರಣ ಧರಿಸಿಕೊಂಡು ಓಡಾಟ ನಡೆಸುತ್ತಿದ್ದ. ಅದೇ ವೇಷಭೂಷಣದಲ್ಲಿ ಕೆಲಸಕ್ಕೂ ತೆರಳುತ್ತಿದ್ದ. ಈತನ ವೇಷಭೂಷಣದಿಂದಲೇ ಹಲವು ಕಡೆ ಕೆಲಸದಿಂದ ವಜಾ ಮಾಡಲಾಗಿತ್ತು ಎಂದು ಗೊತ್ತಾಗಿದೆ.

ಗಾಢ ನಿದ್ರೆಯಲ್ಲಿ ಸರ್ಕಾರ: ಬಿಜೆಪಿ

'ಶಾಂತಿಯ ಹೆಸರಲ್ಲಿ ಅರಾಜಕತೆ ಸೃಷ್ಟಿಸಿ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವುದೇ ಕಾಂಗ್ರೆಸ್ಸಿಗರ ಗುರಿ ಎನ್ನುವುದು ಇದೀಗ ಸಾಬೀತಾಗಿದೆ. ಕಾನೂನು ಸುವ್ಯವಸ್ಥೆ ಹದಗೆಟ್ಟು ಎಗ್ಗಿಲ್ಲದೆ ಕೊಲೆ ಸುಲಿಗೆಗಳ 'ಆ ದಿನಗಳು' ಮರುಕಳಿಸಿವೆ. ಡಬಲ್ ಮರ್ಡರ್ ಮಾಡಿ ಕೊಲೆಗಾರ ಸ್ಟೇಟಸ್ ಹಾಕಿಕೊಳ್ಳುತ್ತಿದ್ದರೂ ಸರ್ಕಾರವು ಗಾಢ ನಿದ್ರೆಯಲ್ಲಿದೆ' ಎಂದು ಬಿಜೆಪಿ ಟ್ವೀಟ್ ಮಾಡಿದೆ.

ಭೀಕರವಾಗಿ ಹತ್ಯೆ

'ಹಂತಕರು ಫಣೀಂದ್ರ ಅವರಿಗೆ ಹಲವು ಬಾರಿ ಇರಿದು ಕೊಲೆ ಮಾಡಿದ್ದಾರೆ. ಹಲ್ಲೆಯ ವೇಳೆ ವಿನುಕುಮಾರ್ ತಲೆ ಎರಡು ಭಾಗವಾಗಿದೆ. ಮಿದುಳು ಹೊರಬಂದಿದೆ' ಎಂದು ವೈದ್ಯರು ಹೇಳಿದ್ದಾರೆ.

'ಫಣೀಂದ್ರ ಅವರ ಮುಖ, ತಲೆ, ಬೆನ್ನು, ಎದೆ, ಹೊಟ್ಟೆ, ದೇಹದ ಇತರ ಭಾಗದಲ್ಲಿ ಗಂಭೀರ ಗಾಯಗಳಾಗಿದ್ದವು' ಎಂದು ಬಳ್ಳಾರಿ ರಸ್ತೆಯ ಮಣಿಪಾಲ್ ಆಸ್ಪತ್ರೆಯ ಮೂಲಗಳು ತಿಳಿಸಿವೆ.

'ಫಣೀಂದ್ರ ಅವರ ಜೀವ ಉಳಿಸಲು ಪ್ರಯತ್ನಪಟ್ಟೆವು. ತೀವ್ರ ರಕ್ತಸ್ರಾವವಾಗಿದ್ದರಿಂದ ಅದು ಸಾಧ್ಯವಾಗಲಿಲ್ಲ' ಎಂದು ವೈದ್ಯರು ಹೇಳಿದರು.

'ತೀವ್ರವಾಗಿ ಹಲ್ಲೆಗೊಳಗಾಗಿದ್ದ ವಿನುಕುಮಾರ್ ಅವರನ್ನು ಕರೆ ತಂದಾಗ ತಲೆಬುರುಡೆ ಎರಡು ಭಾಗವಾಗಿತ್ತು. ಮಿದುಳು ಹೊರಬಂದಿತ್ತು ಎಂದು ಆಸ್ಟರ್ ಸಿಎಂಐ ಆಸ್ಪತ್ರೆ ಮೂಲಗಳು ತಿಳಿಸಿವೆ.

ಚಿಕಿತ್ಸೆ ನೀಡಿದರೂ ಅವರು ಬದುಕುಳಿಯಲಿಲ್ಲ. ದೇಹದ ಬೇರೆ ಭಾಗಗಳಿಗೆ ಯಾವುದೇ ಗಾಯಗಳಾಗಿರಲಿಲ್ಲ' ಎಂದು ವೈದ್ಯರು ಹೇಳಿದರು.

ಹುಡುಗಿ ವಿಚಾರಕ್ಕೂ ಬೆದರಿಕೆ ಹಾಕಿದ್ದ ಫಿಲಿಕ್ಸ್

'ಜಿ–ನೆಟ್‌ನಲ್ಲಿ ಕೆಲಸ ಮಾಡುವಾಗ ಫಿಲಿಕ್ಸ್ ಸಲುಗೆಯಿಂದ ಇದ್ದ ಯುವತಿಯ ಜೊತೆಗೆ ಫಣೀಂದ್ರ ಅವರು ಸ್ನೇಹ ಬೆಳೆಸಿದ್ದರು. ಇದು ಫಿಲಿಕ್ಸ್‌ಗೆ ಕೋಪ ತರಿಸಿತ್ತು. ಈ ವಿಚಾರದಲ್ಲಿ ಜಗಳವೂ ನಡೆದಿತ್ತು. 'ನನ್ನ ಹುಡುಗಿಯ ವಿಚಾರಕ್ಕೆ ಬಂದರೆ ಮುಗಿಸಿಬಿಡ್ತೀನಿ...' ಎಂದು ಫಿಲಿಕ್ಸ್ ಬೆದರಿಕೆಯೊಡ್ಡಿದ್ದ.

'ಎಲ್ಲವೂ ಸರಿಹೋದ ಮೇಲೆ ಜಿ–ನೆಟ್‌ಗೆ ರಾಜೀನಾಮೆ ನೀಡಿ ಏರೋನಿಕ್ಸ್‌ಗೆ ಸೇರಿಕೊಂಡಿದ್ದ. ಅಲ್ಲಿ ಈತನ ವರ್ತನೆ ಕಂಡು ಕೆಲಸದಿಂದ ವಜಾ ಮಾಡಲಾಗಿತ್ತು. ಫಿಲಿಕ್ಸ್‌ನ ದ್ವೇಷವು ಮತ್ತಷ್ಟು ಹೆಚ್ಚಾಗಿತ್ತು. ಇದನ್ನೇ ಅರುಣ್‌ಕುಮಾರ್ ದಾಳವಾಗಿ ಬಳಸಿಕೊಂಡಿರುವ ಸಾಧ್ಯತೆಯಿದೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಚೀನಾ ಆ್ಯಪ್ ಮೂಲಕ ಸಾಲ: ಕಿರುಕುಳ ಆರೋಪ, ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಚೀನಾ ಆ್ಯಪ್ ಮೂಲಕ ಸಾಲ ಪಡೆದಿದ್ದ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಜಾಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಎಚ್‌ಎಂಟಿ ಬಡಾವಣೆಯಲ್ಲಿ ಘಟನೆ ನಡೆದಿದೆ.


ತೇಜಸ್

ಯಲಹಂಕದ ನಿಟ್ಟೆ ಮೀನಾಕ್ಷಿ ಕಾಲೇಜಿನ ತೇಜಸ್ (22) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ.

'ಆರನೇ ಸೆಮಿಸ್ಟಾರ್ ಓದುತ್ತಿದ್ದ. ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಕಾಲೇಜಿಗೆ ಟಾಪರ್ ಆಗಿದ್ದ. ತನ್ನ ಸ್ನೇಹಿತ ಮಹೇಶ್‌ಗಾಗಿ ಸ್ಲೈಸ್ ಪೇ, ಕಿಸಾತ್ ಹಾಗೂ ಕೋಟಕ್ ಮಹೀಂದ್ರಾ ಮೂಲಕ ಸಾಲ ಪಡೆದಿದ್ದ. ಆದರೆ, ಕಳೆದ ಒಂದು ವರ್ಷದಿಂದ ಸ್ನೇಹಿತ ಮಹೇಶ್ ಇಎಂಐ ಕಟ್ಟಲಿಲ್ಲ. ಸಾಲ ನೀಡಿದವರು ವಿಪರೀತ ಕಿರುಕುಳ ನೀಡುತ್ತಿದ್ದರಂತೆ. ಹಾಗಾಗಿ, ಡೆತ್ ನೋಟ್ ಬರೆದಿಟ್ಟು ಮಂಗಳವಾರ ಸಂಜೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸಾವಿಗೂ ಮುನ್ನ ಡೆತ್‌ನೋಟ್ ಬರೆದಿದ್ದಾನೆ. ಅಪ್ಪ, ಅಮ್ಮ, ನನ್ನನ್ನು ಕ್ಷಮಿಸಿ. ನಾನು ಮಾಡುವ ತಪ್ಪಿಗೆ ಬೇರೆ ದಾರಿ ಇಲ್ಲ. ಮಾಡಿರುವ ಸಾಲ ತೀರಿಸಲು ಆಗುವುದಿಲ್ಲ. ಇದು ನನ್ನ ಕೊನೆ ತೀರ್ಮಾನ' ಎಂದು ಬರೆದು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಜಾಲಹಳ್ಳಿ ಪೊಲೀಸ್ ಠಾಣೆಗೆ ತೇಜಸ್ ಪೋಷಕರು ದೂರು ನೀಡಿದ್ದಾರೆ.

ಇಬ್ಬರು ಶಿಕ್ಷಕರ ಅಮಾನತು

ಕಲಬುರಗಿ: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಕರ್ತವ್ಯಲೋಪದ ಆಪಾದನೆಯಡಿ ಚಿತ್ತಾಪುರ ತಾಲ್ಲೂಕಿನಲ್ಲಿ ಮುಖ್ಯಶಿಕ್ಷಕ ಮತ್ತು ಸಹಶಿಕ್ಷಕರನ್ನು ಅಮಾನತು ಮಾಡಲಾಗಿದೆ.

ಬಾಡಿಗೆ ಶಿಕ್ಷಕಿ ನೇಮಿಸಿಕೊಂಡು ಮಕ್ಕಳಿಗೆ ಪಾಠ ಮಾಡಿಸಿದ ಪ್ರಕರಣ ಸಂಬಂಧ ಚಿತ್ತಾಪುರ ತಾಲ್ಲೂಕಿನ ಭಾಲಿನಾಯಕ ತಾಂಡಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕ ಮಹೇಂದ್ರ ಕುಮಾರ ಅವರನ್ನು ಅಮಾನತು ಮಾಡಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ಧವೀರಯ್ಯ ರುದನೂರು ಆದೇಶಿಸಿದ್ದಾರೆ.

'ಬಾಡಿಗೆ ಶಿಕ್ಷಕಿ ಮೂಲಕ ಪಾಠ' ವರದಿಯು 'ಪ್ರಜಾವಾಣಿ'ಯ ಜು.9ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಈ ವರದಿ ಆಧರಿಸಿ ನೀಡಿದ ನೋಟಿಸ್‌ಗೆ ಶಿಕ್ಷಣ ಇಲಾಖೆಗೆ ಸ್ಪಷ್ಟವಾದ ಸ್ಪಷ್ಟೀಕರಣ ನೀಡದ ಕಾರಣ ಮಹೇಂದ್ರ ಅವರನ್ನು ಅಮಾನತು ಮಾಡಲಾಗಿದೆ.

ಶಾಲಾ ಮಕ್ಕಳಿಗೆ ಬಿಸಿಯೂಟ ನೀಡದೆ ನಿರ್ಲಕ್ಷ್ಯ ವಹಿಸಿದ ಮತ್ತೊಂದು ಪ್ರಕರಣ ಸಂಬಂಧ ಚಿತ್ತಾಪುರ ತಾಲ್ಲೂಕಿನ ಸಕ್ಕುನಾಯಕ ತಾಂಡಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಗುರುನಾಥ ಚಿತ್ತಗಿ ಅವರನ್ನು ಅಮಾನತು ಮಾಡಿ, ಡಿಡಿಪಿಐ ಸಕ್ರೆಪ್ಪಗೌಡ ಬಿರಾದಾರ ಆದೇಶಿಸಿದ್ದಾರೆ.

'ತಾಂಡಾ ಶಾಲೆಯ ಮಕ್ಕಳಿಗಿಲ್ಲ ಬಿಸಿಯೂಟ' ವರದಿಯು 'ಪ್ರಜಾವಾಣಿ'ಯ ಜುಲೈ 4ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಶಾಲೆ ಆರಂಭವಾಗಿ 35 ದಿನ ಕಳೆದಿದ್ದರೂ ಬಿಸಿಯೂಟ ಪೂರೈಸದ ಕಾರಣ ಅವರನ್ನು ಅಮಾನತು ಮಾಡಲಾಗಿದೆ.


ಶಾಸಕ ಎಸ್. ಮುನಿರಾಜು ಅವರು ಮಲ್ಲಸಂದ್ರದ ಕೆ.ಎನ್. ಸೋಮೇಶ್ವರ ಮಾಲೀಕತ್ವದ ನ್ಯಾಯಬೆಲೆ ಅಂಗಡಿ ಪರಿಶೀಲಿಸಿ, ಸಾರ್ವಜನಿಕರ ಅಹವಾಲು ಆಲಿಸಿದರು

ನ್ಯಾಯಬೆಲೆ ಅಂಗಡಿಗಳಲ್ಲಿ ದಬ್ಬಾಳಿಕೆ ಮಾಡಿದರೆ ಕ್ರಮ: ಮುನಿರಾಜು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಕೆಲವೊಂದು ನ್ಯಾಯಬೆಲೆ ಅಂಗಡಿಗಳಲ್ಲಿ ನಡೆಯುತ್ತಿರುವ ದೌರ್ಜನ್ಯ, ದಬ್ಬಾಳಿಕೆ, ಮೋಸ, ವಂಚನೆಯ ದೂರುಗಳು ಬಂದಿವೆ. ಬಡಜನರಿಗೆ ಅನ್ಯಾಯವಾಗಲು ಬಿಡುವುದಿಲ್ಲ. ದಬ್ಬಾಳಿಕೆ ಮಾಡಿದರೆ ಕ್ರಮ ಕೈಗೊಳ್ಳಲಾಗುವುದು' ಎಂದು ಶಾಸಕ ಎಸ್. ಮುನಿರಾಜು ಎಚ್ಚರಿಸಿದರು.

ಸಾರ್ವಜನಿಕರ ದೂರಿನ ಮೇರೆಗೆ ಮಲ್ಲಸಂದ್ರದ ಕೆ.ಎನ್. ಸೋಮೇಶ್ವರ ಮಾಲೀಕತ್ವದ ನ್ಯಾಯಬೆಲೆ ಅಂಗಡಿಗಳಲ್ಲಿ ಪರಿಶೀಲನೆ ನಡೆಸಿದ ಬಳಿಕ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

'ಈ ಅಂಗಡಿಯಲ್ಲೇ ಖರೀದಿಸಬೇಕು. ಇಲ್ಲದೇ ಇದ್ದರೆ ರೇಷನ್ ಕಾರ್ಡ್ ವಜಾ ಮಾಡಲಾಗುವುದು ಎಂದು ದಬ್ಬಾಳಿಕೆ ಮಾಡುತ್ತಾರೆ. ಎಲ್ಲ ವಸ್ತು ಖರೀದಿಸದೇ ಇದ್ದರೆ ₹ 20 ವಸೂಲಿ ಮಾಡುತ್ತಾರೆ. ತಿಂಗಳಲ್ಲಿ ಎರಡು ದಿನ ಮಾತ್ರ ತೆರೆದು ಉಳಿದ ದಿನ ಆಹಾರ ಧಾನ್ಯ ಖಾಲಿ ಎಂದು ಅಂಗಡಿ ಬಂದ್ ಮಾಡುತ್ತಾರೆ. ಕಳೆದ ತಿಂಗಳು 30 ಕ್ವಿಂಟಲ್ ರಾಗಿಯನ್ನು ಬೇರೆಯವರಿಗೆ ಮಾರಿದ್ದಾರೆ ಎಂಬ ದೂರುಗಳು ಬಂದಿದ್ದವು' ಎಂದು ಮಾಹಿತಿ ನೀಡಿದರು.

'ಇಂತಹ ದೌರ್ಜನ್ಯಗಳಿಗೆ ಕಡಿವಾಣ ಹಾಕಲು ತೂಕ, ಆಹಾರಧಾನ್ಯ ಪರಿಶೀಲಿಸಿ ಕ್ರಮ ಜರುಗಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ತಿಳಿಸಿದರು.

ಆಹಾರ ನಿರೀಕ್ಷಕ ಮಹಾಂತೇಶ್ ಗೌಡ, ಆಹಾರ ಶಿರಸ್ತೆದಾರ ಎನ್. ರಾಮು ಮತ್ತು ಕಾನೂನು ಮಾಪನ ಶಾಸ್ತ್ರ ಇಲಾಖೆಯ ನಿರೀಕ್ಷಕ ಬಿ.ಎಚ್. ಆನಂದ್ ಕುಮಾರ್ ಇದ್ದರು.

ಮೂವರು ಸುಲಿಗೆಕೋರರ ಬಂಧನ

ಬೆಂಗಳೂರು: ಕಾಮಾಕ್ಷಿಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ವಿವಿಧೆಡೆ ಸುಲಿಗೆ ಮಾಡುತ್ತಿದ್ದ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

'ಬಂಧಿತರಿಂದ ₹ 4 ಲಕ್ಷ ನಗದು ಹಾಗೂ ಬೈಕ್ ಅನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಹೆಗ್ಗನಹಳ್ಳಿ ಕ್ರಾಸ್ ಬಳಿ ಪಾನ್ ಮಸಾಲ ಪದಾರ್ಥಗಳನ್ನು ಅಂಗಡಿಗಳಿಗೆ ಪೂರೈಸುವ ವೇಳೆ ದ್ವಿಚಕ್ರ ವಾಹನದಲ್ಲಿ ಬಂದು ಚಾಕು ತೋರಿಸಿ ಬೆದರಿಸಿ ನಗದು ಸುಲಿಗೆ ಮಾಡಿ ಪರಾರಿಯಾಗಿದ್ದರು' ಎಂದು ಪೊಲೀಸರ ಹೇಳಿದರು.

ಆ.4ರಿಂದ ಫಲಪುಷ್ಪ ಪ್ರದರ್ಶನ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ವತಿಯಿಂದ ಆಗಸ್ಟ್ 4ರಿಂದ 15ರ ವರೆಗೆ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನವನ್ನು ಆಯೋಜಿಸಲಾಗಿದ್ದು, ಈ ಬಾರಿ ಕೆಂಗಲ್ ಹನುಮಂತಯ್ಯ ಅವರ ಹೂವಿನ ಪ್ರತಿಕೃತಿ ಆಕರ್ಷಣೆಯಾಗಿರಲಿದೆ.

ವಿಧಾನಸೌಧ ನಿರ್ಮಾಣ ಸೇರಿದಂತೆ ಕರ್ನಾಟಕಕ್ಕೆ ಸಾಕಷ್ಟು ಕೊಡುಗೆ ನೀಡಿದ ಕೆಂಗಲ್ ಹನುಮಂತಯ್ಯ ಅವರ ಸಾಧನೆ ಬಿಂಬಿಸುವ ಮಾಹಿತಿಗಳು ಈ ಬಾರಿ ಪುಷ್ಪಗಳಲ್ಲಿ ಅರಳಲಿವೆ. ಕನ್ನಡ ನಾಡಿನ ಇತಿಹಾಸದ ಬಗ್ಗೆ ಅರಿವು ಮೂಡಿಸುವ ಕಲಾಕೃತಿಗಳನ್ನು ರಚಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಅಲಂಕಾರಿಕ ತೋಟಗಳ ಸ್ಪರ್ಧೆ, ಇಕೆಬಾನ, ಥಾಯ್ ಆರ್ಟ್ ಸೇರಿ ಇತರೆ ಪೂರಕ ಕಲೆಗಳಿಗೆ ಸಂಬಂಧಿಸಿದ ಸ್ಪರ್ಧೆಗಳಲ್ಲಿ ಭಾಗವಹಿಸುವ ಆಸಕ್ತರು ತೋಟಗಾರಿಕೆ ಇಲಾಖೆಗೆ ಸಂಪರ್ಕಿಸಬೇಕು ಎಂದು ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗೆ: ಇಕೆಬಾನ (6364 037030), ಅಲಂಕಾರಿಕ ತೋಟ (9980276242), ಇಲಾಖಾ ಮಳಿಗೆ(9008350699).

ಲಾರಿ ಕಳವು: ಆರೋಪಿ ಸೆರೆ

ಬೆಂಗಳೂರು: ಲಾರಿಗಳನ್ನು ಕಳವು ಮಾಡಿದ್ದ ಆರೋಪಿಯನ್ನು ವಿವಿಪುರಂ ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ ₹ 1.5 ಕೋಟಿ ಮೌಲ್ಯದ ಲಾರಿಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ.

ನಗರದ ಚಾಮರಾಜಪೇಟೆಯಲ್ಲಿ ನಿಲುಗಡೆ ಮಾಡಿದ್ದ ಲಾರಿಯನ್ನು ತಮಿಳುನಾಡಿನ ಮುತ್ತುರಾಜ್ (45) ಕಳವು ಮಾಡಿದ್ದ.

ಮುತ್ತುರಾಜ್ ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಐಷಾರಾಮಿ ಜೀವನ ನಡೆಸಲು ಲಾರಿ ಕಳ್ಳತನಕ್ಕೆ ಇಳಿದಿದ್ದ. ತಮಿಳುನಾಡಿನಲ್ಲಿರುವ ತನ್ನ ಸಹಚರರಿಗೆ ಲಾರಿ ಮಾರಾಟ ಮಾಡುತ್ತಿದ್ದ. ಕದ್ದ ಲಾರಿಯ ಎಂಜಿನ್ ನಂಬರ್, ಚಾಸಿಸ್ ನಂಬರ್ ಬದಲಾಯಿಸಿದರೆ, ಮತ್ತೊಬ್ಬ ಸಹಚರ ದಾಖಲಾತಿ ಸಿದ್ಧಪಡಿಸಿ ಮಾರಾಟ ಮಾಡುತ್ತಿದ್ದ. ಬಂದ ಹಣದಲ್ಲೂ ಮೂವರು ಹಂಚಿಕೊಳ್ಳುತ್ತಿದ್ದರು. ಆ ಹಣದಿಂದ ಮೋಜು ಮಸ್ತಿ ಮಾಡುತ್ತಿದ್ದರು.

ಹರಿಪಾಲ ಅವರು ಚಾಮರಾಜಪೇಟೆಯಲ್ಲಿ ಲಾರಿ ನಿಲುಗಡೆ ಮಾಡಿದ್ದರು. ಇತ್ತ ತಮಿಳುನಾಡಿನಿಂದ ಲಾರಿ ಕದಿಯಲೆಂದು ಬೆಂಗಳೂರಿಗೆ ಬಂದಿದ್ದ ಮುತ್ತುರಾಜ್ ಚಾಮರಾಜಪೇಟೆಯಲ್ಲಿ ನಿಲುಗಡೆ ಮಾಡಿದ್ದ ಲಾರಿ ಗಮನಿಸಿದ್ದ. ಬಳಿಕ ನಕಲಿ ಕೀ ಬಳಸಿ ಲಾರಿ ಸ್ಟಾರ್ಟ್ ಮಾಡಿ ಹೊಸೂರು ಮಾರ್ಗವಾಗಿ ಚೆನ್ನೈಗೆ ತೆರಳಿದ್ದ ಎಂದು ಪೊಲೀಸರು ತಿಳಿಸಿದರು.

ಕಂಬಕ್ಕೆ ಬೈಕ್ ಡಿಕ್ಕಿ: ಇಬ್ಬರ ಸಾವು

ಬೆಂಗಳೂರು: ಸುಂಕದಕಟ್ಟೆ ಬಳಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಬೈಕ್ ಸವಾರ ಹಾಗೂ ಹಿಂಬದಿಯ ಸವಾರ ಮಂಗಳವಾರ ರಾತ್ರಿ ಮೃತಪಟ್ಟಿದ್ದಾರೆ.

ಅಂಜನಾನಗರದ ನಿವಾಸಿಗಳಾದ ಎಂ. ಮೋಹನ್ ಕುಮಾರ್ (21) ಹಾಗೂ ಎಚ್.ಎನ್.ಚಂದ್ರು (21) ಮೃತಪಟ್ಟವರು. 'ಇಬ್ಬರೂ ಹೆಲ್ಮೆಟ್ ಧರಿಸದೇ ಬಜಾಜ್ ಪಲ್ಸರ್ ಬೈಕ್‌ನಲ್ಲಿ ತೆರಳುತ್ತಿದ್ದರು. ಮಾಗಡಿ ರೋಡ್ ಮುಖ್ಯರಸ್ತೆಯ ನೈಸ್ ರಸ್ತೆಯ ಕಡೆಯಿಂದ ಸುಂಕದಕಟ್ಟೆ ಕಡೆಗೆ ಹೋಗುವಾಗ ಕಾಲೇಜು ಗೇಟ್‌ನ ಬಸ್ ನಿಲ್ದಾಣದ ಬಳಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಅತಿವೇಗದ ಚಾಲನೆಯೇ ಘಟನೆಗೆ ಕಾರಣ' ಎಂದು ಪೊಲೀಸರು ತಿಳಿಸಿದ್ದಾರೆ.

ಸರ್ಕಾರಿ ಶಾಲೆಗೆ ₹ 8 ಲಕ್ಷದ ಪೀಠೋಪಕರಣ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಶಿಕ್ಷಣ, ಆರೋಗ್ಯ, ತುಳಿತಕ್ಕೆ ಒಳಗಾದ ನೊಂದವರ ಸೇವೆಯಲ್ಲಿ ರೋಟರಿ ಸಂಸ್ಥೆಗಳು ತೊಡಗಿಸಿಕೊಂಡಿವೆ. ಮುಂದಿನ ದಿನಗಳಲ್ಲಿ ಕಾಡು ರಕ್ಷಣೆ ಜೊತೆಗೆ ಕಾಡು–ಪ್ರಾಣಿಗಳಿಗೆ ಬೇಸಿಗೆಯಲ್ಲಿ ಕುಡಿಯಲು ನೀರು ಸಿಗುವಂತಹ ಯೋಜನೆ ರೂಪಿಸಲಾಗುವುದು ಎಂದು ರೋಟರಿ 3192 ಜಿಲ್ಲಾ ಗವರ್ನರ್ ಎನ್.ಎಸ್. ಮಹದೇವಪ್ರಸಾದ್ ಹೇಳಿದರು.

ರೋಟರಿ ಬೆಂಗಳೂರು ವಿಶ್ವನೀಡಂ, ರೋಟರಿ ಅನಿಕೇತನ ಬೆಂಗಳೂರು ಇದರ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬಡತನದಲ್ಲಿಯೂ ದ್ವಿತೀಯ ಪಿಯು ವಿಜ್ಞಾನದಲ್ಲಿ ಶೇ 79.33 ಅಂಕ ಪಡೆದ ವಿದ್ಯಾರ್ಥಿನಿ ತನುಜಾ ಮತ್ತು ಅವರ ಸಹೋದರನಿಗೆ ಉನ್ನತ ಶಿಕ್ಷಣ ಪಡೆಯಲು ಪಠ್ಯಪುಸ್ತಕ, ಕಾಲೇಜು ಶುಲ್ಕ, ಸಮವಸ್ತ್ರ, ಬಟ್ಟೆ ಸೇರಿದಂತೆ ಎಲ್ಲ ಸೌಲಭ್ಯ ಒದಗಿಸಲು ದತ್ತು ಪಡೆದಿರುವುದಾಗಿ ಜಿಲ್ಲಾ ಗೌರ್ನರ್ ರೇಣುಕೇಶ್ವರಸ್ವಾಮಿ ಎಸ್.ಆರ್. ಘೋಷಿಸಿದರು.

ತೇಜಸ್ವಿನಿಯ ತಂದೆ ಊರೂರು ಸುತ್ತಿ ಹೇರ್‌ಪಿನ್ ಮಾರಾಟ ಮತ್ತು ತಲೆಗೂದಲು ಸಂಗ್ರಹಿಸಿ ಪಾಳುಮಂಟಪದಲ್ಲಿ ಜೀವನ ಸಾಗಿಸುತ್ತಿದ್ದಾರೆ ಎಂದರು.

ಅಂದ್ರಹಳ್ಳಿಯ ಸರ್ಕಾರಿ ಶಾಲೆಗೆ ರೋಟರಿ ವತಿಯಿಂದ ನೀಡಿದ ಸುಮಾರು ₹ 8 ಲಕ್ಷದ ಚೇರ್, ರೌಂಡ್ ಟೇಬಲ್‌ಗಳನ್ನು ಜಿಲ್ಲಾ ರೋಟರಿ ನಿರ್ದೇಶಕ ಕೆ.ಟಿ.ನಿರಂಜನ್ ವಿತರಿಸಿದರು.

ಬಡಮಕ್ಕಳಿಗೆ ಉಚಿತವಾಗಿ ಸಂಗೀತ ಕಲಿಸುತ್ತಿರುವ ಶಿಕ್ಷಕಿ ಹೇಮಾ ಪ್ರಕಾಶ್, ನಿವೃತ್ತ ಸೈನಿಕ ಟಿ.ಎಸ್. ಪ್ರಭುದೇವರು ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಕಾರ್ಯದರ್ಶಿ ವಿನೋದ್‌ಕುಮಾರ್, ವಿಭಾಗೀಯ ನಿರ್ದೇಶಕ ಮಹೇಂದ್ರ, ವಲಯ ಕಾರ್ಯದರ್ಶಿ ನಾರಾಯಣಸ್ವಾಮಿ, ನಿರ್ದೇಶಕರಾದ ರಾಜಶೇಖರ್, ಆರ್.ಡಿ. ಜಿ.ಶೇಖರ್, ಎ.ಟಿ. ಭರಣಿ ನಿರಂಜನ್, ಜ್ಯೋತಿ, ಹೇಮಾ, ಲಕ್ಷ್ಮಿದೇವಿ, ಸುಮಾ ಮಾತನಾಡಿದರು.

ಅನಿಕೇತನ ರೋಟರಿ 3192 ಜಿಲ್ಲಾ ಅಧ್ಯಕ್ಷ ರಾಮಚಂದ್ರಯ್ಯ ಸಿ.ಕೆ., ಕಾರ್ಯದರ್ಶಿ ಸಿದ್ದೇಶ್ ಯು.ಬಿ., ಖಜಾಂಚಿ ಎಲ್.ಸಿ. ರಾಜು, ರೋಟರಿ ವಿಶ್ವನೀಡಂ ಅಧ್ಯಕ್ಷ ಡಿ.ಜೆ. ಶಶಿಧರ್, ಕಾರ್ಯದರ್ಶಿ ಯತೀಂದ್ರ, ಖಜಾಂಚಿ ರಮಣಯ್ಯ ಅಧಿಕಾರ ಸ್ವೀಕರಿಸಿದರು.

ವೀರಶೈವ ಲಿಂಗಾಯತ ಮಹಾಸಭಾಕ್ಕೆ ಪರ್ಯಾಯ ಸಂಘಟನೆ

ಪ್ರಜಾವಾಣಿ ವಾರ್ತೆ

ತುಮಕೂರು: ವೀರಶೈವ ಲಿಂಗಾಯತ ಮಹಾಸಭಾದಲ್ಲಿ ಕೇವಲ ಉಳ್ಳವರು ಮಾತ್ರ ಇದ್ದಾರೆ. ಇದು ಬಡವರ ಸಂಘಟನೆಯಲ್ಲ ಎಂಬ ಆರೋಪವಿದೆ. ಇದೇ ಕಾರಣಕ್ಕೆ 'ಅಖಿಲ ಭಾರತೀಯ ವೀರಶೈವ ಲಿಂಗಾಯತ ಜಾಗೃತಿ ಸೇವಾ ಮಹಾಸಂಘ' ಸ್ಥಾಪಿಸಲಾಗಿದೆ ಎಂದು ಸಂಘದ ರಾಷ್ಟ್ರೀಯ ಅಧ್ಯಕ್ಷ ಹಾಲನೂರು ಎಸ್.ಲೇಪಾಕ್ಷ ಇಲ್ಲಿ ಬುಧವಾರ ಹೇಳಿದರು.

ನೂತನ ಸಂಘಟನೆಯಲ್ಲಿ ಈಗಾಗಲೇ ಮೂರುವರೆ ಸಾವಿರಕ್ಕೂ ಹೆಚ್ಚು ಸದಸ್ಯರು ನೋಂದಣಿ ಮಾಡಿಕೊಂಡಿದ್ದಾರೆ. ತುಳಿತಕ್ಕೆ ಒಳಗಾದ, ಬಡವರ ಧ್ವನಿಯಾಗಿ ಸಂಘಟನೆ ಕೆಲಸ ಮಾಡಲಿದೆ. ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ ಒಳಗೊಂಡಂತೆ ಇತರೆ ರಾಜ್ಯಗಳ ಸಮುದಾಯದ ಮುಖಂಡರು ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ನಿವೃತ್ತ ನೌಕರರ ಪತಿ, ಪತ್ನಿಗೆ ಉಚಿತ ಪ್ರಯಾಣದ ಅವಕಾಶಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನಿಗಮಗಳ ನಿವೃತ್ತ ನೌಕರರ ಪತಿ, ಪತ್ನಿಗೆ ನಿಗಮದ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಲು ಅವಕಾಶ ಮಾಡಿಕೊಡಬೇಕು ಎಂದು 'ಇಪಿಎಸ್–95 ಬೆಮಸಾ ಮತ್ತು ಕರಾಸಾ ನಿವೃತ್ತ ನೌಕರರ ಸಂಘ'ವು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರಿಗೆ ಮನವಿ ಮಾಡಿದೆ.

ಸಾರಿಗೆ ನಿಗಮಗಳಲ್ಲಿ 30–35 ವರ್ಷಗಳ ಕಾಲ ದುಡಿದು ನಿವೃತ್ತರಾಗಿರುವವರಿಗೆ ನಿವೃತ್ತಿ ವೇತನವು ₹ 1,000ದಿಂದ ₹ 3,000ವರೆಗೆ ಮಾತ್ರ ಬರುತ್ತಿದೆ. ಇದರಲ್ಲಿ ಜೀವನ ನಿರ್ವಹಣೆಯೇ ಕಷ್ಟವಾಗಿದೆ ಎಂದು ಸಂಘದ ಅಧ್ಯಕ್ಷ ಶಂಕರ್ ಕುಮಾರ್, ಕಾರ್ಯಾಧ್ಯಕ್ಷ ನಂಜುಂಡೇಗೌಡ, ಪ್ರಧಾನ ಕಾರ್ಯದರ್ಶಿ ಡೋಲಪ್ಪ ಮತ್ತು ಪದಾಧಿಕಾರಿಗಳು ಸಲ್ಲಿಸಿರುವ ಮನವಿಯಲ್ಲಿ ತಿಳಿಸಿದ್ದಾರೆ.

ಸಂಸ್ಥೆಯ ಎಲ್ಲ ನಿವೃತ್ತ ನೌಕರರ ಪತಿ ಅಥವಾ ಪತ್ನಿಗೆ ವಾರ್ಷಿಕವಾಗಿ ₹ 500 ಶುಲ್ಕ ಪಾವತಿಸಿ ಪ್ರಯಾಣಿಸಲು ಅನುವು ಮಾಡಿಕೊಡಲಾಗಿದೆ. ಈ ಶುಲ್ಕ ಪಾವತಿಸುವುದೂ ಕಷ್ಟವಾಗಿದೆ. ರಾಜ್ಯದಲ್ಲಿ ಹೊಸ ಸರ್ಕಾರವು ಅಸ್ತಿತ್ವಕ್ಕೆ ಬಂದ ಬಳಿಕ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿ ಜನಸಾಮಾನ್ಯರಿಗೆ ನೆರವಾಗುತ್ತಿದೆ. ಅದೇ ರೀತಿ ಸಾರಿಗೆ ನಿಗಮಗಳ ನಿವೃತ್ತ ನೌಕರರಿಗೂ ನೆರವಾಗಬೇಕು ಎಂದು ಮನವಿಯಲ್ಲಿ ಕೋರಿದ್ದಾರೆ.


'ಇಪಿಎಸ್–95 ಬೆಮಸಾ ಮತ್ತು ಕರಾಸಾ ನಿವೃತ್ತ ನೌಕರರ ಸಂಘ' ಅಧ್ಯಕ್ಷ ಶಂಕರ್ ಕುಮಾರ್, ಕಾರ್ಯಾಧ್ಯಕ್ಷ ನಂಜುಂಡೇಗೌಡ, ಪ್ರಧಾನ ಕಾರ್ಯದರ್ಶಿ ಡೋಲಪ್ಪ ಅವರು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರಿಗೆ ಮನವಿ ಸಲ್ಲಿಸಿದರು

ಅತ್ಯಾಚಾರ ಯತ್ನ ಆರೋಪ: ಪ್ರಕರಣ ರದ್ದತಿಗೆ ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕೀಲಿ ವೃತ್ತಿಗಾಗಿ ಕಚೇರಿಗೆ ಸೇರಿದ ಕಾನೂನು ವಿದ್ಯಾರ್ಥಿನಿ (ಇಂಟರ್ನಿ) ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಮಂಗಳೂರಿನ ವಕೀಲ ಕೆ.ಎಸ್.ಎನ್. ರಾಜೇಶ್ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಮಂಗಳೂರು ಮಹಿಳಾ ಠಾಣೆಯ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಮತ್ತು 3ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯದ ವಿಚಾರಣೆ ರದ್ದುಪಡಿಸುವಂತೆ ಕೋರಿ ರಾಜೇಶ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯ ಮನವಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ತಳ್ಳಿಹಾಕಿದೆ.

'ಪ್ರಶಿಕ್ಷಣಾರ್ಥಿಯಾಗಿ ವಕೀಲರ ಕಚೇರಿಗೆ ಸೇರಿದ ನಿಷ್ಕಪಟ ಮನಸ್ಸಿನ ಕಾನೂನು ವಿದ್ಯಾರ್ಥಿನಿಯೊಬ್ಬರ ಮೇಲೆ ಈ ರೀತಿಯ ಭಯಾನಕ ಕೃತ್ಯ ನಡೆಸಿದರೆ, ಅದು ಆಕೆಯ ವೃತ್ತಿ ಜೀವನದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಹಾಗಾಗಿ, ಆರೋಪಿ ಸಂಪೂರ್ಣ ವಿಚಾರಣೆ ಎದುರಿಸಿ, ದೋಷಮುಕ್ತನಾಗಿ ಬರಲಿ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.



ಪ್ರಕರಣವೇನು?: ಮಂಗಳೂರಿನ ಕಾನೂನು ಕಾಲೇಜೊಂದರಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿನಿ, ವಕೀಲ ರಾಜೇಶ್ ಅವರ ಕಚೇರಿಯಲ್ಲಿ ಇಂಟರ್ನ್‌ಶಿಪ್ ಮಾಡುತ್ತಿದ್ದರು. 'ನನ್ನ ಮೇಲೆ ರಾಜೇಶ್ ಅತ್ಯಾಚಾರಕ್ಕೆ ಯತ್ನಿಸಿದ್ದಲ್ಲದೆ, ಲೈಂಗಿಕ ಕಿರುಕುಳ ನೀಡಿದ್ದಾರೆ' ಎಂದು ಆರೋಪಿಸಿ ವಿದ್ಯಾರ್ಥಿನಿ ದೂರು ನೀಡಿದ್ದರು.

ಬೆಂಗಳೂರಿನಲ್ಲಿ ನರಿಗಳು ಸಭೆ ಸೇರುತ್ತಿವೆ: ಸಿ.ಟಿ. ರವಿ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: 'ದೇಶದ ಎಲ್ಲಾ ನರಿಗಳು ಇತ್ತೀಚೆಗೆ ಬಿಹಾರದ ಪಟ್ನಾದಲ್ಲಿ ಸಭೆ ಸೇರಿದ್ದವು. ಈಗ ಮತ್ತೆ ಬೆಂಗಳೂರಿನಲ್ಲಿ ಸಭೆ ಸೇರುತ್ತಿವೆ. ನರಿಗಳು ಎಂದೂ ಬೇಟೆಯಾಡುವುದಿಲ್ಲ. ಬೇಟೆಯಾಡಿದ್ದನ್ನು ಕದ್ದು ತಿಂದು ಕಾಲಕಳೆಯುತ್ತವೆ' ಎಂದು ಬಿಜೆಪಿ ರಾಷ್ಟ್ರೀಯ ಸಂಘಟನ ಕಾರ್ಯದರ್ಶಿ ಸಿ.ಟಿ. ರವಿ ಅವರು ವಿರೋಧ ಪಕ್ಷಗಳ ನಾಯಕರ ಸಭೆ ಕುರಿತು ವಾಗ್ದಾಳಿ ನಡೆಸಿದರು.

ಬುಧವಾರ ಗ್ರಾಮ ಪಂಚಾಯಿತಿ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಹಿಂದುತ್ವ ಪ್ರತಿಪಾದಕರು ಋಷಿ ಮುನಿಗಳು, ಸಾಧು ಸಂತರ ಬದುಕಿಗೆ ಕಾಂಗ್ರೆಸ್ ಪಕ್ಷ ಗ್ಯಾರಂಟಿ ನೀಡಬೇಕಿದೆ ಎಂದರು.

'ವಿಧಾನಸೌಧದಲ್ಲೇ ನಮಾಜ್ ಮಾಡಲು ಅವಕಾಶ ನೀಡುವಂತೆ ಶಾಸಕರೊಬ್ಬರು ಕೇಳಿದ್ದಾರೆ. ಕೆಂಗಲ್ ಹನುಮಂತಯ್ಯ ಅವರು ವಿಧಾನಸೌಧ ಕಟ್ಟಿಸಿದ್ದು ಆಡಳಿತ ನಡೆಸಲು ಹೊರತು ನಮಾಜ್ ಮಾಡಲು ಅಲ್ಲ' ಎಂದು ಹೇಳಿದರು.

ಬಿಸಿಲು–ಮಳೆಯಿಂದಾಗಿ ಡೆಂಗಿ ಜ್ವರಕ್ಕೆ ಒಳಗಾಗುವವರ ಸಂಖ್ಯೆ ಹೆಚ್ಚಳ

ಡೆಂಗಿ: 11 ದಿನಗಳಲ್ಲಿ 178 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬಿಸಿಲು–ಮಳೆಯಿಂದಾಗಿ ಡೆಂಗಿ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗಿದ್ದು, ಈ ತಿಂಗಳು 11 ದಿನಗಳಲ್ಲಿ 178 ಮಂದಿಗೆ ಡೆಂಗಿ ಜ್ವರ ದೃಢಪಟ್ಟಿದೆ.

ಕಳೆದೊಂದು ತಿಂಗಳಿಂದ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದೆ. ಈ ವರ್ಷ ಬಿಬಿಎಂಪಿ ವ್ಯಾಪ್ತಿಯಲ್ಲಿ 3,565 ಮಂದಿ ಡೆಂಗಿ ಶಂಕಿತರನ್ನು ಗುರುತಿಸಿ, ಅವರಲ್ಲಿ 1,009 ಮಂದಿಯ ರಕ್ತದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಈವರೆಗೆ ಒಟ್ಟು 905 ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 56 ಮಂದಿ ಶಂಕಿತರನ್ನು ಗುರುತಿಸಿ, 28 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷಿಸಲಾಗಿದೆ. ಅವರಲ್ಲಿ 14 ಮಂದಿಯಲ್ಲಿ ಈವರೆಗೆ ಜ್ವರ ದೃಢಪಟ್ಟಿದೆ. ಇದರಿಂದಾಗಿ ನಗರದಲ್ಲಿ ಈವರೆಗೆ ವರದಿಯಾದ ಡೆಂಗಿ ಪ್ರಕರಣಗಳ ಒಟ್ಟು ಸಂಖ್ಯೆ 919ಕ್ಕೆ ಏರಿಕೆಯಾಗಿದೆ. ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ.

ಕಳೆದ ವರ್ಷ ಈ ವೇಳೆ ಬಿಬಿಎಂಪಿ ವ್ಯಾಪ್ತಿಯಲ್ಲಿ 585 ಹಾಗೂ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 16 ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು.

ಚಿಕೂನ್‌ಗುನ್ಯಾ ಪ್ರಕರಣವೂ ಹೆಚ್ಚಳ: ಚಿಕೂನ್‌ಗುನ್ಯಾ ಜ್ವರಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ 415 ಮಂದಿ ರೋಗ ಶಂಕಿತರನ್ನು ಗುರುತಿಸಿ, 75 ಮಂದಿಗೆ ರಕ್ತದ ಮಾದರಿಯನ್ನು ಪರೀಕ್ಷಿಸಲಾಗಿದೆ. ಈವರೆಗೆ 34 ಚಿಕೂನ್‌ಗುನ್ಯಾ ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 162 ಮಂದಿ ರೋಗ ಶಂಕಿತರನ್ನು ಗುರುತಿಸಿ, 58 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷಿಸಲಾಗಿದೆ. 29 ಪ್ರಕರಣಗಳು ದೃಢಪಟ್ಟಿವೆ. ಕಳೆದ ವರ್ಷ ಈ ವೇಳೆ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 25 ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ 8 ಪ್ರಕರಣಗಳು ದೃಢಪಟ್ಟಿದ್ದವು.

'ಬಿಸಿಲು ಮಳೆಯಿಂದಾಗಿ ಡೆಂಗಿ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ. ಕೆಲವೆಡೆ ಮಳೆ ನೀರು ಹಾಗೇ ನಿಂತಿರುವುದರಿಂದ ಸೊಳ್ಳೆಗಳ ಉತ್ಪತ್ತಿ ಹೆಚ್ಚಳವಾಗಲಿದೆ. ಈಡಿಸ್ ಎಂಬ ಸೊಳ್ಳೆ ಕಡಿತದಿಂದ ಈ ಜ್ವರ ಬರಲಿದೆ. ಜನರಲ್ಲಿ ಸ್ವಚ್ಛತೆ ಬಗ್ಗೆ ಇರುವ ಅಸಡ್ಡೆ ಹಾಗೂ ಜಾಗೃತಿ ಕೊರತೆ ರೋಗ ಹೆಚ್ಚಳಕ್ಕೆ ಪ್ರಮುಖ ಕಾರಣ. ನೀರಿನ ತೊಟ್ಟಿಗಳು, ಟ್ಯಾಂಕ್‌ಗಳು ಮತ್ತು ಬ್ಯಾರಲ್‌ಗಳನ್ನು ಕನಿಷ್ಠ ಒಂದು ವಾರಗಳಿಗೊಮ್ಮೆ ಸ್ವಚ್ಛಗೊಳಿಸಿ, ಮುಚ್ಚಿಡಬೇಕು. ಮಳೆ ನೀರು ಸಂಗ್ರಹವಾಗುವ ವಾಹನಗಳ ಚಕ್ರಗಳು, ತೆಂಗಿನ ಚಿಪ್ಪುಗಳನ್ನು ವಿಲೇವಾರಿ ಮಾಡಬೇಕು' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಡೆಂಗಿಯಿಂದ ಕಾನ್‌ಸ್ಟೆಬಲ್ ಸಾವು

ಬೆಂಗಳೂರು: ಡೆಂಗಿಯಿಂದ ಕಾನ್‌ಸ್ಟೆಬಲ್ ಪವನ್‌ಕುಮಾರ್ (30) ಅವರು ಬುಧವಾರ ಮೃತಪಟ್ಟಿದ್ದಾರೆ.


ಪವನ್ ಕುಮಾರ್

ಚಿತ್ರದುರ್ಗದ ಪವನ್ ಅವರು ಕಮಿಷನರ್ ಕಚೇರಿಯ ಕಮಾಂಡ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. 2018ರ ಬ್ಯಾಚ್‌ನ ಕಾನ್‌ಸ್ಟೆಬಲ್ ಆಗಿದ್ದ ಇವರು, ಮೊದಲು ಕಲಾಸಿಪಾಳ್ಯ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಬಳಿಕ ಕಮಿಷನರ್ ಕಚೇರಿಗೆ ವರ್ಗಾವಣೆಗೊಂಡಿದ್ದರು. ಪವನ್ ಅವರ ಪತ್ನಿ ಸಹ ಪೊಲೀಸ್ ಇಲಾಖೆಯಲ್ಲಿ ಕಾನ್‌ಸ್ಟೆಬಲ್ ಆಗಿದ್ದಾರೆ.

ಜ್ವರದಿಂದ ಬಳಲುತ್ತಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಡೆಂಗಿ ಇರುವುದು ದೃಢಪಟ್ಟಿತ್ತು ಎಂದು ಮೂಲಗಳು ತಿಳಿಸಿವೆ.

ಕಡಿಮೆ ಅಂಕ: ವಿದ್ಯಾರ್ಥಿ ಆತ್ಮಹತ್ಯೆ

ಶಿಡ್ಲಘಟ್ಟ: ಸಿಇಟಿ ಅರ್ಹತಾ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದಿದ್ದಕ್ಕೆ ಬೇಸತ್ತ ನಗರದ ವಿದ್ಯಾರ್ಥಿಯೊಬ್ಬ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಶಿಡ್ಲಘಟ್ಟ ನಗರದ ಮಹಬೂಬ್ ನಗರದ ವಾಸಿ ನಯಾಜ್ ಪಾಷ(18) ನಲ್ಲಿಮರದಹಳ್ಳಿ ಬಳಿಯ ಅಮ್ಮನಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಶಿಡ್ಲಘಟ್ಟ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಮಹಾವೀರ್ ಲಿಂಬ್ ಸೆಂಟರ್‌ನ ಅಧ್ಯಕ್ಷ ಮಹೇಂದ್ರ ಸಿಂಘಿ ಅವರು ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿದರು. ಪದಾಧಿಕಾರಿಗಳು ಇದ್ದಾರೆ.

'ಜೈನ ಸಾಧುಗಳಿಗೆ ಪೊಲೀಸ್ ರಕ್ಷಣೆ ಒದಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೈನ ಸಾಧು, ಸಂತರು ಕಾಲುನಡಿಗೆಯಲ್ಲಿ ವಿಹಾರ ಕೈಗೊಂಡಾಗ ಅವರಿಗೆ ಸೂಕ್ತ ಪೊಲೀಸ್ ರಕ್ಷಣೆ ಒದಗಿಸಬೇಕು' ಎಂದು ಅಖಿಲ ಭಾರತ ಜೈನ್ ಯೂಥ್ ಫೆಡರೇಷನ್‌ನ ಮಹಾವೀರ್ ಲಿಂಬ್ ಸೆಂಟರ್ ಆಗ್ರಹಿಸಿದೆ.

ಈಬಗ್ಗೆಸೆಂಟರ್‌ನಪದಾಧಿಕಾರಿಗಳು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಬುಧವಾರ ಮನವಿ ಸಲ್ಲಿಸಿದರು.

'ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿಯ ಕಾಮಕುಮಾರ ನಂದಿ ಮಹಾರಾಜರ ಹತ್ಯೆಯನ್ನು ಜೈನ ಸಮಾಜವು ಬಲವಾಗಿ ಖಂಡಿಸುತ್ತದೆ. ಈ ಘಟನೆಯಿಂದ ನಮ್ಮ ಸಮಾಜವು ಅಸುರಕ್ಷತೆಯಿಂದ ಭಯಭೀತವಾಗಿದೆ. ಸರ್ವರ ಹಿತವನ್ನು ಬಯಸುವ, ಶಾಂತಿ, ಅಹಿಂಸೆ, ಪ್ರೇಮದ ಭಾವನೆಯನ್ನು ನಾಡಿಗೆ ಸಾರುತ್ತಿರುವ ಜೈನ ಸಮಾಜದ ಮೇಲೆ, ಸಾಧುಗಳ ಮೇಲೆ ನಡೆದಿರುವ ಈ ಆಕ್ರಮಣ ಖಂಡನೀಯ. ದೇಶ ವಿದೇಶದಲ್ಲಿರುವ ಜೈನ ಸಮುದಾಯವು ಸಾಧು, ಸಾಧ್ವಿಗಳ ಅಭದ್ರತೆಯ ಕುರಿತು ಭಯದಿಂದ ತತ್ತರಿಸಿದೆ' ಎಂದು ಕೇಂದ್ರದ ಅಧ್ಯಕ್ಷ ಮಹೇಂದ್ರ ಸಿಂಘಿ ಕಳವಳ ವ್ಯಕ್ತಪಡಿಸಿದ್ದಾರೆ.

'ಜೈನ ಸಾಧುಗಳ ವಿಹಾರ ಸಂದರ್ಭದಲ್ಲಿ ಅವರ ವಾಸ್ತವ್ಯಕ್ಕಾಗಿ ರಾತ್ರಿ ತಂಗಲು ಶಾಲೆ–ಕಾಲೇಜು ಅಥವಾ ಸರ್ಕಾರಿ ಪ್ರವಾಸಿ ಕೇಂದ್ರಗಳಲ್ಲಿ ವಸತಿ ವ್ಯವಸ್ಥೆ ಕಲ್ಪಿಸಬೇಕು. ಜೈನ ತೀರ್ಥಸ್ಥಳಗಳು, ಮಂದಿರಗಳ ಮೇಲೆ ನಡೆಯುವ ಅತಿಕ್ರಮಣ ದಬ್ಬಾಳಿಕೆಗಳನ್ನು ತಡೆಯಬೇಕು. ಜೈನ ಸಮುದಾಯದ ಕಲ್ಯಾಣ ಮತ್ತು ಯೋಗಕ್ಷೇಮಕ್ಕಾಗಿ ಜೈನ ಅಲ್ಪಸಂಖ್ಯಾತರ ಅಭಿವೃದ್ಧಿ ಮಂಡಳಿಯನ್ನು ರಚಿಸಲು ಸರ್ಕಾರಕ್ಕೆ ಸೂಚನೆ ನೀಡಬೇಕು' ಎಂದು ಮನವಿ ಪತ್ರದಲ್ಲಿ ಆಗ್ರಹಿಸಿದ್ದಾರೆ.


ಸುದ್ದಿ 2 ನಿಮಿಷ

ಅಂಚೆ ಕಚೇರಿ ಸೇವಾವಧಿ ವಿಸ್ತರಣೆ

ಬೆಂಗಳೂರು: ಅಂಚೆ ಕಚೇರಿಗಳಲ್ಲಿ ಸೇವಾ ಅವಧಿಯನ್ನು ವಿಸ್ತರಣೆ ಮಾಡಲಾಗಿದೆ.

ಸಂಜೆ 5 ಗಂಟೆಗೆ ಕಚೇರಿ ಮುಕ್ತಾಯವಾಗುತ್ತಿದ್ದರೂ ನಗದು ಮತ್ತು ನಗದೇತರ ವ್ಯವಹಾರಗಳನ್ನು ಮಧ್ಯಾಹ್ನ 3 ಗಂಟೆಯ ಒಳಗೆ ಗ್ರಾಹಕರು ಮುಗಿಸಬೇಕಿತ್ತು. ನಗದು ವ್ಯವಹಾರವನ್ನು ಕಚೇರಿ ಮುಕ್ತಾಯಕ್ಕಿಂತ ಅರ್ಧ ಗಂಟೆ ಮೊದಲಿನ ವರೆಗೆ (ಸಂಜೆ 4.30ರವರೆಗೆ) ವಿಸ್ತರಿಸಲಾಗಿದೆ. ರಿಜಿಸ್ಟರ್ಡ್ ಪೋಸ್ಟ್, ಸ್ಪೀಡ್ ಪೋಸ್ಟ್, ಇಎಂಒ, ಐಪಿಒ, ಇ–ಮೇಮೆಂಟ್, ಬಿಲ್ ಪಾವತಿ, ಆಧಾರ್, ಸಿಎಸ್‌ಸಿ ವಹಿವಾಟು, ಪಿಎಲ್‌ಐ, ಆರ್‌ಪಿಎಲ್‌ಐ, ಅಂಚೆ ಚೀಟಿ, ಲೇಖನ ಸಾಮಗ್ರಿ ಮಾರಾಟ ಈ ಸಮಯದಲ್ಲಿ ನಡೆಯಲಿದೆ.

ನಗದೇತರ ವ್ಯವಹಾರಗಳಾದ ಉಲ್ಲೇಖ, ವಿಚಾರಣೆ, ಎಟಿಎಂ ಕಾರ್ಡ್ ವಿತರಣೆ, ಚೆಕ್‌ಬುಕ್ ವಿತರಣೆ, ಪ್ಯಾನ್, ಆಧಾರ್, ಮೊಬೈಲ್ ಸಂಖ್ಯೆ, ವಿಳಾಸ ನವೀಕರಣ, ಇತರ ಸೌಲಭ್ಯಗಳನ್ನು ಪಡೆಯಲು ಕಚೇರಿ ಮುಕ್ತಾಯದವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಅಂಚೆ ಕಚೇರಿ ಬೆಂಗಳೂರು ಪಶ್ಚಿಮ ವಲಯದ ಅಧಿಕಾರಿಗಳು ತಿಳಿಸಿದ್ದಾರೆ.



'ಹಣ, ಅಧಿಕಾರವಿದ್ದರೆ ಮಾತ್ರ ಗೌರವ'

ಬೆಂಗಳೂರು: 'ಇಂದಿನ ಸಮಾಜವು ಕೇವಲ ಹಣ ಮತ್ತು ಅಧಿಕಾರವನ್ನು ಮಾತ್ರ ಗೌರವಿಸುತ್ತಿದೆ. ಪ್ರಾಮಾಣಿಕತೆಗೆ ಬೆಲೆಯೇ ಇಲ್ಲದಂತಾಗಿದೆ' ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಬೇಸರಿಸಿದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ (ಐಐಎಂಬಿ) ಸಾರ್ವಜನಿಕ ನೀತಿ ಕೇಂದ್ರದ (ಸಿಪಿಪಿ) ಸಂಸ್ಥಾಪನಾ ದಿನದ ಅಂಗ ವಾಗಿ ಆಯೋಜಿಸಿದ್ದ ಉಪನ್ಯಾಸ ಸರಣಿಯಲ್ಲಿ 'ಸಮಾಜದಲ್ಲಿ ಸಾಮಾಜಿಕ ಮೌಲ್ಯಗಳ ಕುಸಿತ ಮತ್ತು ಅದರ ಪರಿಣಾಮಗಳು' ಕುರಿತು ಅವರು ಮಾತನಾಡಿದರು.

'ವ್ಯಕ್ತಿಗಳನ್ನು ದೂಷಿಸಲು ಸಾಧ್ಯವಿಲ್ಲ. ಏಕೆಂದರೆ ತಪ್ಪು ಸಮಾಜದಲ್ಲಿಯೇ ಇದೆ. ಈ ಹಿಂದೆ, ಅಪರಾಧಿಗಳಿಗೆ ಸಾಮಾಜಿಕ ಬಹಿಷ್ಕಾರವಿತ್ತು. ನಮ್ಮನ್ನು ರೂಪಿಸುವಲ್ಲಿ ಕುಟುಂಬಗಳು, ಪೋಷಕರು ಮತ್ತು ನೈತಿಕ ವಿಜ್ಞಾನ ಶಿಕ್ಷಣದ ಪಾತ್ರ ಮಹತ್ವದ್ದಾಗಿತ್ತು. ಆದರೆ, ಇಂದು ಸಾಮಾಜಿಕ ರಚನೆಯೇ ಬದಲಾಗಿದೆ. ದುರದೃಷ್ಟವಶಾತ್, ಇಂದಿನ ಸಮಾಜವು ಕೇವಲ ಹಣ ಮತ್ತು ಅಧಿಕಾರವನ್ನು ಮಾತ್ರ ಗೌರವಿಸುತ್ತಿದೆ. ಪ್ರಾಮಾಣಿಕತೆಗೆ ಕೊನೆಯ ಸ್ಥಾನವಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಐಐಎಂ ಬೆಂಗಳೂರು ನಿರ್ದೇಶಕ ಪ್ರೊ.ಋಷಿಕೇಶ ಟಿ ಕೃಷ್ಣನ್, ಐಐಎಂ ಪ್ರಾಧ್ಯಾಪಕ ಗೋಪಾಲ್‌ನಾಯಕ್, ಪ್ರೊ. ಅನಿಲ್ ಬಿ. ಸೂರಜ್ ಇದ್ದರು.

ಪಿಟಿಸಿಎಲ್ ಕಾಯ್ದೆಗೆ ಕಾಲಮಿತಿ: ಖಂಡನೆ

ಬೆಂಗಳೂರು: ಪಿಟಿಸಿಎಲ್ ಕಾಯ್ದೆಯಡಿ ಅರ್ಜಿ ಸಲ್ಲಿಸಲು ಕಾಲಮಿತಿ ವಿಧಿಸುವ ಸರ್ಕಾರ ಧೋರಣೆಯು ಕಾಯ್ದೆಯ ಉದ್ದೇಶಕ್ಕೆ ವಿರುದ್ಧವಾಗಿದೆ ಎಂದು ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ, ಎಸ್‌ಸಿ–ಎಸ್‌ಟಿ ಪಿಟಿಸಿಎಲ್ ಕಾಯ್ದೆ ಭೂಮಿ ವಂಚಿತ ಹೋರಾಟ ಸಮಿತಿ ಪ್ರತಿಪಾದಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟದ ಅಧ್ಯಕ್ಷ ಬಸವರಾಜ್ ಕೌತಾಳ, 'ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಮಾಡುವಂತೆ ಕಳೆದ 6 ತಿಂಗಳಿಂದ ನಿರಂತರ ಹೋರಾಟ ಮಾಡಿದ್ದೇವೆ. ಇದರ ಪ್ರತಿಫಲವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಮಾಡುವ ಘೋಷಣೆ ಮಾಡಿದ್ದಾರೆ. ಆದರೆ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮಂಜೂರಾದ ಪುನರ್ ಸ್ಥಾಪಿಸುವುದಕ್ಕಾಗಿ ಮನವಿಸಲ್ಲಿಸಲು ಕಾಲಮಿತಿಯನ್ನು ಕಾಯ್ದೆಯಲ್ಲಿಯೇ ನಿಗದಿಪಡಿಸಿ, ತಿದ್ದುಪಡಿ ತಂದರೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಪಿಟಿಸಿಎಲ್ ಕಾಯ್ದೆ ಒಳಗೆ ಕಾಲಮಿತಿ ವಿಧಿಸಿದರೆ ಅದರ ಮೂಲ ಉದ್ದೇಶ ಹಾಗೂ ಸಂವಿಧಾನದ ಆಶಯಗಳಿಗೆ ಧಕ್ಕೆಯಾಗುತ್ತದೆ. ಇಂತಹ ವಿಶೇಷ ಕಾಯ್ದೆಗಳಿಗೆ ಕಾಲಮಿತಿ ಅನ್ವಯಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸಹ ಹೇಳಿದೆ. ಕಾಲಮಿತಿ ವಿಧಿಸಿದರೆ ಶೇ 5ರಷ್ಟು ಜನರಿಗೆ ಮಾತ್ರ ಅನುಕೂಲವಾಗುತ್ತದೆ. ಜತೆಗೆ, ಕಾಯ್ದೆ ಉಲ್ಲಂಘಿಸಿ ಕಾನೂನುಬಾಹಿರ ಭೂಮಿ ಕಬಳಿಸುವವರಿಗೆ ಅಧಿಕೃತ ಆದೇಶ ನೀಡದಂತಾಗುತ್ತದೆ. ಆದ್ದ ರಿಂದ, ಕಾಯ್ದೆಯಲ್ಲಿ ಕಾಲಮಿತಿ ನಿಗದಿ ಮಾಡಬಾರದು' ಎಂದು ಒತ್ತಾಯಿಸಿದರು.

ನಿಧನ ವಾರ್ತೆ

ಕೃಷ್ಣಪ್ಪ



ಬೆಂಗಳೂರು: ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ನಾಗೇಗೌಡನಪಾಳ್ಯ ನಿವಾಸಿ ಕೃಷ್ಣಪ್ಪ (59) ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಗುತ್ತಿಗೆದಾರರಿಗೆ ಡಿಸಿಎಂ ಭರವಸೆ • ಪ್ರತಿಭಟನೆ ನಿರ್ಧಾರ ಕೈಬಿಟ್ಟ ಸಂಘ

ಬಿಲ್ ಮೊತ್ತ ಬಿಡುಗಡೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರ ಅನುದಾನದಿಂದ ಪೂರ್ಣಗೊಂಡಿರುವ ಕಾಮಗಾರಿ ಹಾಗೂ ಬಿಬಿಎಂಪಿ ಅನುದಾನದ ಕಾಮಗಾರಿಗೆ ಕೂಡಲೇ ಹಣ ಬಿಡುಗಡೆ ಮಾಡಿಸುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿ ಗುತ್ತಿಗೆದಾರರ ಸಂಘದ ಸದಸ್ಯರಿಗೆ ಭರವಸೆ ನೀಡಿದ್ದಾರೆ.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರ ನೇತೃತ್ವದಲ್ಲಿ ಬಿಬಿಎಂಪಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಬುಧವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು. ಇದಕ್ಕೆ ಡಿಸಿಎಂ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಜುಲೈ 15ರಿಂದ ನಡೆಸಲು ನಿರ್ಧರಿಸಿದ್ದ ಪ್ರತಿಭಟನೆಯನ್ನು ಸಂಘ ಕೈಬಿಟ್ಟಿದೆ.

‘ಸರ್ಕಾರದ ನಗರೋತ್ಥಾನ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳ ಮೊತ್ತ ₹675 ಕೋಟಿಯಾಗಿದ್ದು, ಈ ಪಾವತಿಯನ್ನು ತಡೆಹಿಡಿಯಲಾಗಿದೆ. ಸರ್ಕಾರದ ಸುತ್ತೋಲೆಯಂತೆ ಈ ಹಣವನ್ನು ಬಿಬಿಎಂಪಿ ಆಯುಕ್ತರು ಬಿಡುಗಡೆ ಮಾಡಿಲ್ಲ. ಈ ಬಗ್ಗೆ ನಿರ್ದೇಶನ ನೀಡಬೇಕು ಎಂಬ ನಮ್ಮ ಮನವಿಗೆ ಉಪ ಮುಖ್ಯಮಂತ್ರಿಯವರು ಸಮ್ಮತಿಸಿದ್ದು, ಶೀಘ್ರವೇ ಬಿಡುಗಡೆ ಮಾಡಲಾಗುತ್ತದೆ ಎಂದು ತಿಳಿಸಿದರು’ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ಜಿ.ಎಂ. ರವೀಂದ್ರ ತಿಳಿಸಿದರು.



ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರ ನೇತೃತ್ವದಲ್ಲಿ ಬಿಬಿಎಂಪಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬುಧವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು

‘ನಮ್ಮ ಎರಡನೇ ಬೇಡಿಕೆಯಾದ, ಬಿಬಿಎಂಪಿ ಅನುದಾನದಡಿ ನಿರ್ವಹಿಸಲಾಗಿರುವ ಕಾಮಗಾರಿಗಳಿಗೆ ಏಪ್ರಿಲ್ 2021ರಿಂದ ಜೂನ್ 2023ರವರೆಗೆ ಬಿಲ್ ಪಾವತಿ ಬಾಕಿ ಉಳಿದಿದೆ. ಇದರಿಂದ ಗುತ್ತಿಗೆದಾರರಿಗೆ ಆರ್ಥಿಕವಾಗಿ ಸಮಸ್ಯೆಯಾಗಿದೆ. ಹೀಗಾಗಿ, ಏಪ್ರಿಲ್ 2021ರಿಂದ ಮಾರ್ಚ್ 2022ರವರೆಗೆ ಬಿಲ್ ಪಾವತಿಯನ್ನು ‘ಜನರಲ್ ಎಲ್‌ಒಸಿ’ ಮೂಲಕ ಬಿಡುಗಡೆ ಮಾಡಬೇಕು ಎಂದು ಕೋರಿದ್ದೆವು. ಅದಕ್ಕೂ ಶಿವಕುಮಾರ್ ಅವರು ಸ್ಪಂದಿಸಿದ್ದು, ಈ ವಾರದೊಳಗೆ ಹಣ ಬಿಡುಗಡೆ ಮಾಡುವ ಭರವಸೆ ನೀಡಿದರು’ ಎಂದು ಮಾಹಿತಿ ನೀಡಿದರು.

ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಅಂಬಿಕಾಪತಿ, ಪ್ರಧಾನ ಕಾರ್ಯದರ್ಶಿ ಜಿ.ಎಂ. ನಂದಕುಮಾರ್ ಅವರು ಡಿಸಿಎಂ ಭೇಟಿ ಸಂದರ್ಭದಲ್ಲಿ ಹಾಜರಿದ್ದರು.

ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ

‘ಇಂದಿರಾ ಕ್ಯಾಂಟೀನ್ ದುರಸ್ತಿಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ, ವಿಶ್ವನಾಥ ನಾಗೇನಹಳ್ಳಿ ವಾರ್ಡ್‌ಗಳಲ್ಲಿರುವ ಇಂದಿರಾ ಕ್ಯಾಂಟೀನ್‌ಗಳ ದುರಸ್ತಿ ಕೈಗೊಳ್ಳಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ಕ್ಯಾಂಟೀನ್‌ಗಳಿಗೆ ಬುಧವಾರ ಭೇಟಿ ನೀಡಿದ ಅವರು, ನಿರ್ವಹಣೆ ಹಾಗೂ ಆಹಾರದ ಗುಣಮಟ್ಟ ಪರಿಶೀಲಿಸಿದರು. ದೀಪದ ವ್ಯವಸ್ಥೆ, ಕೈ ತೊಳೆಯುವ ನೀರಿನ ಸೌಲಭ್ಯ ಹಾಗೂ ಶುದ್ಧ ಕುಡಿಯುವ ನೀರಿನ ಘಟಕ ಸರಿಪಡಿಸಬೇಕು. ನಾಮಫಲಕ, ಮೆಟ್ಟಿಲುಗಳನ್ನು ದುರಸ್ತಿ ಮಾಡಬೇಕು. ಶೌಚಾಲಯವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ತೆರೆಯಲು ಸಿಬ್ಬಂದಿಗೆ ಹೇಳಿದರು.

‘ಪ್ರತಿನಿತ್ಯವೂ ಅಕ್ಕಿಯಿಂದ ಮಾಡಿದ ಆಹಾರವನ್ನು ಮಾತ್ರ ನೀಡಲಾಗುತ್ತಿದೆ’ ಎಂದು ಸಾರ್ವಜನಿಕರು ದೂರಿದರು. ಆಹಾರದ ಮೆನು ಶೀಘ್ರ ಬದಲಾಗಲಿದ್ದು, ನಿತ್ಯ ಬೇರೆಬೇರೆ ತಿಂಡಿ–ಊಟದ ವ್ಯವಸ್ಥೆ ಇರಲಿದೆ ಎಂದು ತುಷಾರ್ ತಿಳಿಸಿದರು.

ಇಂದಿರಾ ಕ್ಯಾಂಟೀನ್‌ಗಳಿಗೆ ನಿಯೋಜಿಸಿರುವ ಮಾರ್ಷಲ್‌ಗಳಿಗೆ ಬೇರೆ ಜವಾಬ್ದಾರಿಯನ್ನೂ ನೀಡಲು ಜಂಟಿ ಆಯುಕ್ತರಿಗೆ ಸೂಚಿಸಿದರು. ಆಹಾರದ ಗುಣಮಟ್ಟ, ಹೆಚ್ಚು ಹಣ ಪಡೆಯುವ ವಿಚಾರವಾಗಿ ದೂರುಗಳಿದ್ದಲ್ಲಿ ಸಹಾಯವಾಣಿ 1533ಗೆ ದೂರು ನೀಡಬಹುದು ಎಂದರು.

ಪೂರ್ವ ವಲಯ ಜಂಟಿ ಆಯುಕ್ತೆ ಪಲ್ಲವಿ ಇದ್ದರು.



ಹೆಬ್ಬಾಳದಲ್ಲಿರುವ ಇಂದಿರಾ ಕ್ಯಾಂಟೀನ್‌ಗೆ ಭೇಟಿ ನೀಡಿದ್ದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸಾರ್ವಜನಿಕರಿಂದ ಮಾಹಿತಿ ಪಡೆದರು

ಮಂಡ್ಯ ಜಿಲ್ಲೆಯ ಶಾಸಕರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮನವಿ

ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಸೌಕರ್ಯ ಕಲ್ಪಿಸಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ನಡುವೆ ಸ್ಥಳೀಯರಿಗೆ ಅನುಕೂಲವಾಗುವಂತೆ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಮಂಡ್ಯ ಜಿಲ್ಲೆಯ ಶಾಸಕರಾದ ದಿನೇಶ್ ಗೂಳಿಗೌಡ, ರವಿಕುಮಾರ್ ಗಣಿಗ, ರಮೇಶ್ ಬಂಡಿಸಿದ್ದೇಗೌಡ ಅವರು ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಹೆದ್ದಾರಿಯಲ್ಲಿ ಬರುವ ಸೇವಾ ರಸ್ತೆಗಳು ಸೇರಿದಂತೆ ಕಾಮಗಾರಿಗಳು ಪೂರ್ಣಗೊಂಡಿಲ್ಲ. ಮೂಲ ಸೌಕರ್ಯ ಕಲ್ಪಿಸುವ ಮೊದಲೇ ಎರಡು ಕಡೆ ಟೋಲ್ ಸಂಗ್ರಹ ಮಾಡಲಾಗುತ್ತಿದೆ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ಮಾರ್ಚ್ ತಿಂಗಳಲ್ಲಿ ಸಂಚಾರಕ್ಕೆ ಮುಕ್ತ ಮಾಡಲಾಗಿದೆ. ಇದು ನಿಜಕ್ಕೂ ಜನರ ಜೇಬು ಸುಡುವ ರಹದಾರಿಯಾಗಿದೆ. ಈ ಮಾರ್ಗದಲ್ಲಿ ಜನರು ಟೋಲ್ ಶುಲ್ಕಕ್ಕೆ ಬಸವಳಿದಿದ್ದಾರೆ ಎಂದು ದೂರಿದರು.

ಶ್ರೀರಂಗಪಟ್ಟಣದಲ್ಲಿ ಜುಲೈ 1ರಿಂದ ಟೋಲ್ ಸಂಗ್ರಹ ಆರಂಭವಾಗಲಿದೆ. ಸಾಕಷ್ಟು ಕಾಮಗಾರಿಗಳು ಬಾಕಿ ಇವೆ. ಸೌಕರ್ಯ ಕಲ್ಪಿಸಲು ಆಗದೇ ಜನರಿಂದ ಹಣ ಪಡೆಯುತ್ತಿದ್ದಾರೆ. ಮಂಡ್ಯ ತಾಲ್ಲೂಕಿನ ಹನಕೆರೆ ಅಂಡರ್ ಪಾಸ್, ಹಳೇ ಬೂದನೂರು ಹಾಗೂ ಹೊಸ ಬೂದನೂರು ನಡುವಿನ ಸರ್ವಿಸ್ ರಸ್ತೆಗೆ ನಿರ್ಮಾಣ ಮಾಡುತ್ತಿರುವ ಸೇತುವೆ ಸೇರಿದಂತೆ ಹಲವು ಕಾಮಗಾರಿಗಳು ಅಪೂರ್ಣವಾಗಿವೆ. ಇನ್ನು ಹಲವು ಕಡೆ ಸರ್ವಿಸ್ ರಸ್ತೆ ಕಾಮಗಾರಿ ಸಹ ಪೂರ್ಣಗೊಂಡಿಲ್ಲ. ಈ ಹಂತದಲ್ಲಿ ಟೋಲ್ ಸಂಗ್ರಹ ಮಾಡುವುದು ಸರಿಯಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಡೆ ಖಂಡನಾರ್ಹ ಎಂದರು.

ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಲೋಕೋಪಯೋಗಿ, ಹೆದ್ದಾರಿ ಪ್ರಾಧಿಕಾರದ ಸಭೆ ಕರೆದು ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯಕಾರ್ಯದರ್ಶಿಗೆ ಸೂಚಿಸಿದರು.



ಪುಸ್ತಕ ಬಿಡುಗಡೆ...

ನಗರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಕರಣ್ ಲಾಡ್ ಅವರ (ಎಡದಿಂದ ಐದನೆಯವರು) ‘ಎ ಗ್ಲಿಚ್ ಇನ್ ದಿ ಸಿಮ್ಯುಲೇಷನ್’ ಪುಸ್ತಕವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಡುಗಡೆ ಮಾಡಿದರು. (ಎಡದಿಂದ) ಸಚಿವ ಸಂತೋಷ್ ಲಾಡ್, ಕೀರ್ತಿ ಲಾಡ್, ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್, ಎಂ.ಬಿ. ಪಾಟೀಲ, ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ, ಸಚಿವ ಎಚ್. ಮುನಿಯಪ್ಪ ಹಾಗೂ ಏಕನಾಥ್ ಲಾಡ್ ಇದ್ದಾರೆ — ಪ್ರಜಾವಾಣಿ ಚಿತ್ರ

ಆಂತರಿಕ ಅಂಕ ಪರಿಗಣನೆಗೆ ಎಐಡಿಎಸ್‌ಒ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಯುಸಿ ಕಲಾ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳ ಫಲಿತಾಂಶಕ್ಕೆ ಆಂತರಿಕ ಅಂಕ ಪರಿಗಣಿಸುವ ಸರ್ಕಾರದ ನಿರ್ಧಾರಕ್ಕೆ ಎಐಡಿಎಸ್‌ಒ ಆಕ್ಷೇಪ ವ್ಯಕ್ತಪಡಿಸಿದೆ.

ಯಾವುದೇ ಹೊಸ ನಿರ್ಧಾರವನ್ನು ಶೈಕ್ಷಣಿಕ ವರ್ಷದ ಆರಂಭದಲ್ಲೇ ತೆಗೆದುಕೊಳ್ಳಬೇಕು. ಪರೀಕ್ಷೆಯ ರೂಪುರೇಷೆಯನ್ನು ಶಿಕ್ಷಣ ತಜ್ಞರನ್ನು ಒಳಗೊಂಡು ಪ್ರಜಾತಾಂತ್ರಿಕ ಪ್ರಕ್ರಿಯೆ ಮೂಲಕ ರೂಪಿಸಬೇಕು. ಆದರೆ, ಈ ನಿರ್ಧಾರ ಶೈಕ್ಷಣಿಕ ವರ್ಷ ಆರಂಭಗೊಂಡ ಬಳಿಕ ಬಂದಿದೆ. ಯಾವುದೇ ಚರ್ಚೆಯಿಲ್ಲದೆ, ಅಪ್ರಜಾತಾಂತ್ರಿಕವಾಗಿ ಅನುಷ್ಠಾನಕ್ಕೆ ತರಲಾಗಿದೆ ಎಂದು ಎಐಡಿಎಸ್‌ಒ ರಾಜ್ಯ-ಕಾರ್ಯದರ್ಶಿ ಅಜಯ್ ಕಾಮತ್ ಆರೋಪಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಪ್ರಾಯೋಗಿಕ ವಿಷಯಕ್ಕೆ ಪರೀಕ್ಷೆಯ ಅಗತ್ಯವಿದೆ. ಹಾಗಾಗಿ ಅದಕ್ಕೆ 30 ಅಂಕಗಳನ್ನು ನಿಗದಿ ಪಡಿಸಿರುವುದು ಸರಿ. ಪ್ರಾಯೋಗಿಕ ವಿಷಯಗಳು ಇಲ್ಲದ ಕಲಾ ಮತ್ತು ವಾಣಿಜ್ಯ ವಿಭಾಗಕ್ಕೆ ಮಾಡುವ ಅಗತ್ಯವಿಲ್ಲ. ಈಗ ಆಂತರಿಕ ಅಂಕ ನಿಗದಿ ಮಾಡಿರುವುದರಿಂದ ವಿದ್ಯಾರ್ಥಿಗಳ 20 ಅಂಕಗಳು ಶಿಕ್ಷಕರ ಹಿಡಿತಕ್ಕೆ ಬರುತ್ತದೆ. ಶಿಕ್ಷಣದ ವ್ಯಾಪಾರೀಕರಣ ಉದ್ದೇಶ ಹೊಂದಿರುವ ಖಾಸಗಿ ಕಾಲೇಜುಗಳು ಇದನ್ನು ದುರುಪಯೋಗ ಪಡಿಸಿಕೊಂಡು ವಿದ್ಯಾರ್ಥಿಗಳನ್ನು ಕಿರುಕುಳಕ್ಕೆ ಒಳಪಡಿಸುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಸದಾ ಕಾಲ ಪಿಯು ವಿದ್ಯಾರ್ಥಿಗಳು ಪರೀಕ್ಷೆ ಒತ್ತಡದಲ್ಲಿ ಇರುತ್ತಾರೆ, ಈ ಆಂತರಿಕ ಅಂಕ ಎನ್ನುವುದು ಅವರಲ್ಲಿ ಒತ್ತಡವನ್ನು ಇನ್ನೂ ಹೆಚ್ಚು ಮಾಡುತ್ತದೆ. ವಿದ್ಯಾರ್ಥಿಗಳಲ್ಲಿ ಜ್ಞಾನ, ವ್ಯಕ್ತಿತ್ವ ಬೆಳೆಸಲು ನೀತಿಗಳಿರಬೇಕೇ ಹೊರತು ಹೆಚ್ಚು ಅಂಕ ಗಳಿಸುವುದೇ ಧ್ಯೇಯವಾಗ ಬಾರದು ಎಂದು ತಿಳಿಸಿದ್ದಾರೆ.

ಕರ್ನಾಟಕ ರೆಡ್ಡಿಜನ ಸಂಘದಿಂದ ಸನ್ಮಾನ ಸ್ವೀಕರಿಸಿದ ರಾಮಲಿಂಗಾ ರೆಡ್ಡಿ

‘ರೆಡ್ಡಿ ಜನಾಂಗ ಆರ್ಥಿಕವಾಗಿ ಬಲಿಷ್ಠವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಡ್ಡಿ ಜನಾಂಗ ಸಾಮಾಜಿಕ, ಆರ್ಥಿಕವಾಗಿ ಮತ್ತಷ್ಟು ಬಲಿಷ್ಠವಾಗಬೇಕು. ಇದೇ ಉದ್ದೇಶದಿಂದ ಕಾಂಗ್ರೆಸ್ ಸರ್ಕಾರದಲ್ಲಿ ರಾಜಕೀಯ ಪ್ರಾತಿನಿಧ್ಯ ದೊರೆತಿದ್ದು, ಇದು ಇನ್ನಷ್ಟು ಹೆಚ್ಚಾಗಬೇಕು ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ನಗರದಲ್ಲಿ ಕರ್ನಾಟಕ ರೆಡ್ಡಿ ಜನ ಸಂಘದಿಂದ ಸಮುದಾಯದ ನೂತನ ಶಾಸಕರು ಮತ್ತು ಸಚಿವರಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ರೆಡ್ಡಿ ಜನಾಂಗದಲ್ಲೂ ಬಡಜನರಿದ್ದು, ಸಮುದಾಯದ ಶ್ರೇಯೋಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಮಾತನಾಡಿ, ‘ರೆಡ್ಡಿ ಜನಾಂಗ ಭವ್ಯ ಇತಿಹಾಸ ಹೊಂದಿದೆ. ಮಹತ್ವದ ಸಾಂಸ್ಕೃತಿಕ ನೆಲೆಗಟ್ಟನ್ನು ಹೊಂದಿದೆ. ಸಮುದಾಯ ಎಲ್ಲಾ ಕ್ಷೇತ್ರಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಉತ್ತಮ ಸಾಧನೆಯತ್ತ ಮುನ್ನಡೆದಿದೆ’ ಎಂದರು.

ಹರಿಹರ ತಾಲ್ಲೂಕಿನ ಎರೆ ಹೊಸಹಳ್ಳಿಯ ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ ಇದ್ದರು. ಸಚಿವರ ಜತೆ ಶಾಸಕರಾದ ಗಾಲಿ ಜನಾರ್ದನ ರೆಡ್ಡಿ, ಎನ್.ಎಸ್. ಸುಬ್ಬಾರೆಡ್ಡಿ, ಎನ್.ಎಚ್. ಕೋನ ರೆಡ್ಡಿ, ಪ್ರಕಾಶ್ ಕೋಳಿವಾಡ, ನಾರಾ ಭರತ್ ರೆಡ್ಡಿ ಅವರನ್ನು ರೆಡ್ಡಿ ಜನಸಂಘದ ಅಧ್ಯಕ್ಷ ಎಸ್. ಜಯರಾಮ ರೆಡ್ಡಿ, ಉಪಾಧ್ಯಕ್ಷ ವೆಂಕಟ ಶಿವಾ ರೆಡ್ಡಿ, ಪದಾಧಿಕಾರಿಗಳು ಸನ್ಮಾನಿಸಿದರು.



ಕರ್ನಾಟಕ ರೆಡ್ಡಿಜನ ಸಂಘದಿಂದ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಕಾನೂನು ಸಚಿವ ಎಚ್.ಕೆ. ಪಾಟೀಲ ಅವರನ್ನು ಸನ್ಮಾನಿಸಲಾಯಿತು

ಸರ್ಕಾರಿ ಶಾಲೆ ಮತ್ತು ಆಸ್ಪತ್ರೆಗೆ ಸೌಕರ್ಯ ಕಲ್ಪಿಸಿ: ಶಾಸಕ ಪ್ರದೀಪ್ ಈಶ್ವರ್

‘ಬಡವರ ಪಾಲಿಗೆ ಅಕ್ಕಿ ದೇವರು’

ಪ್ರಜಾವಾಣಿ ವಾರ್ತೆ



ಪ್ರದೀಪ ಈಶ್ವರ್

ಬೆಂಗಳೂರು: ಸರ್ಕಾರಿ ಶಾಲೆಗಳು ಮತ್ತು ಆಸ್ಪತ್ರೆಗಳಿಗೆ ಇನ್ನಷ್ಟು ಶಕ್ತಿ ತುಂಬಲು ಸರ್ಕಾರ ವಿಶೇಷ ಆದ್ಯತೆ ನೀಡಬೇಕು ಎಂದು ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಹೇಳಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 1 ರಿಂದ 10 ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದವರ ಉನ್ನತ ಶಿಕ್ಷಣದ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎಂದರು.

‘ಶ್ರೀಮಂತರು, ಪ್ರತಿ ಪಕ್ಷಗಳು ಅಕ್ಕಿಯನ್ನು ಪಡಿತರವೆಂದು ನೋಡಬಹುದು. ನನ್ನಂತಹ ಕೋಟ್ಯಂತರ ಬಡವರ ಪಾಲಿಗೆ ಅಕ್ಕಿ ಎಂದರೆ ದೇವರು. ಅನ್ನಭಾಗ್ಯ ಜಾರಿಗೊಳಿಸಿರುವ ಮುಖ್ಯಮಂತ್ರಿಯವರಿಗೆ ಅಭಿನಂದನೆ ಸಲ್ಲಿಸುತ್ತೇನೆ’ ಎಂದರು.

‘ಇಂಗ್ಲಿಷ್ ಶಿಕ್ಷಣ ಬೆನ್ನತ್ತಿ ಹೋಗುವವರಿಗೆ ನನ್ನ ಮಾತು ಇಷ್ಟೇ, ಇಂಗ್ಲಿಷ್ ಇರುವುದೇ ತಪ್ಪು ತಪ್ಪಾಗಿ ಮಾತನಾಡಲು. ಸರಿಯಾಗಿ ಮಾತನಾಡಲು ಕನ್ನಡವಿದೆ. ಕನ್ನಡವನ್ನು ಸರಿಯಾಗಿ ಬಳಸೋಣ. ನನ್ನಂತಹ ಬಡ ಕುಟುಂಬದ ಹುಡುಗ ವಿಧಾನಸೌಧ ತಲುಪಲು ಕಾರಣರಾದ ಡಾ. ಬಿ.ಆರ್. ಅಂಬೇಡ್ಕರ್, ನನ್ನಂತಹ ಅನಾಥರಿಗೆ ಅನ್ನ ನೀಡಿ ಬೆಳೆಸಿದ ಸಿದ್ದಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿಯವರನ್ನು ಸ್ಮರಿಸುತ್ತೇನೆ’ ಎಂದು ಹೇಳಿದರು.

‘ಗೃಹಲಕ್ಷ್ಮಿ, ಗೃಹಜ್ಯೋತಿ ಯೋಜನೆಗಳು ಬಡವರಿಗೆ ಉಪಯುಕ್ತವಾಗಿವೆ. ಬಡವರ ಮಕ್ಕಳು ಬೆಳೆಯಬೇಕೆಂಬ ಉದ್ದೇಶದಿಂದ ಗ್ಯಾರಂಟಿಗಳನ್ನು ಜಾರಿ ಮಾಡಿದೆ. ಈ ವಿಚಾರದಲ್ಲಿ ರಾಜಕಾರಣ ಮಾಡಬಾರದು’ ಎಂದರು.

ಟ್ರೋಲ್‌ಗಳಿಗೆ ಹೆದರಬೇಡಿ: ಖಾದರ್

‘ಹೊಸ ಶಾಸಕರು ಧೈರ್ಯದಿಂದ ಮಾತನಾಡಬೇಕು. ಮಾತನಾಡುವಾಗ ಹೆಚ್ಚು ಕಮ್ಮಿ ಆದರೂ ತಲೆಕೆಡಿಸಿಕೊಳ್ಳಬೇಡಿ. ಟ್ರೋಲ್ ಮಾಡುತ್ತಾರೆ ಎಂಬ ಭಯ ಬೇಡ. ನನ್ನ ಬಗ್ಗೆಯೂ ಟ್ರೋಲ್ ಮಾಡಿದ್ದರು. ನಾನು ಈ ಸ್ಥಾನಕ್ಕೆ ಏರುವಲ್ಲಿ ಟ್ರೋಲ್ ಪಾತ್ರವೂ ಇದೆ. ಆದ್ದರಿಂದ ಮುಕ್ತವಾಗಿ ಮಾತನಾಡಿ’ ಎಂದು ಸಭಾಧ್ಯಕ್ಷ ಯು.ಟಿ.ಖಾದರ್ ಉತ್ತೇಜನ ನೀಡಿದರು.

ಟೊಮೆಟೊ ತೋಟಕ್ಕೆ ರಾತ್ರಿಯಿಡೀ ಕಾವಲು!

ಕಳವು ಮಾಡಬೇಡಿ, ಬೇಕಾದರೆ ಉಚಿತವಾಗಿ ಕೊಡುತ್ತೇವೆ ಬನ್ನಿ: ರೈತ ಮನವಿ

ಪ್ರಜಾವಾಣಿ ವಾರ್ತೆ

ಕೋಲಾರ: ಟೊಮೆಟೊ ದುಬಾರಿಯಾದ ಬೆನ್ನಲ್ಲೇ ಕಳ್ಳತನ ತಡೆಯಲು ತಾಲ್ಲೂಕಿನ ಹುತ್ತೂರು ಗ್ರಾಮದ ರೈತರೊಬ್ಬರು ಟೊಮೆಟೊ ಜಮೀನನ್ನು ರಾತ್ರಿಯಿಡೀ ಕಾವಲು ಕಾಯುತ್ತಿದ್ದಾರೆ.

ಗ್ರಾಮದ ರೈತ ಸತೀಶ್ ಎಂಬುವರ ತೋಟದಲ್ಲಿ ಈಚೆಗೆ ಟೊಮೆಟೊ ಬೆಳೆ ಕಳುವಾಗಿದೆ. ಮತ್ತೊಮ್ಮೆ ಹೀಗಾಗಬಾರದೆಂದು ಮುನ್ನೆಚ್ಚರಿಕೆ ವಹಿಸಿರುವ ಅವರ ಕುಟುಂಬದ ಸದಸ್ಯರು ರಾತ್ರಿಯಿಡೀ ಪಾಳಿ ಮೇಲೆ ತೋಟದಲ್ಲಿ ಕಾವಲು ಕಾಯುತ್ತಿದ್ದಾರೆ. ಇದಕ್ಕಾಗಿ ತೋಟದಲ್ಲಿ ಟೆಂಟ್ ಹಾಕಿ ಮಲಗುತ್ತಿದ್ದಾರೆ.

‘ಐದು ಎಕರೆಯಲ್ಲಿ ಟೊಮೆಟೊ ಬೆಳೆದಿದ್ದೇವೆ. ಮಧ್ಯರಾತ್ರಿ ಐದು ಸಾಲಿನ ಟೊಮೆಟೊ ಕದ್ದೊಯ್ದಿದ್ದಾರೆ. ಮೊದಲೇ ಈ ಬಾರಿ ಇಳುವರಿ ಕಡಿಮೆಯಾಗಿದೆ. ದಯವಿಟ್ಟು ತೋಟದಲ್ಲಿ ಟೊಮೆಟೊ ಕಳ್ಳತನ ಮಾಡಬೇಡಿ. ಬೇಕಿದ್ದರೆ ಉಚಿತವಾಗಿ ಕೊಡುತ್ತೇವೆ ಬನ್ನಿ’ ಎಂದು ಸತೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ರಾತ್ರಿ ಕಾಯಲೂ ಕಷ್ಟ. ಹಂದಿ ಕಾಟ ಜೊತೆಗೆ ಮಳೆ ಕೂಡ ಬರುತ್ತಿದೆ. ಟೊಮೆಟೊ ದರ ಹೆಚ್ಚಿರುವುದೂ ತೊಂದರೆ ತಂದೊಡ್ಡಿದೆ. ಒಂದು ತಿಂಗಳಿನಿಂದಷ್ಟೇ ದರ ಹೆಚ್ಚಿದೆ. ಹಿಂದೆ ಭಾರಿ ನಷ್ಟ ಅನುಭವಿಸಿದ್ದೇವೆ. ಆದರೆ, ತೋಟಗಾರಿಕೆ ಇಲಾಖೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಬೆಳೆಗೆ ರೋಗ ಬಂದರೂ ಅಧಿಕಾರಿಗಳು ಪರಿಹಾರ ಹೇಳುತ್ತಿಲ್ಲ. ತೋಟದ ಸುತ್ತ ಬೇಲಿ ಹಾಕಲು ಸರ್ಕಾರ ಸಬ್ಸಿಡಿ ಕೊಡಬೇಕು’ ಎಂದು ಆಗ್ರಹಿಸಿದರು.



ಕೋಲಾರ ತಾಲ್ಲೂಕಿನ ಹುತ್ತೂರು ಗ್ರಾಮದಲ್ಲಿ ಟೊಮೆಟೊಗೆ ಕಾವಲು



ಗೀತ ಗಾಯನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಪರಂಪರಾ ಫೌಂಡೇಷನ್ ಆಯೋಜಿಸಿದ್ದ ‘ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ’ ಎಂಬ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಪಂಚಾಮೃತ್ ಸುಗಮ ಸಂಗೀತ ಅಕಾಡೆಮಿಯ ವಿದ್ಯಾರ್ಥಿಗಳು ಗೀತಗಾಯನವನ್ನು ಪ್ರಸ್ತುತಪಡಿಸಿದರು

ಬಸ್ಕಿ ಶಿಕ್ಷೆ: ವಿದ್ಯಾರ್ಥಿನಿ ಅಸ್ವಸ್ಥ– ದೂರು

ಪುತ್ತೂರು (ದಕ್ಷಿಣ ಕನ್ನಡ): ಬಸ್ಕಿ ಹೊಡೆಯುವ ಶಿಕ್ಷೆ ನೀಡಿದ ಕಾರಣ ಶಾಲಾ ವಿದ್ಯಾರ್ಥಿನಿ ಅಸ್ವಸ್ಥಳಾಗಿದ್ದಾಳೆ ಎಂದು ಆಕೆಯ ಪೋಷಕರು ಶಿಕ್ಷಕನ ವಿರುದ್ಧ ಕ್ಷೇತ್ರ ಶಿಕ್ಷಣಾಧಿಕಾರಿಗೆ ದೂರು ನೀಡಿದ್ದಾರೆ.

ತಾಲ್ಲೂಕಿನ ಕಾವು ಮಾಡ್ನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಈ ಘಟನೆ ನಡೆದಿದ್ದು ಅಸ್ವಸ್ಥ ವಿದ್ಯಾರ್ಥಿನಿಯನ್ನು ಪುತ್ತೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶಾಲೆಯ ಆರನೇ ತರಗತಿ ವಿದ್ಯಾರ್ಥಿನಿ ತರಗತಿಯಲ್ಲಿ ಕೀಟಲೆ ಮಾಡಿದ್ದಾಳೆ ಎಂಬ ಕಾರಣಕ್ಕೆ ಪ್ರಭಾರ ಮುಖ್ಯ ಶಿಕ್ಷಕ ಬಸ್ಕಿ ಹೊಡಿಸಿದ್ದಾರೆ ಎನ್ನಲಾಗಿದ್ದು ವಿದ್ಯಾರ್ಥಿನಿಯ ಪೋಷಕರು ಕ್ಷೇತ್ರ ಶಿಕ್ಷಣಾಧಿಕಾರಿ, ಮಕ್ಕಳ ಹಕ್ಕುಗಳ ಆಯೋಗ ಮತ್ತು ಪುತ್ತೂರಿನ ಶಾಸಕರಿಗೆ ದೂರು ನೀಡಿದ್ದಾರೆ.

ವಚನ ಗಾನ ಯಾನ ಸಮಾರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಚನಗಳು ಬದುಕಿಗೆ ಸಾಂತ್ವನವನ್ನು ನೀಡುತ್ತವೆ ಎಂದು ಜ್ಞಾನಯೋಗ ಲಯನ್ಸ್ ಕ್ಲಬ್ ಅಧ್ಯಕ್ಷೆ ಲಯನ್ ಬಿ. ಚಂದ್ರಿಕ ಹೇಳಿದರು.

ವಚನಜ್ಯೋತಿ ಬಳಗ ಸಹಯೋಗದಲ್ಲಿ ಪ್ರಪುಣ್ಯಾ ಸಂಗೀತ ಶಾಲೆ ಆಯೋಜಿಸಿದ್ದ ’ವಚನ ಗಾನ ಯಾನ-4’ರ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಕನ್ನಡದ ಸಾಂಸ್ಕೃತಿಕ ಸಂಪತ್ತಾದ ವಚನಗಳನ್ನು ಓದುವುದೇ ಒಂದು ಆರೋಗ್ಯಕರ ಬೆಳವಣಿಗೆ. ಅವುಗಳನ್ನು ಗಾಯನ ರೂಪದಲ್ಲಿ ಹಾಡುವುದರಿಂದ ಮನಸ್ಸಿಗಷ್ಟೇ ಅಲ್ಲದೇ ಸಮಾಜಕ್ಕೂ ಸಂತಸವನ್ನು ಉಂಟು ಮಾಡುತ್ತದೆ. ಸದೃಢ ಸಮಾಜ ನಿರ್ಮಾಣಕ್ಕೆ ಇದು ಪೂರಕ ಎಂದು ಅಭಿಪ್ರಾಯಪಟ್ಟರು.

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, ಮಕ್ಕಳ ಮನಸ್ಸು ಎಲ್ಲವನ್ನೂ ಗ್ರಹಿಸುವ ಶಕ್ತಿಯೊಂದಿದ್ದು, ವಚನಗಳೆಂಬ ಮಾಣಿಕ್ಯಗಳು ಅವರ ಬದುಕನ್ನು ಬೆಳಗಿಸುತ್ತವೆ. ಬಾಲ್ಯದಲ್ಲಿ ಕಲಿತ ಸಂಸ್ಕಾರ ಬದುಕಿನುದ್ದಕ್ಕೂ ಬೆಂಗಾವಲಾಗಿ ಕಾಯುತ್ತವೆ. ವಚನಜ್ಯೋತಿ ಬಳಗವು ಇದೀಗ ಮತ್ತೊಂದು ಸಾಹಸಕ್ಕೆ ಕೈಹಾಕಿದ್ದು, ಶಾಲೆಗಳಲ್ಲಿ ತರಗತಿಗಳಲ್ಲಿ ವಚನಗಳನ್ನು ಬೋಧಿಸುವ ಮಹತ್ಕಾರ್ಯ ನಡೆಸಲಿದೆ ಎಂದು ತಿಳಿಸಿದರು.

ವಚನಜ್ಯೋತಿ ಬಳಗದ ಪ್ರಧಾನ ಕಾರ್ಯದರ್ಶಿ ಪ್ರಭು ಇಸುವನಹಳ್ಳಿ ವಚನ ಯಾನದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಪ್ರಶಂಸಾ ಪತ್ರ ವಿತರಿಸಿದರು.

ಪ್ರಪುಣ್ಯಾ ಸಂಗೀತ ಶಾಲೆಯ ಪಂ. ಈರಯ್ಯ ಚಿಕ್ಕಮಠ್ ಪ್ರಾಸ್ತಾವಿಕ ಮಾತುಗಳಾಡಿದರು. ವಿದ್ಯಾರ್ಥಿಗಳು ವಚನ ಗಾಯನ ನಡೆಸಿಕೊಟ್ಟರು. ಶಿಕ್ಷಕಿ ನಿಷಾರಾಣಿ ನಿರೂಪಣೆ ಮಾಡಿದರು. ಮುನೇಶ್ವರ ದೇವಾಲಯದ ಉಮೇಶ್ ಆರಾಧ್ಯ, ಹ್ಯಾಬಿಟೇಟ್ ವೆಂಚರ್ಸ್ ಗುರುಪ್ರಸಾದ, ಕೆಂಪರಾಜು, ಕೇಶವಮೂರ್ತಿ, ವೀರಭದ್ರ, ಚಂದ್ರಶೇಖರ್, ಉಮೇಶ ಆಚಾರ್ ಭಾಗವಹಿಸಿದ್ದರು. ಕೀಬೋರ್ಡಿನಲ್ಲಿ ಪುಣ್ಯೇಶ್, ತಬಲದಲ್ಲಿ ಮಾರುತಿಪ್ರಸಾದ್, ರಿದಂಪ್ಯಾಡಿನಲ್ಲಿ ಮಹೇಂದ್ರವರ್ಮ ಸಹಕರಿಸಿದರು.



ವಚನ ಗಾನ ಯಾನ ಸಮಾರೋಪದಲ್ಲಿ ವಿದ್ಯಾರ್ಥಿಗಳೊಂದಿಗೆ ಭಾಗವಹಿಸಿದ್ದ ಗಣ್ಯರು

ತಿರುಚಿದ ಅಶ್ಲೀಲ ಚಿತ್ರ: ಆನ್‌ಲೈನ್ ವಂಚಕರಿಂದ ₹1 ಲಕ್ಷ ವಂಚನೆ

ಪ್ರಜಾವಾಣಿ ಚಿತ್ರ

ಚಿಕ್ಕಬಳ್ಳಾಪುರ: ತಿರುಚಿದ ಅಶ್ಲೀಲ ಚಿತ್ರವನ್ನು ಸ್ನೇಹಿತರಿಗೆ ಕಳುಹಿಸುವುದಾಗಿ ಬೆದರಿಸಿ ಆನ್‌ಲೈನ್ ವಂಚಕರು ಗೌರಿಬಿದನೂರು ತಾಲ್ಲೂಕಿನ ಮಹಿಳೆಯೊಬ್ಬರಿಂದ ₹1.08 ಲಕ್ಷ ದೋಚಿದ್ದಾರೆ. ಸಂತ್ರಸ್ತೆ ಈ ಬಗ್ಗೆ ಚಿಕ್ಕಬಳ್ಳಾಪುರದ ಸಿಇಎನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.


ಆನ್‌ಲೈನ್ ಮೂಲಕ ಸಾಲ ನೀಡುವುದಾಗಿ ಸಂದೇಶ ಬಂದಿತ್ತು. ಆ ಸಂದೇಶವನ್ನು ಒತ್ತಿದಾಗ ಪ್ಲೇ ಸ್ಟೋರ್ ತೋರಿತು. ನನಗೆ ಹಣದ ಅಗತ್ಯವಿದ್ದ ಕಾರಣ MONEY APP ಡೌನ್‌ಲೋಡ್ ಮಾಡಿಕೊಂಡೆ. ₹8000 ಸಾಲ ನೀಡುವುದಾಗಿ ತಿಳಿಸಿ ನನ್ನ ಆಧಾರ್ ಕಾರ್ಡ್, ಪಾನ್‌ಕಾರ್ಡ್, ಖಾತೆ ನಂಬರ್ ಮತ್ತು ನನ್ನ ಸೆಲ್ಫಿ ಚಿತ್ರವನ್ನು ನೀಡಿದೆ.

ಆದರೆ ಅವರು ಯಾವುದೇ ಸಾಲ ನೀಡಲಿಲ್ಲ. 2-3 ದಿನಗಳ ನಂತರ ಅನೇಕ ಮೊಬೈಲ್ ನಂಬರ್ ಗಳಿಂದ ಇಂಟರ್ ನೆಟ್ ಕರೆಗಳು ಬಂದವು. ಹಿಂದಿಯಲ್ಲಿ ಸಾಲದ ಹಣ ವಾಪಸ್ ನೀಡಿ ಇಲ್ಲದಿದ್ದರೆ ನಿನ್ನ ಭಾವಚಿತ್ರವನ್ನು ಅಶ್ಲೀಲವಾಗಿ ಎಡಿಟ್ ಮಾಡಿ ನಿನ್ನ ಮೊಬೈಲ್‌ನಲ್ಲಿರುವ ಸಂಖ್ಯೆಗಳಿಗೆ ಕಳುಹಿಸುವುದಾಗಿ ಹೆದರಿಸಿದರು. ನನ್ನ ಒಂದು ಬೆತ್ತಲೆ ಚಿತ್ರವನ್ನು ಸ್ನೇಹಿತನಿಗೆ ಕಳುಹಿಸಿದರು. ನಾನು ಭಯದಿಂದ 2 ಹಂತದಲ್ಲಿ ಅವರಿಗೆ ₹1,08,000 ಕಳುಹಿಸಿದೆ. ಅವರು ನನಗೆ ಇನ್ನೂ ಸಾಲ ಕಟ್ಟಬೇಕು ಅಂತ ತಿಳಿಸಿದರು. ನಾನು ಯಾವುದೇ ಹಣ ನನ್ನ ಖಾತೆಗೆ ಬಂದಿಲ್ಲ. ನಾನು ಕಟ್ಟುವುದಿಲ್ಲ ಎಂದೆ. ನನ್ನ ಬೆದರಿಸಿದರು ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಮಂಡಳಿ ಸಭೆಯಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ

ಜಿಎಸ್‌ಟಿ ಪರಿಹಾರ ವಿಸ್ತರಣೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ



ಕೃಷ್ಣ ಬೈರೇಗೌಡ

ನವದೆಹಲಿ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಕಾರಣದಿಂದ ಆಗುವ ವರಮಾನ ನಷ್ಟಕ್ಕೆ ರಾಜ್ಯಗಳಿಗೆ ಪರಿಹಾರ ನೀಡುವುದನ್ನು ಮತ್ತೆ ಐದು ವರ್ಷ ಮುಂದುವರಿಸಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರ ಒತ್ತಾಯಿಸಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಜಿಎಸ್‌ಟಿ ಮಂಡಳಿಯ ಸಭೆಯಲ್ಲಿ ರಾಜ್ಯದ ಪ್ರತಿನಿಧಿಯಾಗಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ ಈ ಒತ್ತಾಯ ಮಾಡಿದರು. ಇದಕ್ಕೆ ನಾಲ್ಕು ರಾಜ್ಯಗಳು ಧ್ವನಿಗೂಡಿಸಿದವು.

ರಾಜ್ಯಗಳಿಗೆ ಕೇಂದ್ರ ಸರ್ಕಾರದಿಂದ ನೀಡುತ್ತಿದ್ದ ಜಿಎಸ್‌ಟಿ ಪರಿಹಾರವು ಕಳೆದ ವರ್ಷದ ಜೂನ್‌ಗೆ ಅಂತ್ಯಗೊಂಡಿದೆ. ಜಿಎಸ್‌ಟಿ ಪರಿಹಾರವನ್ನು ಮುಂದಿನ ಐದು ವರ್ಷಗಳಿಗೆ ವಿಸ್ತರಿಸುವಂತೆ ಕರ್ನಾಟಕ ಸರ್ಕಾರವು ಈ ಹಿಂದೆಯೂ ಕೇಂದ್ರಕ್ಕೆ ಮನವಿ ಮಾಡಿತ್ತು. ಕೇಂದ್ರ ಹಣಕಾಸು ಸಚಿವಾಲಯವು, ‘ಜಿಎಸ್‌ಟಿ ವ್ಯವಸ್ಥೆ ಜಾರಿಯಾದ ಬಳಿಕ 5 ವರ್ಷಗಳ ಅವಧಿಗಷ್ಟೇ ಪರಿಹಾರ ಕೊಡಲು ಜಿಎಸ್‌ಟಿ ಮಂಡಳಿ ಶಿಫಾರಸು ಮಾಡಿತ್ತು’ ಎಂದು ಸ್ಪಷ್ಟಪಡಿಸಿತ್ತು.

‘ಸಂವಿಧಾನ ಕಾಯ್ದೆ 2016 (101ನೇ ತಿದ್ದುಪಡಿ) ಸೆಕ್ಷನ್ 18 ಹಾಗೂ ಜಿಎಸ್‌ಟಿ ಮಂಡಳಿ ಶಿಫಾರಸಿನ ಪ್ರಕಾರ, ಕಾಯ್ದೆ ಜಾರಿಯಾದ ಬಳಿಕ 5 ವರ್ಷವಷ್ಟೇ ರಾಜ್ಯಗಳಿಗೆ ಪರಿಹಾರ ನೀಡಲು ಅವಕಾಶ ಇದೆ’ ಎಂದು ತಿಳಿಸಿತ್ತು.

‘ಜಿಎಸ್‌ಟಿ ಪರಿಹಾರ ನೀಡುವುದನ್ನು ನಿಲ್ಲಿಸಿದ್ದರಿಂದ ರಾಜ್ಯಗಳಿಗೆ ತೊಂದರೆಯಾಗಿದೆ. ಈ ಬಗ್ಗೆ ಮತ್ತೊಮ್ಮೆ ಕೇಂದ್ರ ಸರ್ಕಾರದ ಗಮನ ಸೆಳೆಯಲಾಗಿದೆ. ಈ ಸಂಬಂಧ ಕೇಂದ್ರದಿಂದ ಯಾವುದೇ ಭರವಸೆ ಸಿಕ್ಕಿಲ್ಲ’ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಜಿಎಸ್‌ಟಿ ಜಾರಿಯಾದ ಮೇಲೆ ರಾಜ್ಯಗಳಿಗೆ ಶೇ 14ರಷ್ಟು ನಷ್ಟ ಪರಿಹಾರ ನೀಡುವ ವ್ಯವಸ್ಥೆ 2017ರ ಜುಲೈನಲ್ಲಿ ಆರಂಭವಾಯಿತು. ಹೊಸ ತೆರಿಗೆ ವ್ಯವಸ್ಥೆ ಜಾರಿಯಾದ ಬಳಿಕ ರಾಜ್ಯಗಳಿಗೆ ಆಗುವ ನಷ್ಟವನ್ನು ಭರಿಸಲು ಈ ಯೋಜನೆ ಜಾರಿ ಮಾಡಲಾಗಿತ್ತು.

ಮುಖ್ಯಾಂಶಗಳು

- ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೇತೃತ್ವದಲ್ಲಿ ನಡೆದ ಸಭೆ
- ಕಳೆದ ವರ್ಷ ಜೂನ್‌ಗೆ ಅಂತ್ಯಗೊಂಡಿದ್ದ ಜಿಎಸ್‌ಟಿ ಪರಿಹಾರ
- ನಾಲ್ಕು ರಾಜ್ಯಗಳ ಬೆಂಬಲ

ಯೋಜನೆಗೆ ತಿಂಗಳು: ಜೂನ್‌ಗಿಂತ ಜುಲೈನಲ್ಲಿ ಪ್ರಯಾಣಿಕರ ಸಂಖ್ಯೆ ಅಧಿಕ

‘ಶಕ್ತಿ’: ಮಹಿಳೆಯರ ಕುಗ್ಗದ ಉತ್ಸಾಹ

• ಬಾಲಕೃಷ್ಣ ಪಿ.ಎಚ್.



ಕೆಎಸ್‌ಆರ್‌ಟಿಸಿ ಬಸ್ ಹತ್ತಲು ತಯಾರಾಗಿರುವ ಪ್ರಯಾಣಿಕರು (ಸಾಂದರ್ಭಿಕ ಚಿತ್ರ)

ಬೆಂಗಳೂರು: ರಾಜ್ಯ ಸರ್ಕಾರದ ಗ್ಯಾರಂಟಿಗಳಲ್ಲಿ ಒಂದಾದ 'ಶಕ್ತಿ' ಯೋಜನೆ ಜಾರಿಯಾಗಿ ತಿಂಗಳಾಯಿತು. ಸಾರಿಗೆಯ ನಾಲ್ಕು ನಿಗಮಗಳ ಸಾಮಾನ್ಯ ಮತ್ತು ವೇಗದೂತ ಬಸ್‌ಗಳಲ್ಲಿ ಪ್ರಯಾಣಿಸಿದ ಮಹಿಳೆಯರ ಸಂಖ್ಯೆಯು 15 ದಿನಗಳಿಗಿಂತ ಆನಂತರದ 15 ದಿನಗಳಲ್ಲಿ ಅಧಿಕವಾಗಿದೆ.

ಮಹಿಳೆಯರಿಗೆ ರಾಜ್ಯದೊಳಗೆ ಪ್ರಯಾಣಿಸಲು ಉಚಿತ ಅವಕಾಶ ನೀಡುವ ಈ ಯೋಜನೆ ಜೂನ್ 11ರಂದು ಚಾಲನೆ ನೀಡಲಾಗಿತ್ತು. ಜೂನ್ 13ರಂದಲೇ ನಿತ್ಯ ಪ್ರಯಾಣಿಸುವವರ ಸಂಖ್ಯೆ 50 ಲಕ್ಷ ದಾಟಿತ್ತು. ಜೂನ್ 25ರವರೆಗೆ ಸರಾಸರಿ 53.21 ಲಕ್ಷ ಮಹಿಳೆಯರು ಪ್ರಯಾಣಿಸಿದ್ದರು. ಜೂನ್ 23ರಂದು 59.25 ಲಕ್ಷ ಮಹಿಳೆಯರು ಪ್ರಯಾಣಿಸಿದ್ದೇ ಅಧಿಕವಾಗಿತ್ತು.

ಜೂನ್ 26ರಿಂದ ಜುಲೈ 10ರವರೆಗೆ ಪ್ರಯಾಣಿಸಿದ ಮಹಿಳೆಯರ ಸರಾಸರಿ 60.95 ಲಕ್ಷಕ್ಕೇರಿದೆ. ಜುಲೈ 4ರಂದು 70.15 ಲಕ್ಷ ಮಹಿಳೆಯರು ಪ್ರಯಾಣಿಸಿದ್ದು ಇಲ್ಲಿವರೆಗಿನ ದಾಖಲೆಯಾಗಿದೆ. ಶಕ್ತಿ ಯೋಜನೆ ಜಾರಿಯಾದ ಬಳಿಕ ಮೊದಲ ಶನಿವಾರ ಹೊರತುಪಡಿಸಿ ಪ್ರತಿ ಶನಿವಾರ ಮಹಿಳಾ ಪ್ರಯಾಣಿಕರ ಸಂಖ್ಯೆ ಉಳಿದ ದಿನಗಳಿಗಿಂತ ಸುಮಾರು 10 ಲಕ್ಷದಷ್ಟು ಕಡಿಮೆ ಇದೆ.

ಜೂನ್ 11ರಿಂದ ಇಲ್ಲಿವರೆಗೆ ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸಿದವರ ಪುರುಷರು ಮತ್ತು ಮಹಿಳೆಯರ ಪ್ರಮಾಣ ಬಹುತೇಕ ಒಂದೇ ರೀತಿ ಇದೆ. ಒಟ್ಟು ಪ್ರಯಾಣಿಕರಲ್ಲಿ ಶೇ 50.86 ಮಹಿಳೆಯರಾಗಿದ್ದರೆ, ಶೇ 49.14ರಷ್ಟು ಪುರುಷರಾಗಿದ್ದಾರೆ.

ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆ (ಶೇ 55.52) ಮತ್ತು ಕೆಎಸ್‌ಆರ್‌ಟಿಸಿಯಲ್ಲಿ (ಶೇ 52.55) ಮಹಿಳಾ ಪ್ರಯಾಣಿಕರ ಪ್ರಮಾಣ ಹೆಚ್ಚಿದ್ದರೆ, ಬಿಎಂಟಿಸಿ (ಶೇ 48.16) ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ (ಶೇ 46.75) ಮಹಿಳಾ ಪ್ರಯಾಣಿಕರ ಪ್ರಮಾಣವು ಪುರುಷರಿಗಿಂತ ಕಡಿಮೆಯಾಗಿದೆ.

ಸಾರಿಗೆ ಸಂಸ್ಥೆಗಳಿಗೆ ಪುರುಷ ಪ್ರಯಾಣಿಕರಿಂದ ಸುಮಾರು ₹ 390 ಕೋಟಿ ಆದಾಯ ಬಂದಿದ್ದರೆ, ಮಹಿಳಾ ಪ್ರಯಾಣಿಕರಿಂದ ₹ 402 ಕೋಟಿ ಆದಾಯ ಬಂದಿದೆ. ಮಹಿಳಾ ಪ್ರಯಾಣಿಕರ ಟಿಕೆಟ್ ದರವನ್ನು ಸರ್ಕಾರವು ಸಾರಿಗೆ ಸಂಸ್ಥೆಗಳಿಗೆ ನೀಡಬೇಕಿದೆ.

ನಿಗಮವಾರು ಪ್ರಯಾಣಿಕರ ಸಂಖ್ಯೆ (ಕೋಟಿಗಳಲ್ಲಿ)

ನಿಗಮ	ಮಹಿಳೆಯರು	ಪುರುಷರು	ಒಟ್ಟು
ಕೆಎಸ್‌ಆರ್‌ಟಿಸಿ	5.09	4.60	9.69
ಬಿಎಂಟಿಸಿ	5.38	5.79	11.17
ಎನ್‌ಡಬ್ಲ್ಯುಕೆಆರ್‌ಟಿಸಿ	4.02	3.22	7.24
ಕೆಕೆಆರ್‌ಟಿಸಿ	2.23	2.54	4.77

‘ದುಡಿವ ಮಹಿಳೆಯರಿಗೆ ಉಪಯೋಗ’

ಸಾರಿಗೆ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಉಚಿತವಾಗಿ ಪ್ರಯಾಣಿಸಲು ಅವಕಾಶ ನೀಡಿರುವುದು ದುಡಿಯುವ ಮಹಿಳೆಯರಿಗೆ ಭಾರಿ ಉಪಯೋಗವಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ದ್ವಿಚಕ್ರ ವಾಹನ, ಸೈಕಲ್, ಆಟೊ, ಖಾಸಗಿ ಬಸ್‌ಗಳಲ್ಲಿ ಹೋಗುತ್ತಿದ್ದ ಮಹಿಳೆಯರು, ಒಂದೆರಡು ಕಿಲೋಮೀಟರ್ ದೂರಕ್ಕೆ ನಡೆದುಕೊಂಡೇ ಹೋಗುತ್ತಿದ್ದ ಮಹಿಳೆಯರು ಈಗ ನಮ್ಮ ಬಸ್‌ಗಳಲ್ಲಿ ಸಂಚರಿಸುತ್ತಿದ್ದಾರೆ. ಮಹಿಳೆಯರ ಸಬಲೀಕರಣದ ದೃಷ್ಟಿಯಿಂದ ಈ ಯೋಜನೆ ಉತ್ತಮ ಹೆಜ್ಜೆ' ಎಂದು ವಿವರಿಸಿದರು.

ಮುಂದಿನ ಮಾರ್ಚ್‌ವರೆಗೆ ಪ್ರತಿ ತಿಂಗಳಿಗೆ 'ಶಕ್ತಿ' ಯೋಜನೆಗೆ ₹ 2,800 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ನಿಗದಿಮಾಡಲಾಗಿದೆ. ಮಹಿಳಾ ಪ್ರಯಾಣಿಕರ ಪ್ರಮಾಣ ನೋಡಿದರೆ ಈ ಅನುದಾನ ಸಾಕಾಗುತ್ತದೆ ಎಂದರು.

ಅಂಕಿ ಅಂಶ

16.73 ಕೋಟಿ
ಜು.10ವರೆಗೆ ಪ್ರಯಾಣಿಸಿದ ಮಹಿಳೆಯರು

16.16 ಕೋಟಿ
ಜುಲೈ 9ರವರೆಗೆ ಪ್ರಯಾಣಿಸಿದ ಪುರುಷರು

32.89 ಕೋಟಿ
ಪ್ರಯಾಣಿಸಿದವರ ಒಟ್ಟು ಸಂಖ್ಯೆ

ಪಿಎಸ್‌ಐ ನೇಮಕಾತಿ ಹಗರಣ: ಪೂರ್ವ ನಿದರ್ಶನ ಪಾಲನೆಗೆ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ನಾಗರಿಕ ಸೇವೆಗಳ (2011ನೇ ಬ್ಯಾಚಿನ ಗೆಜೆಟೆಡ್ ಪ್ರೊಬೆಷನರ್ಸ್ ಆಯ್ಕೆ ಸಿಂಧುತ್ವ ಮತ್ತು ನೇಮಕಾತಿ) ಕಾಯ್ದೆ ಜಾರಿಗೆ ತಂದು 2011ರ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿ ರದ್ದುಪಡಿಸಿದ್ದ ಆದೇಶವನ್ನು ಹಿಂಪಡೆದ ವಿಧಾನವನ್ನೇ ಪಿಎಸ್‌ಐ ನೇಮಕಾತಿ ಪ್ರಕರಣದಲ್ಲಿ ಪಾಲಿಸಬೇಕು’ ಎಂದು ಹಿರಿಯ ವಕೀಲ ಪಿ.ಎಸ್. ರಾಜಗೋಪಾಲ ಅವರು ಹೈಕೋರ್ಟ್‌ನಲ್ಲಿ ಪ್ರತಿಪಾದಿಸಿದರು.

‘ಕಳಂಕಿತ ಮತ್ತು ಕಳಂಕರಹಿತ ಅಭ್ಯರ್ಥಿಗಳೆಂದು ಪ್ರತ್ಯೇಕಿಸಿ ನೇಮಕಾತಿ ಆದೇಶ ನೀಡಲು ಸರ್ಕಾರಕ್ಕೆ ಆದೇಶಿಸಬೇಕು’ ಎಂದು ಕೋರಿ ಆಯ್ಕೆ ಪಟ್ಟಿಯಲ್ಲಿ ಹೆಸರಿದ್ದ 100ಕ್ಕೂ ಹೆಚ್ಚು ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಯನ್ನು ನ್ಯಾಯಮೂರ್ತಿ ಜಿ. ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.


ವಿಚಾರಣೆ ವೇಳೆ ಅಭ್ಯರ್ಥಿಗಳ ಪರ ಹಾಜರಾಗಿದ್ದ ಪಿ.ಎಸ್. ರಾಜಗೋಪಾಲ ಅವರು, ‘2011ರಲ್ಲಿ ನಡೆದಿದ್ದ ನೇಮಕಾತಿಯಲ್ಲಿ ಅವ್ಯವಹಾರ ಕಂಡು ಬಂದಿತ್ತು. ಆ ಕುರಿತು ಸಿಐಡಿ ತನಿಖೆ ನಡೆಸಿ ನೀಡಿದ್ದ ಮಧ್ಯಂತರ ವರದಿ ಆಧರಿಸಿಯೇ ರಾಜ್ಯ ಸರ್ಕಾರವು ಇಡೀ ಪ್ರಕ್ರಿಯೆಯನ್ನು 2013ರ ಅಕ್ಟೋಬರ್ 15ರಂದು ಹಿಂಪಡೆದಿತ್ತು. ಒಂದು ದಶಕದ ಬಳಿಕ 2022ರಲ್ಲಿ ಕರ್ನಾಟಕ ನಾಗರಿಕ ಸೇವೆಗಳ ಕಾಯ್ದೆ ಮೂಲಕ ಅವರ ಆಯ್ಕೆಗೆ ಅನುವು ಮಾಡಿಕೊಡಲಾಗಿದೆ. ಇದೇ ನಿಯಮವನ್ನು ಪಿಎಸ್‌ಐ ನೇಮಕಾತಿ ಪ್ರಕರಣದಲ್ಲಿ ಪಾಲಿಸಬೇಕು’ ಎಂದು ಸುದೀರ್ಘ ವಾದ ಮಂಡನೆಯ ಮೂಲಕ ಪ್ರತಿಪಾದಿಸಿದರು.

ದಿನದ ಕಲಾಪದ ಅವಧಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ನ್ಯಾಯಪೀಠ ವಿಚಾರಣೆಯನ್ನು ಗುರುವಾರಕ್ಕೆ (ಜು. 13) ಮುಂದೂಡಿತು.

‘ಪಿಎಸ್‌ಐ ನೇಮಕಾತಿ ಅಕ್ರಮ ಹಿನ್ನೆಲೆಯಲ್ಲಿ ಹೊಸದಾಗಿ ಲಿಖಿತ ಪರೀಕ್ಷೆ ನಡೆಸಲು 2022ರ ಏಪ್ರಿಲ್ 29ರಂದು ಅಂದಿನ ಬಿಜೆಪಿ ಸರ್ಕಾರ ಹೊರಡಿಸಿದ ಆದೇಶ ರದ್ದುಪಡಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ವೆಂಕಟೇಶ್ ಕುಮಾರ್, ಕವಿತಾ ಮಿಶ್ರಾ, ಹಿರೇಹಾಳ್ ಇಬ್ರಾಹಿಂಗೆ ಗೌರವ ಡಾಕ್ಟರೇಟ್


ಪ್ರಜಾವಾಣಿ ವಾರ್ತೆ



ಪಂ. ವೆಂಕಟೇಶ್ ಕುಮಾರ್



ಕವಿತಾ ಮಿಶ್ರಾ



ಹಿರೇಹಾಳ್ ಇಬ್ರಾಹಿಂ

ಬಳ್ಳಾರಿ: ಹಿಂದೂಸ್ತಾನಿ ಗಾಯಕ ಪಂಡಿತ ವೆಂಕಟೇಶ್ ಕುಮಾರ್, ರಾಯಚೂರಿನ ಪ್ರಗತಿಪರ ರೈತ ಮಹಿಳೆ ಕವಿತಾ ಮಿಶ್ರಾ ಮತ್ತು ಗಡಿ ಭಾಗದ ಸಮಾಜಸೇವಕ ದಿ. ಹಿರೇಹಾಳ್ ಇಬ್ರಾಹಿಂ ಅವರನ್ನು ಇಲ್ಲಿನ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ (ವಿಎಸ್‌ಕೆಯು) ಗೌರವ ಡಾಕ್ಟರೇಟ್ ಪದವಿಗೆ ಆಯ್ಕೆ ಮಾಡಿದೆ.

ಜುಲೈ 13ರಂದು ನಡೆಯುವ ವಿಶ್ವವಿದ್ಯಾಲಯದ 11ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು ಎಂದು ಕುಲಪತಿ ಪ್ರೊ. ಸಿದ್ದು ಪಿ. ಅಲಗೂರ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ‘ಪಂಡಿತ ವೆಂಕಟೇಶ್ ಕುಮಾರ್ ಸಂಗೀತ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದಾರೆ. ಕವಿತಾ ಮಿಶ್ರಾ ಕೃಷಿ ಮತ್ತು ಕೃಷಿ ಆಧಾರಿತ ಉದ್ಯಮದಲ್ಲಿ ಮಹತ್ವದ ಸಾಧನೆ ಮಾಡಿದ್ದಾರೆ. ಹಿರೇಹಾಳ್ ಇಬ್ರಾಹಿಂ ಗಡಿ ನಾಡಿನಲ್ಲಿ ಸಮಾಜ ಸೇವೆಯ ಜತೆಗೆ ಕನ್ನಡ ಭಾಷೆ, ಸಂಸ್ಕೃತಿ ಬೆಳೆಸಲು ಶ್ರಮಿಸಿದ್ದು, ಅವರಿಗೆ ಮರಣೋತ್ತರವಾಗಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು’ ಎಂದರು.

ತುಂಗಭದ್ರಾ ಅಣೆಕಟ್ಟೆ: 3 ದಿನದಲ್ಲಿ 6 ಅಡಿ ನೀರು ಹೆಚ್ಚಳ

ಆಲಮಟ್ಟಿ: ತಡವಾಗಿ ಒಳಹರಿವು ಆರಂಭ

ಪ್ರಜಾವಾಣಿ ವಾರ್ತೆ



ಆಲಮಟ್ಟಿ ಜಲಾಶಯಕ್ಕೆ ಒಳಹರಿವು ಆರಂಭವಾಗಿದ್ದು ಕೃಷ್ಣಾ ನದಿ ಹಿನ್ನೀರು ಬುಧವಾರ ಕಂಡಿದ್ದು ಹೀಗೆ
–ಪ್ರಜಾವಾಣಿ ಚಿತ್ರ: ಚಂದ್ರಶೇಖರ ಕೋಳೇಕರ

ವಿಜಯಪುರ: ಆಲಮಟ್ಟಿಯ ಲಾಲ್ ಬಹಾದ್ದೂರ್ ಶಾಸ್ತ್ರಿ ಸಾಗರಕ್ಕೆ ಬುಧವಾರದಿಂದ ಒಳಹರಿವು ಆರಂಭಗೊಂಡಿದ್ದು, 19,172 ಕ್ಯುಸೆಕ್ (1.65 ಟಿಎಂಸಿ ಅಡಿ) ನೀರು ಹರಿದು ಬಂದಿದೆ. ಇದು ಜಲಾಶಯದ ನೀರಿನ ಸಂಗ್ರಹದ (2002 ರಿಂದ) ಇತಿಹಾಸದಲ್ಲೇ ಅತ್ಯಂತ ತಡವಾಗಿ ಆರಂಭಗೊಂಡ ಒಳಹರಿವು.

ಜಲಾಶಯದಲ್ಲಿ ಸದ್ಯ 20.547 ಟಿಎಂಸಿ ಅಡಿ ನೀರು ಸಂಗ್ರಹವಾಗಿದ್ದು, ಬಳಕೆ ಯೋಗ್ಯ 3 ಟಿಎಂಸಿ ಅಡಿ ನೀರಿದೆ.

‘ಕೃಷ್ಣಾ ಅಚ್ಚುಕಟ್ಟು ಪ್ರದೇಶದಲ್ಲಿ ಮಳೆಯ ಕೊರತೆ ಕಾರಣ ಈಗ ಆರಂಭಗೊಂಡಿರುವ ಒಳಹರಿವು ತಕ್ಷಣಕ್ಕೆ ಹೆಚ್ಚಳ ಆಗುವ ಸಾಧ್ಯತೆ ಸದ್ಯಕ್ಕೆ ತೀರ ಕಡಿಮೆ’ ಎಂದು ಅಣೆಕಟ್ಟೆಯ ಮುಖ್ಯ ಎಂಜಿನಿಯರ್ ಎಚ್. ಸುರೇಶ ತಿಳಿಸಿದರು.

ತುಂಗಭದ್ರಾ ಅಣೆಕಟ್ಟೆ: 3 ದಿನದಲ್ಲಿ 6 ಅಡಿ ನೀರು ಹೆಚ್ಚಳ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯದಲ್ಲಿ ನೀರಿನ ಪ್ರಮಾಣ ಮೂರು ದಿನಗಳಲ್ಲಿ 6 ಅಡಿ ಹೆಚ್ಚಳವಾಗಿದೆ. ಬುಧವಾರ ನೀರಿನ ಒಳಹರಿವಿನ ಪ್ರಮಾಣ 15,800 ಕ್ಯುಸೆಕ್ ಇತ್ತು.

ಸೋಮವಾರ ಅಣೆಕಟ್ಟೆಯ ನೀರಿನ ಮಟ್ಟ 1,578.79 ಅಡಿ ಇತ್ತು. ಅದು ಈಗ 1,584.32 ಅಡಿಗೆ ಹೆಚ್ಚಳವಾಗಿದೆ. ಸದ್ಯ ಜಲಾಶಯದಲ್ಲಿ 6.89 ಟಿಎಂಸಿ ಅಡಿಗಳಷ್ಟು ನೀರಿನ ಸಂಗ್ರಹವಿದೆ. ಈ ಬಾರಿ ಮುಂಗಾರು ಆಗಮನ ಸುಮಾರು ಒಂದು ತಿಂಗಳಷ್ಟು ವಿಳಂಬವಾಗಿರುವುದರಿಂದ ಜಲಾಶಯದಲ್ಲಿ ನೀರಿನ ಸಂಗ್ರಹವೂ ವಿಳಂಬವಾಗಿದೆ.

ಆರು ಜಿಲ್ಲೆಗಳಿಗೆ ‘ಯೆಲ್ಲೋ ಅಲರ್ಟ್’


ಬೆಂಗಳೂರು: ರಾಜ್ಯದ ಹಲವೆಡೆ ಗುರುವಾರವೂ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ರಾಜ್ಯದ ಆರು ಜಿಲ್ಲೆಗಳಿಗೆ ‘ಯೆಲ್ಲೋ ಅಲರ್ಟ್’ ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗೆ ‘ಯೆಲ್ಲೋ ಅಲರ್ಟ್’ ನೀಡಲಾಗಿದೆ. ಕರಾವಳಿಯ ಬಹುತೇಕ ಕಡೆ ಹಾಗೂ ದಕ್ಷಿಣ ಒಳನಾಡಿನ ಹಲವು ಕಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಕೆಲವೆಡೆ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿಯಲ್ಲಿ ಬಿರುಗಾಳಿಯ ವೇಗವು ಗಂಟೆಗೆ 40–45 ಕಿ.ಮೀ ಇಂದ 55 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಒಂದೆರಡು ಬಾರಿ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆ ಹೇಳಿದೆ.

ಡಾ.ವಸೀಂ ಮಿರ್ಜಾಗೆ ‘ಗಜ ಗೌರವ’

ಗುಂಡ್ಲುಪೇಟೆ: ಬಂಡೀಪುರ ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರದೇಶದ ಪಶು ವೈದ್ಯ ಡಾ.ವಸೀಂ ಮಿರ್ಜಾ ಅವರು ಪ್ರತಿಷ್ಠಿತ ಗಜ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ಡಾ.ವಸೀಂ ಮಿರ್ಜಾ

ವನ್ಯಜೀವಿಗಳ ಸಂರಕ್ಷಣೆ ಅದರಲ್ಲೂ ವಿಶೇಷವಾಗಿ ಆನೆಗಳ ಸಂರಕ್ಷಣೆಯಲ್ಲಿ ತೊಡಗಿರುವವರನ್ನು ಗುರುತಿಸಿ, ವಿಶ್ವ ಆನೆ ದಿನದ ಅಂಗವಾಗಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಈ ಪ್ರಶಸ್ತಿಯನ್ನು ನೀಡುತ್ತದೆ. ಮೊದಲ ವರ್ಷದ ಪ್ರಶಸ್ತಿಗೆ ತಮಿಳುನಾಡಿನ ಮಲಸಾರ್ ಬುಡಕಟ್ಟಿನ ಐವರು ಮಾವುತರು ಆಯ್ಕೆಯಾಗಿದ್ದರು.

ಒಡಿಶಾದ ಮಹಾನದಿ ಆನೆ ಸಂರಕ್ಷಿತ ಪ್ರದೇಶದ ವ್ಯಾಪ್ತಿಗೆ ಬರುವ ಅಂಗುಲ್‌ನಲ್ಲಿ ಆ.12ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಜಿ20: 3ನೇ ಸಂಸ್ಕೃತಿ ಕಾರ್ಯಕಾರಿ ಗುಂಪಿನ ಸಭೆ ಮುಕ್ತಾಯ

ಹೊಸಪೇಟೆ (ವಿಜಯನಗರ): ಭಾರತದ ಜಿ-20 ಅಧ್ಯಕ್ಷತೆಯಲ್ಲಿ ಮೂರನೇ ಸಂಸ್ಕೃತಿ ಕಾರ್ಯಕಾರಿ ಗುಂಪಿನ (ಸಿಡಬ್ಲ್ಯುಜಿ) ಸಭೆ ಹಂಪಿಯಲ್ಲಿ ಬುಧವಾರ ಸಮಾರೋಪಗೊಂಡಿತು. ಖಜುರಾಹೊ, ಭುವನೇಶ್ವರದಲ್ಲಿ ನಡೆದ ಸಭೆಗಳಲ್ಲಿ ಚರ್ಚಿಸಲಾದ ಶಿಫಾರಸುಗಳ ಮೇಲೆ ಒಮ್ಮತ ಸಾಧಿಸಲು ಆದ್ಯತೆ ನೀಡಲಾಯಿತು.

ಸಿಡಬ್ಲ್ಯುಜಿಯು ನೀತಿ ರಚನೆಯಲ್ಲಿ ಸಂಸ್ಕೃತಿಯನ್ನು ಕೇಂದ್ರಬಿಂದುವನ್ನಾಗಿರಿಸಲು ಶ್ರಮಿಸುತ್ತಿದ್ದು, ಭಾರತದ ಅಧ್ಯಕ್ಷತೆಯ ಈ ವರ್ಷ ಇದಕ್ಕೆ ಇನ್ನಷ್ಟು ಬಲ ಬಂದಿದೆ. ವಾರಾಣಸಿಯಲ್ಲಿ ಆಗಸ್ಟ್ 26ರಂದು ನಡೆಯುವ ನಾಲ್ಕನೇ ಸಿಡಬ್ಲ್ಯುಜಿ ಸಭೆಯ ಮಾಹಿತಿ ಹಾಗೂ ಬೆಳವಣಿಗೆಗಳನ್ನು ಚರ್ಚಿಸುವ ಗೋಷ್ಠಿಯೊಂದಿಗೆ ಹಂಪಿ ಸಭೆ ಮುಕ್ತಾಯವಾಯಿತು. ಹಂಪಿಯ ಹಜಾರ ರಾಮ ದೇವಸ್ಥಾನದ ಆವರಣದಲ್ಲಿ ಜಿ20 ಪ್ರತಿನಿಧಿಗಳು ಯೋಗ ಅಧಿವೇಶನದಲ್ಲಿ ಪಾಲ್ಗೊಂಡರು.

ಸಂಕ್ಷಿಪ್ತ ಸುದ್ದಿ

‘ಆಸ್ಟ್ರೊ ಫಾರ್ಮ್’ ನೆರವಿಗೆ ಭರವಸೆ

ಹಾವೇರಿ: ಶಿಗ್ಗಾವಿ ತಾಲ್ಲೂಕಿನ ಹಳೇ ತರ್ಲಘಟ್ಟ ಸಮೀಪದ ‘ನವಿಲಗದ್ದೆ’ ಗುಡ್ಡದ ತಮ್ಮ ಜಮೀನಿನಲ್ಲಿ ‘ಆಸ್ಟ್ರೊ ಫಾರ್ಮ್’ ಸ್ಥಾಪಿಸಿರುವ ಕುನ್ನೂರು ಗ್ರಾಮದ ನಿರಂಜನಗೌಡ ಖಾನಗೌಡ್ರ ಅವರಿಗೆ ವಿಜ್ಞಾನ,ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಕಚೇರಿಯಿಂದ ನೆರವಿನ ಭರವಸೆ ಸಿಕ್ಕಿದೆ.

‘ಪ್ರಜಾವಾಣಿ’ ಮುಖಪುಟದಲ್ಲಿ ಜುಲೈ 12ರಂದು ಪ್ರಕಟಗೊಂಡ ‘ನವಿಲಗದ್ದೆಯಲ್ಲಿ ಧರೆಗಿಳಿವ ತಾರೆಗಳ ತೋಟ’ ಶೀರ್ಷಿಕೆಯ ವಿಶೇಷ ವರದಿಗೆ ಸಚಿವರು ಸ್ಪಂದಿಸಿದ್ದಾರೆ. ತಮ್ಮ ಟ್ವಿಟರ್ ಖಾತೆಯಲ್ಲಿ ‘ಖಗೋಳ ಪ್ರವಾಸೋದ್ಯಮ ಕೇಂದ್ರ ತೆರೆದಿರುವುದು ಸಂತಸದ ಸಂಗತಿ. ನಿಮ್ಮ ಈ ಐತಿಹಾಸಿಕ ಸಾಧನೆ ಇತರರಿಗೂ ಮಾದರಿಯಾಗಲಿ ಹಾಗೂ ಭವಿಷ್ಯದಲ್ಲಿ ನೀವು ಮತ್ತಷ್ಟು ಸಾಧನೆ ಮಾಡಿ. ನಿಮ್ಮಂತಹ ಸಾಮಾಜಿಕ ಕಳಕಳಿ ಇರುವ ಯುವಕರಿಗೆ ಮತ್ತು ನಿಮ್ಮ ಮುಂದಿನ ಆವಿಷ್ಕಾರಕ್ಕೆ ನಮ್ಮ ಬೆಂಬಲ ಇರುತ್ತದೆ’ ಎಂದಿದ್ದಾರೆ.

ಕಲುಷಿತ ನೀರು: 33 ಜನ ಅಸ್ವಸ್ಥ

ಮೊಳಕಾಲ್ಮುರು (ಚಿತ್ರದುರ್ಗ): ತಾಲ್ಲೂಕಿನ ನಾಗಸಮುದ್ರ ಗ್ರಾಮದಲ್ಲಿ ಬುಧವಾರ ಕಲುಷಿತ ನೀರು ಸೇವಿಸಿ 33 ಜನ ಅಸ್ವಸ್ಥರಾಗಿದ್ದಾರೆ. ಅವರಲ್ಲಿ ಗ್ರಾಮದ ಓಬಕ್ಕ (75), ಚಾಮುಂಡಮ್ಮ (55) ಅವರ ಸ್ಥಿತಿ ಗಂಭೀರವಾಗಿದ್ದರಿಂದ ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ಮಂಗಳವಾರ, ಬುಧವಾರ ಗ್ರಾಮದ ಹಲವರಲ್ಲಿ ವಾಂತಿ, ಭೇದಿ ಕಾಣಿಸಿಕೊಂಡಿದೆ. ಅಸ್ವಸ್ಥರಾಗಿರುವ ಎಲ್ಲರನ್ನೂ ಚಿಕಿತ್ಸೆಗಾಗಿ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪಕ್ಕದ ರಾಂಪುರದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಾಖಲಿಸಲಾಗಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಮಧುಕುಮಾರ್ ತಿಳಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	88.30	4,377	392
ಹಾರಂಗಿ	2,859	2,840.42	917	50
ಕಬಿನಿ	2,284	2,269.06	2,515	800
ಹೇಮಾವತಿ	2,922	2,893	2,843	200
ಲಿಂಗನಮಕ್ಕಿ	1,819	1,751.95	2,620	2,211
ಸೂಪಾ (ಮೀ)	564	527.27	3,682.88	349.94
ಮಾಣಿ	595	573.16	1,098	00
ತುಂಗಭದ್ರಾ	1,633	1,584.32	15,800	266
ಮಲಪ್ರಭಾ	2,079.50	2,043.11	00	194
ಘಟಪ್ರಭಾ	2,175	2,086.13	2,938	90
ಭದ್ರಾ	186	141	1,494	163
ಆಲಮಟ್ಟಿ (ಮೀ)	519.60	507.76	19,172	561
ನಾರಾಯಣಪುರ (ಮೀ)	492.25	486.84	00	50

*ನೆಲಮಟ್ಟದಿಂದ

ಅಂಗನವಾಡಿಗಳಿಗೆ ಕಳಪೆ ಮೊಟ್ಟೆ

ಒಂದನೇ ಪುಟದಿಂದ...

‘ಕೊಳೆತವುಗಳನ್ನು ನಾವು ಬಿಸಾಡುವ ಕಾರಣ ಮೊಟ್ಟೆಗಳ ಕೊರತೆಯಾಗಿ, ಮಕ್ಕಳಿಗೆ ಸರಿಯಾಗಿ ವಿತರಿಸಲು ಆಗುವುದಿಲ್ಲ. ಮನೆಗೆ ಒಯ್ದವರು ಮೊಟ್ಟೆಗಳು ಕೆಟ್ಟಿವೆ ಎಂದು ಜಗಳಕ್ಕೆ ಬರುತ್ತಾರೆ’ ಎಂದೂ ತಿಳಿಸಿದರು.

ಹಿಂದಿನ ವರ್ಷ ಸರ್ಕಾರವು ಒಂದು ಮೊಟ್ಟೆಗೆ ₹5 ರಿಂದ ₹6 ಕೊಡುತಿತ್ತು. ಆದರೆ, ಮಾರುಕಟ್ಟೆಯಲ್ಲಿ ಮೊಟ್ಟೆ ದರ ಏರಿಕೆಯಾದ ಕಾರಣ ಖರೀದಿಸಲು ಕಷ್ಟವಾಯಿತು. 3 ರಿಂದ 4 ತಿಂಗಳಾದರೂ ಹಣ ಬಿಡುಗಡೆ ಆಗಲಿಲ್ಲ. ನಾವು ಸಾಲ ಮಾಡಿ ಮೊಟ್ಟೆ ಖರೀದಿಸಿದೆವು. ಅದಕ್ಕೆ ಸರ್ಕಾರವು ಪ್ರಸಕ್ತ ವರ್ಷ ಜನವರಿಯಿಂದ ತಾಲ್ಲೂಕುವಾರು ಟೆಂಡರ್ ಕರೆದು, ಗುತ್ತಿಗೆದಾರರ ಮೂಲಕ ಅಂಗನವಾಡಿ ಕೇಂದ್ರಗಳಿಗೆ ಮೊಟ್ಟೆ ಪೂರೈಸಲು ಕ್ರಮ ಕೈಗೊಂಡಿತು’ ಎಂದು ವಿವರಿಸಿದರು.

ಆರೋಗ್ಯದ ಮೇಲೆ ದುಷ್ಪರಿಣಾಮ: ‘ಕೆಟ್ಟುಹೋದ ಮೊಟ್ಟೆಗಳನ್ನು ಮಕ್ಕಳು ತಿಂದು ವಾಂತಿ-ಭೇದಿ ಮಾಡಿಕೊಂಡ ಉದಾಹರಣೆಗಳಿವೆ. ಗರ್ಭಿಣಿ ಮತ್ತು ಬಾಣಂತಿಯರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಗುಣಮಟ್ಟದ ಮೊಟ್ಟೆ ಪೂರೈಕೆಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು’ ಎಂದು ಸಾಮಾಜಿಕ ಪರಿವರ್ತನಾ ಜನಾಂದೋಲನದ ಜಿಲ್ಲಾ ಸಂಚಾಲಕಿ ಹಸೀನಾ ಹೆಡಿಯಾಲ ಒತ್ತಾಯಿಸಿದರು.

ಕಳಪೆ ಮೊಟ್ಟೆ; ಗುತ್ತಿಗೆದಾರನಿಗೆ ನೋಟಿಸ್

ಕುಶಾಲನಗರ (ಕೊಡಗು): ತಾಲ್ಲೂಕಿನ ಬಸವನತ್ತೂರು ಅಂಗನವಾಡಿಯಲ್ಲಿ ಗರ್ಭಿಣಿಯರಿಗೆ ಬುಧವಾರ ವಿತರಿಸಿದ ಕೋಳಿಮೊಟ್ಟೆಗಳ ಪೈಕಿ ಕೆಲವು ಕಳಪೆಯಾಗಿದ್ದರಿಂದ, ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡಲಾಗಿದೆ.

ದೂರಿನ ಬಳಿಕ ಭೇಟಿ ನೀಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಭಾರ ಉಪನಿರ್ದೇಶಕ ನಟರಾಜ್ ಅವರು ಪರಿಶೀಲನೆ ನಡೆಸಿದರು.

ನಂತರ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿ, ‘ವಿತರಣೆಯಾಗಿರುವ ಮೊಟ್ಟೆಗಳಲ್ಲಿ 6ರಿಂದ 7 ಕಳಪೆಯಾಗಿದ್ದವು. ವಾಪಸ್ ಪಡೆದು ಉತ್ತಮವಾದುವನ್ನು ವಿತರಿಸುವಂತೆ ಗುತ್ತಿಗೆದಾರರಿಗೆ ಸೂಚಿಸಿ, ನೋಟಿಸ್ ನೀಡಲಾಗಿದೆ’ ಎಂದರು.

ಸ್ಪರ್ಧಾ ವಾಣಿ

ಬಹು ಆಯ್ಕೆ ಪ್ರಶ್ನೆಗಳು



ನವಮಂಗಳೂರು ಬಂದರು

'ಪಂಚಕರ್ಮ' ಸಂಕಲ್ಪ

ಬಂದರು, ಹಡಗು ಮತ್ತು ಜಲಮಾರ್ಗಗಳ ಸಚಿವಾಲಯ (Ministry of Ports,Shipping and Waterways - MoPSW) 'ಪಂಚ ಕರ್ಮ ಸಂಕಲ್ಪ' ವನ್ನು ಘೋಷಿಸಿದೆ. 'ಪಂಚ ಕರ್ಮ ಸಂಕಲ್ಪ'ವು ಈ ಕೆಳಗಿನ 5 ಪ್ರಮುಖ ಘೋಷಣೆಗಳನ್ನು ಒಳಗೊಂಡಿದೆ

1. ಗ್ರೀನ್ ಶಿಪ್ಪಿಂಗ್ ಪರಿಕಲ್ಪನೆಯ ಉತ್ತೇಜನಕ್ಕೆ **ಬಂದರು,** ಹಡಗು ಮತ್ತು ಜಲಮಾರ್ಗಗಳ ಸಚಿವಾಲಯ (MoPSW) ಶೇ 30ರಷ್ಟು ಆರ್ಥಿಕ ಬೆಂಬಲವನ್ನು ನೀಡುತ್ತದೆ.
2. ಗ್ರೀನ್ ಟಗ್ (ಬಂದರಿನ ಒಳಗೆ ಮತ್ತು ಹೊರಗೆ ಇತರ ಹಡಗುಗಳಿಗೆ ಸಹಾಯ ಮಾಡುವ ವಿಶೇಷ ದೋಣಿಗಳು) ಟ್ರಾನ್ಸಿಶನ್ ಪ್ರೋಗ್ರಾಂ ಅಡಿಯಲ್ಲಿ, ಜವಾಹರಲಾಲ್ ನೆಹರೂ ಬಂದರು, ಚಿದಂಬರನಾರ್, ಪಾರಾದೀಪ್ ಮತ್ತು ದೀನದಯಾಳ್, ಕಾಂಡ್ಲಾ ಬಂದರುಗಳು ತಲಾ ಎರಡು ಟಗ್‌ಗಳನ್ನು ಖರೀದಿಸಲಾಗುತ್ತದೆ.
3. ದೀನದಯಾಳ್ ಬಂದರು, ಕಾಂಡ್ಲಾ ಮತ್ತು ಚಿದಂಬರನಾರ್ ಬಂದರು, ಟುಟಿಕೋರಿನ್ ಬಂದರುಗಳನ್ನು ಹಸಿರು ಹೈಡ್ರೋಜನ್ ಹಬ್‌ಗಳಾಗಿ ಅಭಿವೃದ್ಧಿಪಡಿಸಲಾಗುತ್ತದೆ.
4. ನದಿ ಮತ್ತು ಸಮುದ್ರ ವಿಹಾರ ಮತ್ತು ಅವುಗಳ ಬುಕಿಂಗ್ ಅನ್ನು ಸುಗಮಗೊಳಿಸಲು ಮತ್ತು ಮೇಲ್ವಿಚಾರಣೆ ಮಾಡಲು ಏಕಗವಾಕ್ಷಿ ಪೋರ್ಟಲ್ ಅನ್ನು ವಿನ್ಯಾಸಗೊಳಿಸಲಾಗುವುದು.
5. ಜವಾಹರಲಾಲ್ ನೆಹರೂ ಬಂದರು ಮತ್ತು ಚಿದಂಬರನಾರ್ ಬಂದರು, ಟುಟಿಕೋರಿನ್, 2024 ರ ವೇಳೆಗೆ ಸ್ಮಾರ್ಟ್ ಬಂದರುಗಳಾಗಲಿವೆ.

ಸಾಮಾನ್ಯ ಜ್ಞಾನ

ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.



1.ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ಇತ್ತೀಚೆಗೆ 2023ರ ಜಾಗತಿಕ ಲಿಂಗ ಅಂತರ ಸೂಚ್ಯಂಕವನ್ನು ವಿಶ್ವ ಆರ್ಥಿಕ ವೇದಿಕೆ ಬಿಡುಗಡೆ ಮಾಡಿದೆ.

ಬಿ. ಈ ಸೂಚ್ಯಂಕದಲ್ಲಿ ಭಾರತ 146 ದೇಶಗಳಲ್ಲಿ 127ನೇ ಸ್ಥಾನದಲ್ಲಿದೆ.

ಮೇಲಿನ ಹೇಳಿಕೆಗಳಲ್ಲಿ ಸರಿಯಾದ/ವುಗಳನ್ನು ಗುರುತಿಸಿ

1. ಹೇಳಿಕೆ ಎ ಸರಿಯಾಗಿದೆ
2. ಹೇಳಿಕೆ ಬಿ ಸರಿಯಾಗಿದೆ
3. ಎರಡೂ ಹೇಳಿಕೆಗಳು ತಪ್ಪಾಗಿವೆ
4. ಎರಡೂ ಹೇಳಿಕೆಗಳು ಸರಿಯಾಗಿವೆ

ಉತ್ತರ: 4

2. ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ವಿಶ್ವ ಆರ್ಥಿಕ ವೇದಿಕೆಯು, 1971ರಲ್ಲಿ ಸ್ವಿಟ್ಜರ್ಲ್ಯಾಂಡ್‌ನ ಜಿನೀವಾದಲ್ಲಿ ಸ್ಥಾಪನೆಯಾದ ಲಾಭೋದ್ದೇಶರಹಿತ ಸಂಸ್ಥೆಯಾಗಿದೆ.

ಬಿ. 2023ರ ಜಾಗತಿಕ ಲಿಂಗ ಅಂತರ ವರದಿಯ ಪ್ರಕಾರ ಲಿಂಗ ಸಮಾನತೆಯ ವಿಷಯದಲ್ಲಿ ಭಾರತವು ಕಳೆದ ವರ್ಷಕ್ಕಿಂತ ಎಂಟು ಸ್ಥಾನಗಳ ಸುಧಾರಣೆ ಕಂಡಿದೆ.

ಮೇಲಿನ ಹೇಳಿಕೆಗಳಲ್ಲಿ ಸರಿಯಾದ/ವುಗಳನ್ನು ಗುರುತಿಸಿ

1. ಹೇಳಿಕೆ ಎ ಸರಿಯಾಗಿದೆ
2. ಹೇಳಿಕೆ ಬಿ ಸರಿಯಾಗಿದೆ
3. ಎರಡೂ ಹೇಳಿಕೆಗಳು ತಪ್ಪಾಗಿವೆ
4. ಎರಡೂ ಹೇಳಿಕೆಗಳು ಸರಿಯಾಗಿವೆ

ಉತ್ತರ : 4

3. ಏಕರೂಪ ನಾಗರಿಕ ಸಂಹಿತೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

ಎ) ಭಾರತದ ಸಂವಿಧಾನವು ಅನುಚ್ಛೇದ 44ರಲ್ಲಿ ಏಕರೂಪ ನಾಗರಿಕ ಸಂಹಿತೆಗೆ ಅವಕಾಶ ಕಲ್ಪಿಸಿದೆ.

ಬಿ) ಇದು ಮೂಲಭೂತ ಹಕ್ಕುಗಳ ಅಡಿಯಲ್ಲಿ ಬರುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

1. ಎ ಮಾತ್ರ 2. ಬಿ ಮಾತ್ರ
3. ಎ ಮತ್ತು ಬಿ ಎರಡೂ
4. ಎ ಅಥವಾ ಬಿ ಅಲ್ಲ

ಉತ್ತರ: 1

4) ವೈಯಕ್ತಿಕ ಕಾನೂನುಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ

ಎ) ಮದುವೆ, ವಿಚ್ಛೇದನ, ಉತ್ತರಾಧಿಕಾರದಂತಹ ವೈಯಕ್ತಿಕ ಕಾನೂನು ವಿಷಯಗಳು ಒಕ್ಕೂಟ ಪಟ್ಟಿಯ ಅಡಿಯಲ್ಲಿ ಬರುತ್ತವೆ.

ಬಿ) 1937ರ ಷರಿಯತ್ ಕಾನೂನು ಭಾರತದಲ್ಲಿನ ಭಾರತೀಯ ಮುಸ್ಲಿಮರ ವೈಯಕ್ತಿಕ ವಿಷಯಗಳನ್ನು ನಿಯಂತ್ರಿಸುತ್ತದೆ.

ಮೇಲೆ ನೀಡಿರುವ ಹೇಳಿಕೆಗಳನ್ನು ಗಮನಿಸಿ

1. ಎ ಮಾತ್ರ ಸರಿ 2. ಬಿ ಮಾತ್ರ ಸರಿ
4. ಎ ಮತ್ತು ಬಿ ಎರಡೂ ಸರಿ
5. ಎ ಮತ್ತು ಬಿ ಎರಡೂ ಸರಿಯಲ್ಲ

ಉತ್ತರ: 2

5) 22 ನೇ ಕಾನೂನು ಆಯೋಗದ ಅಧ್ಯಕ್ಷರು ಯಾರು?

1. ನ್ಯಾ. ಧನಂಜಯ ವೈ. ಚಂದ್ರಚೂಡ್
2. ನ್ಯಾ. ಸಂಜಯ್ ಕಿಶನ್ ಕೌಲ್
3. ನ್ಯಾ. ಕೆ.ಎಂ. ಜೋಸೆಫ್
4. ನ್ಯಾ. ಋತುರಾಜ್ ಅವಸ್ತಿ

ಉತ್ತರ: 4

6) ಭಾರತದ ಕಾನೂನು ಆಯೋಗಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

ಎ. ಭಾರತದ ಕಾನೂನು ಆಯೋಗವು ಶಾಸನಬದ್ಧ ಸಂಸ್ಥೆಯಾಗಿದೆ.

ಬಿ. ಎಂ.ಸಿ. ಸೆಟಲ್ವಾಡ್ ಮೊದಲ ಕಾನೂನು ಆಯೋಗದ ಅಧ್ಯಕ್ಷರಾಗಿದ್ದರು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ ?

(1) ಎ ಮಾತ್ರ (2) ಬಿ ಮಾತ್ರ
(3) ಎ ಮತ್ತು ಬಿ ಎರಡೂ
(4) ಎ ಮತ್ತು ಬಿ ಎರಡೂ ಅಲ್ಲ

ಉತ್ತರ: 2

7. ಲುಗಾನೋ ತತ್ವಗಳು ಕೆಳಗಿನ ಯಾವ ವಿಚಾರಕ್ಕೆ ಸಂಬಂಧಿಸಿದಂತೆ ಸ್ಪಷ್ಟ ವಿವರಣೆಯನ್ನು ನೀಡುತ್ತವೆ?

ಎ. ಹವಾಮಾನ ಬದಲಾವಣೆಯನ್ನು ತಡೆಗಟ್ಟಲು ತೆಗೆದುಕೊಂಡಿರುವ ನಿರ್ಧಾರ.

ಬಿ. ಬಂಡವಾಳ ಹಿಂತೆಗೆತ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲು ಅಂತರರಾಷ್ಟ್ರೀಯ ಮಟ್ಟದಲ್ಲಿ ರಚನೆಯಾಗಿರುವ ಕಾರ್ಯಸೂಚಿ.

ಸಿ. ಉಕ್ರೇನ್ ರಾಷ್ಟ್ರದ ಪುನರ್ ನಿರ್ಮಾಣಕ್ಕಾಗಿ ಸಿದ್ಧವಾಗಿರುವ ಕಾರ್ಯಸೂಚಿ.

ಡಿ. ಯುದ್ಧ ಕೈದಿಗಳ ರಕ್ಷಣೆಗೆ ಸಂಬಂಧಿಸಿದಂತೆ ಸಿದ್ಧವಾಗಿರುವ ಮಾರ್ಗಸೂಚಿಗಳು.

ಉತ್ತರ: ಸಿ

8. ಇತ್ತೀಚೆಗೆ ವೈಕಂ ಸತ್ಯಾಗ್ರಹದ ಶತಮಾನೋತ್ಸವವನ್ನು ಭಾರತದ ಯಾವ ಭಾಗದಲ್ಲಿ ಆಯೋಜಿಸಲಾಗಿತ್ತು?

ಎ. ಕೋಟ್ಟಯಂ, ಕೇರಳ.
ಬಿ. ಕೋಲ್ಕತ್ತಾ, ಪಶ್ಚಿಮ ಬಂಗಾಳ.
ಸಿ. ಚೆನ್ನೈ, ತಮಿಳುನಾಡು.
ಡಿ. ವಿಶಾಖಪಟ್ಟಣಂ, ಆಂಧ್ರಪ್ರದೇಶ.

ಉತ್ತರ : ಎ

9. ಕೆಳಗಿನ ಯಾವ ವಿಚಾರಗಳಲ್ಲಿ ಅಮೆರಿಕ ಭಾರತಕ್ಕೆ ವಿಶೇಷ ವಿನಾಯತಿಗಳನ್ನು ಕಲ್ಪಿಸಿದೆ?

1. ಪರಮಾಣು ಪ್ರಸರಣ ರಹಿತ ಒಪ್ಪಂದಕ್ಕೆ ಒತ್ತಡವನ್ನು ಹೇರಿರುವುದಿಲ್ಲ.
2. ಸಮಗ್ರ ಪರಮಾಣು ಪರೀಕ್ಷೆ ನಿಷೇಧ ಒಪ್ಪಂದಕ್ಕೂ ಕೂಡ ಯಾವುದೇ ಒತ್ತಡವನ್ನು ಹೇರಿರುವುದಿಲ್ಲ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮಾತ್ರ ಬಿ. 2 ಮಾತ್ರ ಸಿ. 1 ಮತ್ತು 2 ಡಿ.
ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಡಿ

10. ಕೆಳಗಿನ ಯಾವ ಒಪ್ಪಂದದ ಅನ್ವಯ ಭಾರತ-ಅಮೆರಿಕ ಅಣ್ವಸ್ತ್ರ ಒಪ್ಪಂದ ಜಾರಿಗೆ ಬಂದಿತು?

ಎ. 1 2 3 ಒಪ್ಪಂದ. ಬಿ. 1 3 2 ಒಪ್ಪಂದ.
ಸಿ. 1 1 2 ಒಪ್ಪಂದ. ಡಿ. 2 3 4 ಒಪ್ಪಂದ.

ಉತ್ತರ : ಎ

11. ದೇಶದ ಆರ್ಥಿಕತೆಗೆ ಎಂಎಸ್‌ಎಂಇಗಳು ಯಾವ ರೀತಿ ಕೊಡುಗೆ ನೀಡುತ್ತವೆ ?.

ಎ. ಇವು ದೇಶದ ಒಟ್ಟು ಮೌಲ್ಯ ಸೇರ್ಪಡೆಯಲ್ಲಿ ಶೇ 32 ರಷ್ಟು ಹೊಂದಿವೆ.

ಬಿ. ಎಂಎಸ್‌ಎಂಇ ಗಳು ದೇಶದಲ್ಲಿ ಸುಮಾರು 11.10 ಕೋಟಿಯಷ್ಟು ಉದ್ಯೋಗಗಳನ್ನು ಸೃಷ್ಟಿಸಿವೆ.

ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ: ಸಿ.

12. ಎಂಎಸ್‌ಎಂಇ ಗಳ ಬೆಂಬಲಕ್ಕೆ ಸರ್ಕಾರ ನೀಡುತ್ತಿರುವ ತಾಂತ್ರಿಕ ಸಹಾಯವೇನು?

ಎ. ಸಣ್ಣ ಪ್ರಮಾಣದ ಕೈಗಾರಿಕಾ ಅಭಿವೃದ್ಧಿ ಸಂಘಟನೆಯನ್ನು 1954ರಲ್ಲಿ ಸ್ಥಾಪಿಸಿರುವುದು.

ಬಿ. 1982ರಲ್ಲಿ ಗ್ರಾಮೀಣ ತಂತ್ರಜ್ಞಾನ ಅಭಿವೃದ್ಧಿ ಕೌನ್ಸಿಲ್ ಸ್ಥಾಪಿಸಿರುವುದು.

ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ:ಸಿ.

13. ರಾಷ್ಟ್ರೀಯ ಷೇರುನಿಧಿಯನ್ನು ಯಾವಾಗ ಸ್ಥಾಪಿಸಲಾಯಿತು?

ಎ. 1987 ಬಿ. 1986 ಸಿ. 1994 ಡಿ. 1995

ಉತ್ತರ: ಎ.



ಎಂಟಿಎಸ್ ಎಂದರೇನು?

ಕೇಂದ್ರ ಸರ್ಕಾರದ ಸಚಿವಾಲಯಗಳಲ್ಲಿ ಗ್ರೂಪ್ ಸಿ ಅಡಿಯಿರುವ ನಾನ್ ಟೆಕ್ನಿಕಲ್ ಮಲ್ಟಿ ಟಾಸ್ಕಿಂಗ್ ಹುದ್ದೆಗಳಿಗೆ ಎಂಟಿಎಸ್ ಹುದ್ದೆಗಳು ಎನ್ನುತ್ತಾರೆ. ಪಿಓನ್, ಡ್ರಾಫ್ಟಿ, ಚೌಕಿದಾರ್, ಸಫಾಯಿವಾಲಾ ಇತರೆ ಹುದ್ದೆಗಳು ಇದರ ಅಡಿ ಬರುತ್ತವೆ.

ಹವಾಲ್ದಾರ್ ಹುದ್ದೆಗಳು ಯಾವುವು?

ಸಿಬಿಐಸಿ ಹಾಗೂ ಸಿಬಿಎನ್ ಕೇಂದ್ರ ಹಣಕಾಸು ಸಚಿವಾಲಯದ ರೆವಿನ್ಯೂ ಡಿಪಾರ್ಟ್‌ಮೆಂಟ್ ಅಡಿ ಬರುವ ಸಂಸ್ಥೆಗಳಾಗಿವೆ. ಇದರಲ್ಲಿ ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ರೀತಿ ಕೆಲಸ ಮಾಡುವ ಹುದ್ದೆಗಳಿಗೆ ಹವಾಲ್ದಾರ್ ಹುದ್ದೆಗಳು ಎನ್ನುತ್ತಾರೆ.

ಕೇಂದ್ರೀಯ ಸಚಿವಾಲಯಗಳಲ್ಲಿ ಎಂಟಿಎಸ್, ಹವಾಲ್ದಾರ್ ಹುದ್ದೆಗಳು

ಮಂಜುನಾಥ್ ಭದ್ರಶೆಟ್ಟಿ

ಕೇಂದ್ರದ ಸಿಬ್ಬಂದಿ ನೇಮಕಾತಿ ಆಯೋಗದ (SSC- Staff Selection Commission) ವತಿಯಿಂದ ಸಚಿವಾಲಯಗಳಲ್ಲಿ ಖಾಲಿ ಇರುವ 'ನಾನ್ ಟೆಕ್ನಿಕಲ್ ಮಲ್ಟಿ ಟಾಸ್ಕಿಂಗ್ ಸಿಬ್ಬಂದಿ' (MTS) ಮತ್ತು 'ಸಿಬಿಐಸಿ-ಸಿಬಿಎನ್'ನಲ್ಲಿ ಖಾಲಿಯಿರುವ ಹವಾಲ್ದಾರ್ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಸಚಿವಾಲಯಗಳಲ್ಲಿ ಒಟ್ಟು 1,198 ನಾನ್ ಟೆಕ್ನಿಕಲ್ ಮಲ್ಟಿ ಟಾಸ್ಕಿಂಗ್ ಹುದ್ದೆಗಳಿವೆ. ಈ ಹುದ್ದೆಗಳು ಕೇಂದ್ರ ಸರ್ಕಾರದ ಸಚಿವಾಲಯದಲ್ಲಿನ ನಾನ್ ಟೆಕ್ನಿಕಲ್ ಗ್ರೂಪ್- ಸಿ ಹುದ್ದೆಗಳಾಗಿವೆ. ಇದರಲ್ಲಿ ಕರ್ನಾಟಕ-ಕೇರಳ ಸರ್ಕಲ್‌ನ 68 ಹುದ್ದೆಗಳೂ ಕೂಡ ಸೇರಿವೆ.

ಕೇಂದ್ರದ ಹಣಕಾಸು ಸಚಿವಾಲಯದಡಿ ಕಾರ್ಯನಿರ್ವಹಿಸುವ ಕಂದಾಯ ಇಲಾಖೆಯ ಕೇಂದ್ರೀಯ ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್ ಮಂಡಳಿ (CBIC) ಹಾಗೂ ಸೆಂಟ್ರಲ್ ಬ್ಯೂರೊ ಆಫ್ ನಾರ್ಕೋಟಿಕ್ಸ್ (CBN) ನಲ್ಲಿ 360 ಹವಾಲ್ದಾರ್ ಖಾಲಿ ಹುದ್ದೆಗಳಿವೆ. ಇದರಲ್ಲಿ ಕರ್ನಾಟಕ-ಕೇರಳ ಸರ್ಕಲ್‌ನ 5 ಹುದ್ದೆಗಳೂ ಸೇರಿವೆ.

ಅರ್ಜಿ ಸಲ್ಲಿಕೆ?

ಅರ್ಜಿ ಸಲ್ಲಿಸಲು ಜುಲೈ 21 ಕಡೆಯ ದಿನ. ಅರ್ಜಿ ಶುಲ್ಕ ₹100 ಇರಲಿದೆ. (ಎಸ್.ಎಸಿ, ಎಸ್.ಟಿ, ಮಾಜಿ ಸೈನಿಕರಿಗೆ ಶುಲ್ಕ ವಿನಾಯಿತಿ). ಶುಲ್ಕ ಕಟ್ಟಿದ ನಂತರ ಇತರೆ ಮಾಹಿತಿ ಅಪ್ಡೇಟ್ ಮಾಡಲು ಜುಲೈ 27ರವರೆಗೆ ಸಮಯವಿದೆ.


ವಯೋಮಿತಿ, ಶೈಕ್ಷಣಿಕ ಅರ್ಹತೆ

- ಎಂಟಿಎಸ್ ಹುದ್ದೆಗಳಿಗೆ ವಯೋಮಿತಿ ಕನಿಷ್ಠ 18 ರಿಂದ ಗರಿಷ್ಠ 25 ಇದ್ದು, ಹವಾಲ್ದಾರ್ ಹುದ್ದೆಗಳಿಗೆ ಕನಿಷ್ಠ 18 ರಿಂದ ಗರಿಷ್ಠ 27 ಇದೆ.
- ಎರಡೂ ಹುದ್ದೆಗಳಿಗೂ ಕನಿಷ್ಠ ಶೈಕ್ಷಣಿಕ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ.
- ಮೀಸಲು ವರ್ಗಗಳವರಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ.
- ಆರಂಭಿಕ ವೇತನ ₹ 32,877 ಇದ್ದು ಇತರೆ ಭತ್ಯೆಗಳು ಸೇರುತ್ತವೆ.

ಪರೀಕ್ಷೆ ಹೇಗಿರುತ್ತದೆ?

ಈ ಹುದ್ದೆಗಳಿಗೆ ಸೆಪ್ಟೆಂಬರ್‌ನಲ್ಲಿ ಕಂಪ್ಯೂಟರ್ ಆಧರಿತ ಪರೀಕ್ಷೆ(ಸಿಬಿಟಿ)ನಡೆಯಲಿವೆ. ಎಂಟಿಎಸ್ ಹುದ್ದೆಗಳಿಗೆ ಮಾತ್ರ ಸಿಬಿಟಿ ಪರೀಕ್ಷೆ ಇರುತ್ತದೆ. ಹವಾಲ್ದಾರ್ ಹುದ್ದೆಗಳಿಗೆ ಸಿಬಿಟಿ ಹೊತೆಗೆ ದೈಹಿಕ ಸಹಿಷ್ಣುತೆ ಹಾಗೂ ದೈಹಿಕ ಸಾಮರ್ಥ್ಯ ಪರೀಕ್ಷೆ ನಡೆಯಲಿದೆ.

ಮೊದಲು ನಡೆಯುವ ಸಿಬಿಟಿಯಲ್ಲಿ ಎರಡು ಪಶ್ನೆಪತ್ರಿಕೆಗಳಿರುತ್ತವೆ. ಮೊದಲ ಪತ್ರಿಕೆಗೆ (2 ಭಾಗ- ನ್ಯೂಮೆರಿಕಲ್ ಆ್ಯಂಡ್ ಮ್ಯಾಥಮೆಟಿಕ್ ಎಬಿಲಿಟಿ, ರಿಸನಿಂಗ್ ಎಬಿಲಿಟಿ ಆ್ಯಂಡ್ ಪ್ರಾಬ್ಲಮ್ ಸಾಲ್ವಿಂಗ್) 120 ಅಂಕಗಳಿರುತ್ತವೆ. 45 ನಿಮಿಷ



ಅವಧಿಯ ಪರೀಕ್ಷೆ ಇದು. ಎರಡು ಭಾಗಗಳಲ್ಲಿ ತಲಾ 20 ಪ್ರಶ್ನೆಗಳಿರುತ್ತವೆ.

ಎರಡನೇ ಪತ್ರಿಕೆ (ಸಾಮಾನ್ಯ ಜ್ಞಾನ, ಇಂಗ್ಲಿಷ್ ಭಾಷಾ ಸಾಮರ್ಥ್ಯ) 150 ಅಂಕಗಳಿಗೆ ಇರಲಿದ್ದು ಎರಡು ಭಾಗಗಳಿರುತ್ತವೆ. ಇದರಲ್ಲಿ ತಲಾ 20 ಪ್ರಶ್ನೆಗಳಿರುತ್ತವೆ.

ಮುಂದಿನ ಹಂತಕ್ಕೆ ಪ್ರವೇಶಿಸಬೇಕಾದರೆ ಎರಡರಲ್ಲೂ ಕನಿಷ್ಠ ಶೇ 30ರಷ್ಟು ಅಂಕಗಳನ್ನು ಗಳಿಸಲೇಬೇಕು. ಯಾವುದೇ ನಕಾರಾತ್ಮಕ ಅಂಕಗಳು ಇರುವುದಿಲ್ಲ.

ಇಂಗ್ಲಿಷ್, ಹಿಂದಿ ಹಾಗೂ ಕನ್ನಡ ಸೇರಿದಂತೆ 13 ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ನಡೆಯಲಿದೆ. ಇದರಿಂದ ಈ ಹುದ್ದೆಗಳಿಗೆ ಹೋಗಲು ಪ್ರಾದೇಶಿಕ ಭಾಷೆಯಲ್ಲಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಸಹಾಯವಾಗಲಿದೆ.

ವಿವಿಧ ಸರ್ಕಲ್‌ಗಳ ಹುದ್ದೆ ವಿಂಗಡಣೆ, ಹವಾಲ್ದಾರ್ ಹುದ್ದೆಗಳ ದೈಹಿಕ ಸಹಿಷ್ಣುತೆ, ಸಾಮರ್ಥ್ಯ ಪರೀಕ್ಷೆ ಯ ಮಾನದಂಡಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗೆ ಆಸಕ್ತರು SSC ಅಧಿಕೃತ ವೆಬ್‌ಸೈಟ್ https://ssc.nic.in/ ವೀಕ್ಷಿಸಬೇಕು.

ಸಿಬ್ಬಂದಿ ನೇಮಕಾತಿ ಆಯೋಗ

ಕೇಂದ್ರ ಸಿಬ್ಬಂದಿ ನೇಮಕಾತಿ ಆಯೋಗ (SSC) ಕೇಂದ್ರ ಸರ್ಕಾರದ ವಿವಿಧ ಸಚಿವಾಲಯ, ಇಲಾಖೆಗಳಿಗೆ ಬೇಕಿರುವ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ನೋಡಿಕೊಳ್ಳುತ್ತದೆ. ಇದು 1975ರಲ್ಲಿ ಸ್ಥಾಪನೆಯಾಗಿದ್ದು, ಇದರ ಕೇಂದ್ರ ಕಚೇರಿ ನವದೆಹಲಿಯಲ್ಲಿದೆ.

ಸೆಂಟ್ರಲ್ ಬ್ಯಾಂಕ್‌ನಲ್ಲಿ ಸಾವಿರ ಮ್ಯಾನೇಜರ್ ಹುದ್ದೆಗಳು

ಆರ್ ಕೆ ಬಾಲಚಂದ್ರ

ದೇಶದ ಪ್ರಮುಖ ಸಾರ್ವಜನಿಕ ಬ್ಯಾಂಕ್‌ಗಳಲ್ಲಿ ಒಂದಾಗಿರುವ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ದೇಶದಾದ್ಯಂತ ಒಂದು ಸಾವಿರ ಮ್ಯಾನೇಜರ್ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಈ ಕುರಿತು ಅಧಿಸೂಚನೆ ಪ್ರಕಟಿಸಿದ್ದು, ಅರ್ಹ ಅಭ್ಯರ್ಥಿಗಳು ಜುಲೈ 17ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ಮಿಡಲ್ ಮ್ಯಾನೇಜ್‌ಮೆಂಟ್ ಸ್ಕೇಲ್-II ಗೆ ಸೇರಿದ ವ್ಯವಸ್ಥಾಪಕರ ಹುದ್ದೆಗಳಿಗೆ ನೇಮಕಾತಿ ನಡೆಯಲಿದೆ. ಒಂದು ಸಾವಿರ ಹುದ್ದೆಗಳ ಪೈಕಿ ಎಸ್.ಸಿ ಅಭ್ಯರ್ಥಿಗಳಿಗೆ 150, ಎಸ್.ಟಿ ವರ್ಗದವರಿಗೆ 75, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 270, ಆರ್ಥಿಕ ದುರ್ಬಲ ವರ್ಗದವರಿಗೆ 100 ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 405 ಹುದ್ದೆಗಳನ್ನು ಮೀಸಲಿಡಲಾಗಿದೆ.

ಅರ್ಹತೆಗಳು: ಯಾವುದೇ ವಿಷಯದಲ್ಲಿ ಪದವಿ ಪಡೆದಿರುವ ಮತ್ತು ಸಿಎಐಐಬಿ (CAIIB) ಪಾಸಾಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರು. ಗಮನಿಸಿ; ಉನ್ನತ ಅರ್ಹತೆ ಹೊಂದಿರುವ ಅಭ್ಯರ್ಥಿಗೆ ಆದ್ಯತೆ ನೀಡಲಾಗುವುದು.

ಅನುಭವ: ರಾಷ್ಟ್ರೀಕೃತ/ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ/ ಗ್ರಾಮೀಣ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿ ಕನಿಷ್ಠ 3 ವರ್ಷಗಳ ಅನುಭವ ಅಥವಾ ಆರ್‌ಆರ್‌ಬಿ/ರಾಷ್ಟ್ರೀಕೃತ/ಖಾಸಗಿ ವಲಯದ ಬ್ಯಾಂಕ್ ನಲ್ಲಿ ಕ್ಲರ್ಕ್ ಆಗಿ ಕನಿಷ್ಠ 6 ವರ್ಷಗಳ ಅನುಭವ ಮತ್ತು ಎಂಬಿಎ/ಎಂಸಿಎ/ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ರಿಸ್ಕ್ ಮ್ಯಾನೇಜ್‌ಮೆಂಟ್/ಖಜಾನೆ ನಿರ್ವಹಣೆ/ ವಿದೇಶಿ ವಿನಿಮಯ/ ವ್ಯಾಪಾರ ಹಣಕಾಸು/ಸಿಎ/ಐಸಿಡಬ್ಲ್ಯುಎ/ ಸಿಎಂಎ/ಸಿಎಫ್ಎ/ಪಿಜಿಡಿಎಂ/ಭಾರತೀಯ ಬ್ಯಾಂಕಿಂಗ್ ಹಣಕಾಸು ಸಂಸ್ಥೆಯಿಂದ ಡಿಪ್ಲೊಮಾ ಪಡೆದಿರಬೇಕು.

ವಯೋಮಿತಿ: 2023ರ ಮೇ31ಕ್ಕೆ ಅಭ್ಯರ್ಥಿಗಳ ಗರಿಷ್ಠ ವಯಸ್ಸು 32 ವರ್ಷ ಮೀರಿರಬಾರದು. ಮೀಸಲಾತಿ ವ್ಯಾಪ್ತಿಗೆ ಒಳಪಡುವ ಅಭ್ಯರ್ಥಿಗಳಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ಇದೆ. ಆಯ್ಕೆಯಾದ ಅಭ್ಯರ್ಥಿಗಳನ್ನು ದೇಶದ ಯಾವುದೇ ಭಾಗದಲ್ಲಿ ನಿಯೋಜಿಸಬಹುದು. ಹಾಗಾಗಿ, ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ಸಿದ್ಧ ಇರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿದೆ. ಒಬ್ಬ ಅಭ್ಯರ್ಥಿ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಬಾರದು.

ಅರ್ಜಿ ಶುಲ್ಕ: ಎಸ್.ಸಿ/ಎಸ್.ಟಿ ವರ್ಗ/ ಮಹಿಳಾ ಅಭ್ಯರ್ಥಿಗಳು ಹಾಗೂ ವಿಶೇಷ ಚೇತನ ಅಭ್ಯರ್ಥಿಗಳಿಗೆ ₹175 ಹಾಗೂ ಉಳಿದ ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ₹850 ಶುಲ್ಕ ನಿಗದಿ ಪಡಿಸಲಾಗಿದೆ. ಇದರೊಂದಿಗೆ ನಿಗದಿತ ಶೇ18 ಜಿಎಸ್‌ಟಿ ಪಾವತಿಸಬೇಕು.

ಲಿಖಿತ ದೃಢೀಕರಣ: ಕೈಬರಹದ ಘೋಷಣೆಯ ಪತ್ರ ಈ ರೀತಿಯಲ್ಲಿ ಬರೆದು ಅಪ್ಲೋಡ್ ಮಾಡಬೇಕು,_______ '(ಅಭ್ಯರ್ಥಿಯ ಹೆಸರು),ಈ ಮೂಲಕ ಅರ್ಜಿಯಲ್ಲಿ ಸಲ್ಲಿಸಿದ ಎಲ್ಲಾ ಮಾಹಿತಿಯು ಸರಿಯಾಗಿದೆ. ನಿಜ ಮತ್ತು ಮಾನ್ಯವಾಗಿದೆ ಎಂದು ಘೋಷಿಸುತ್ತೇನೆ. ಅಗತ್ಯವಿದ್ದಾಗ ನಾನು ಪೂರಕ ದಾಖಲೆಗಳನ್ನು ಪ್ರಸ್ತುತಪಡಿಸುತ್ತೇನೆ'.

ಮೇಲೆ ತಿಳಿಸಿದ ಲಿಖಿತ ಘೋಷಣೆಯು ಅಭ್ಯರ್ಥಿಯ ಕೈ ಬರಹದಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಮಾತ್ರ ಇರಬೇಕು. ಕ್ಯಾಪಿಟಲ್ ಲೆಟರ್ಸ್‌ನಲ್ಲಿ ಇರಬಾರದು. ಇದನ್ನು ಬೇರೆಯವರು ಅಥವಾ ಬೇರೆ ಯಾವುದೇ ಭಾಷೆಯಲ್ಲಿ ಬರೆದಿದ್ದರೆ, ಅರ್ಜಿಯನ್ನು ಅಮಾನ್ಯವೆಂದು ಪರಿಗಣಿಸಲಾಗುತ್ತದೆ.

ಕ್ಯಾಪಿಟಲ್ ಲೆಟರ್‌ಗಳಲ್ಲಿ ಹಾಕಿದ ಸಹಿಯನ್ನು ಸ್ವೀಕರಿಸಲಾಗುವುದಿಲ್ಲ. ಎಡ ಹೆಬ್ಬೆರಳಿನ ಗುರುತು ಸರಿಯಾಗಿ ಸ್ಕ್ಯಾನ್ ಮಾಡಬೇಕು ಮತ್ತು ಮಸುಕಾಗಿರಬಾರದು.

ಆಯ್ಕೆ ಪ್ರಕ್ರಿಯೆಯ ಹಂತದಲ್ಲಿ ಅಥವಾ ಅಪಾಯಿಂಟ್‌ಮೆಂಟ್‌ನ ನಂತರ ನಿಮ್ಮ ಕೈಬರಹದ ಘೋಷಣೆ ಹಾಗೂ ನಿಮ್ಮ ಕೈಬರಹದಲ್ಲಿ ಭಿನ್ನವಾಗಿರುವುದು ತಜ್ಞರ ವಿಶ್ಲೇಷಣೆಯಲ್ಲಿ ಕಂಡುಬಂದರೆ, ಅಭ್ಯರ್ಥಿಯ ಉಮೇದುವಾರಿಕೆಯನ್ನ ರದ್ದುಗೊಳಿಸಲಾಗುವುದು. ಹೀಗಾಗಿ ಅರ್ಜಿ ಸಲ್ಲಿಸುವ ಹಂತದಲ್ಲಿಯೇ ಬಹಳ ಎಚ್ಚರಿಕೆಯಿಂದ ಅರ್ಜಿ ಸಲ್ಲಿಸುವುದು ಒಳಿತು.

ನೆನಪಿಡಿ

- ಎನ್‌ಬಿಎಫ್‌ಸಿ/ಸಹಕಾರಿಬ್ಯಾಂಕ್‌ಗಳು/ವಿಮಾ ವಲಯ/ಸರಕಾರದ ಹಣಕಾಸು ಸಂಸ್ಥೆಗಳ ರೆಗ್ಯುಲರ್ ಅಥವಾ ಅರೆಕಾಲಿಕ ಅಭ್ಯರ್ಥಿಗಳು ಅರ್ಹರಾಗುವುದಿಲ್ಲ.
- ಕ್ರೆಡಿಟ್, ಫಾರಿನ್ ಎಕ್ಸ್‌ಚೇಂಜ್ ಹಾಗೂ ಮಾರ್ಕೆಟಿಂಗ್ ವಿಭಾಗದಲ್ಲಿ ಕೆಲಸ ಮಾಡಿರುವ ಅಭ್ಯರ್ಥಿಗಳಿಗೆ ನೇಮಕದಲ್ಲಿ ಆದ್ಯತೆ ನೀಡಲಾಗುತ್ತದೆ.
- ಆಯ್ಕೆಯಾದ ಅಭ್ಯರ್ಥಿಗಳು ₹ 3 ಲಕ್ಷದ ಬಾಂಡ್ ಅನ್ನು ಬ್ಯಾಂಕಿಗೆ ಸೇರಿದ ದಿನಾಂಕದಿಂದ 3 ವರ್ಷಗಳ ಅವಧಿಗೆ ನೀಡಬೇಕು.



ನೇಮಕ ಹೇಗಿರುತ್ತದೆ?

ಆನ್‌ಲೈನ್ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನದ ಮೂಲಕ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ. ಬ್ಯಾಂಕಿಂಗ್, (60 ಅಂಕ 60 ಪ್ರಶ್ನೆ) ಕಂಪ್ಯೂಟರ್ ಜ್ಞಾನ ಹಾಗೂ ಪ್ರಸ್ತುತ ಆರ್ಥಿಕ ಕ್ಷೇತ್ರದಲ್ಲಿನ ಬೆಳವಣಿಗೆ ಮತ್ತು ಸಾಮಾನ್ಯ ಅರಿವು (ತಲಾ 20 ಅಂಕಗಳ 20 ಪ್ರಶ್ನೆಗಳು) ಸಂಬಂಧಿಸಿದಂತೆ 100 ಅಂಕಗಳ 100 ಪ್ರಶ್ನೆಗಳು ಇರುತ್ತವೆ. ಉತ್ತರಿಸಲು 60 ನಿಮಿಷ ಸಮಯವಿರುತ್ತದೆ. ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಪರೀಕ್ಷೆ ಬರೆಯಲು ಅವಕಾಶವಿದೆ. ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶವಿಲ್ಲ. ಮುಂಬರುವ ಆಗಸ್ಟ್ ಎರಡನೇ ಅಥವಾ ಮೂರನೇ ವಾರ ಪರೀಕ್ಷೆ ನಡೆಸುವ ಸಾಧ್ಯತೆ ಇರುತ್ತದೆ.

ನೇಮಕ ವಿಧಾನ: ಆನ್‌ಲೈನ್ ಪರೀಕ್ಷೆ ಮತ್ತು ಸಂದರ್ಶನದ ಮೂಲಕ. ಸಂದರ್ಶನದ ನಂತರ ಅಗತ್ಯವಿದ್ದರೆ ಗುಂಪು ಚರ್ಚೆ ನಡೆಸಲಾಗುತ್ತದೆ.

ವೇತನ: ₹48170 - ₹69810

ಹೆಚ್ಚಿನಮಾಹಿತಿಗಾಗಿ ಸಂಪರ್ಕ ಕೊಂಡಿ:
www.centralbankofindia.co.in

ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ಕೊಂಡಿ ಬಳಸಿ:
https://ibpsonline.ibps.in/cbimmjun23/

(ಲೇಖಕರು: ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

ತಿದ್ದುಪಡಿ: ಜುಲೈ 6ರ ಸಂಚಿಕೆಯ 'ಪ್ರಚಲಿತ ವಿದ್ಯಮಾನಗಳು' ವಿಭಾಗದಲ್ಲಿನ 'ವೀರಾಂಗಣ ದುರ್ಗಾವತಿ' ಲೇಖನದಲ್ಲಿ ದುರ್ಗಾವತಿ ವಿವಾಹವಾಗಿದ್ದು 1542ರಲ್ಲಿ ಹಾಗೂ ಮಗುವಿಗೆ ಜನ್ಮ ನೀಡಿದ್ದು 1545 ಎಂದು ಪ್ರಕಟವಾಗಬೇಕಿತ್ತು. ಈ ಮಾಹಿತಿ ತಪ್ಪಾಗಿ ಪ್ರಕಟವಾಗಿತ್ತು.

ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಕೆಣಕ್ಕಿದ್ದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು

‘ಅಡ್ಜೆಸ್ಟ್‌ಮೆಂಟ್ ಸಾಬೀತು ಮಾಡಿದರೆ ನಿವೃತ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಯಾರ ಜತೆಗಾದರೂ ಅಡ್ಜೆಸ್ಟ್‌ಮೆಂಟ್ ಮಾಡಿಕೊಂಡಿದ್ದೇನೆ ಎಂಬುದನ್ನು ಸಾಬೀತು ಮಾಡಿದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ನೀವು ಪದೇ ಪದೇ ವಿರೋಧ ಪಕ್ಷ ನಾಯಕ ಆಗಲ್ಲ ಎಂದು ಹೇಳುತ್ತೀರಿ. ಹಾಗಿದ್ದರೆ ನೀವು ಯಾರ ಜೊತೆಗೊ ಅಡ್ಜೆಸ್ಟ್‌ಮೆಂಟ್ ಮಾಡಿಕೊಂಡಿದ್ದೀರಿ’ ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರು ಸಿದ್ದರಾಮಯ್ಯ ಅವರನ್ನು ಕೆಣಕಿದರು.

‘ನಾನು ಯಾರ ಜೊತೆಗೂ ನನ್ನ ಜೀವನದಲ್ಲಿ ಅಡ್ಜೆಸ್ಟ್‌ಮೆಂಟ್ ರಾಜಕೀಯ ಮಾಡಿಲ್ಲ. ಅಂತಹ ಜಾಯಮಾನವೇ ಇಲ್ಲ’ ಎಂದು ಹೇಳಿದರು.

‘ನೀವು ಪದೇ ಪದೇ ಮಾತನಾಡುವುದರಿಂದ ಸಂಸದೀಯ ಪಟು ಆಗಲ್ಲ. ನೀವು ಎಷ್ಟೇ ಕಿರುಚಾಡಿದರೂ ನನಗೆ ಇರುವ ಮಾಹಿತಿ ಪ್ರಕಾರ ನಿಮಗೆ ವಿಪಕ್ಷ ನಾಯಕ ಮಾಡುವುದಿಲ್ಲ. ಆರಗ ಜ್ಞಾನೇಂದ್ರ ಆಕಾಂಕ್ಷಿ ಅಲ್ಲ. ಅಶ್ವತ್ಥ ನಾರಾಯಣ, ಬೊಮ್ಮಾಯಿ, ಅಶೋಕ್ ಆಕಾಂಕ್ಷಿಗಳಾಗಿದ್ದಾರೆ’ ಎಂದು ಸಿದ್ದರಾಮಯ್ಯ ಹೇಳಿದರು. ಆಗ, ಆರಗ, ಅಶೋಕ ಮತ್ತು ಅಶ್ವತ್ಥನಾರಾಯಣ ಅವರು ಕೈಯಾಡಿಸಿ ತಾವು ಆಕಾಂಕ್ಷಿ ಅಲ್ಲ’ ಎಂದರು.

ಇದಕ್ಕೆ ತಿರುಗೇಟು ನೀಡಿದ ಯತ್ನಾಳ, ‘ಹಿಂದೆ ನೀವು ಕುಮಾರಸ್ವಾಮಿ ಅವರಿಗೆ ಅಪ್ಪನಾಣೆಗೂ ಸಿಎಂ ಆಗಲ್ಲ ಎಂದು ಹೇಳಿದ್ದಿರಿ. ಆದರೆ, ಅವರು ಸಿಎಂ ಆದರು. ಈಗ ನೀವು ನನಗೆ ವಿಪಕ್ಷ ನಾಯಕ ಆಗಲ್ಲ ಎನ್ನುತ್ತಿದ್ದೀರಿ. ಆದ್ದರಿಂದ ವಿಪಕ್ಷ ನಾಯಕ ಆಗುತ್ತೇನೆ’ ಎಂದು ಅವರು ತಿಳಿಸಿದರು.

‘ನೀವೆಷ್ಟೇ ಬೆಂಕಿ ಹಚ್ಚಿದರೂ ಹೊತ್ತಿಕೊಳ್ಳಲ್ಲ. ಪದೇ ಪದೇ ವಿಪಕ್ಷ ನಾಯಕ ಆಗಲ್ಲ ಎನ್ನುತ್ತಿದ್ದೀರಿ. ಹೀಗಾಗಿ ನೀವು ಯಾರ ಜೊತೆಗೋ ಅಡ್ಜೆಸ್ಟ್‌ಮೆಂಟ್ ಮಾಡಿಕೊಂಡಿರಬೇಕು’ ಎಂದು ಯತ್ನಾಳ ಮತ್ತೆ ಛೇಡಿಸಿದರು.

ನಿರುದ್ಯೋಗಿಗಳಿಗೆ ‘ಕೈ’ ಕೊಟ್ಟ ಕಾಂಗ್ರೆಸ್: ಎಚ್‌ಡಿಕೆ

ಬೆಂಗಳೂರು: ‘ಯುವ ನಿಧಿ’ ಯೋಜನೆಯಡಿ ನಿರುದ್ಯೋಗ ಭತ್ಯೆ ನೀಡುವುದಾಗಿ ಚುನಾವಣೆ ವೇಳೆ ಹೇಳಿದ್ದ ಕಾಂಗ್ರೆಸ್, ಅಧಿಕಾರಕ್ಕೆ ಬಂದ ಬಳಿಕ ಯೋಜನೆ ಜಾರಿಗೆ ಹಿಂದೇಟು ಹಾಕುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹರಿಹಾಯ್ದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಿದ ಕುಮಾರಸ್ವಾಮಿ, ‘ಈ ಸರ್ಕಾರ ನುಡಿದಂತೆ ಸಂಪೂರ್ಣವಾಗಿ ನಡೆದಿಲ್ಲ. ಹಳ್ಳಿಗಳಲ್ಲಿ ಉದ್ಯೋಗ ಇಲ್ಲದೆ ಯುವಕರು ಅಲೆದಾಡುತ್ತಿದ್ದಾರೆ. ಯುವನಿಧಿಯ ಬಗೆಗಿನ ಸರ್ಕಾರದ ನಡೆ ನೋಡಿದರೆ ಈ ಯೋಜನೆ ಜಾರಿ ಆಗುವ ಲಕ್ಷಣವೇ ಇಲ್ಲ’ ಎಂದರು.

‘2022– 23ನೇ ಸಾಲಿನಲ್ಲಿ ಉತ್ತೀರ್ಣರಾಗಿ 6 ತಿಂಗಳು ಕೆಲಸ ಸಿಗದವರಿಗೆ ಅರ್ಜಿ ಸಲ್ಲಿಸಲು ಅರ್ಹರು ಎಂದು ಸರ್ಕಾರ ಹೇಳಿದೆ. ಆದರೆ, ಹಲವು ವರ್ಷಗಳಿಂದ ಉದ್ಯೋಗ ಸಿಗದೇ ಸಂಕಷ್ಟದಲ್ಲಿದ್ದಾರೆ. ಇವರೇನು ಮಾಡಬೇಕು. ನಗರದಲ್ಲಿ ಕೆಲವರಿಗೆ ಸಿಗಬಹುದು, ಗ್ರಾಮೀಣ ಪ್ರದೇಶದವರು ಯೋಜನೆಯ ಫಲ ಸಿಗುವುದಿಲ್ಲ. ಇವರೆಲ್ಲ ನಿಮಗೆ ಮತ ಹಾಕಿದ್ದಾರಲ್ಲವೇ’ ಎಂದು ಅವರು ಪ್ರಶ್ನಿಸಿದರು.

‘ನಿರುದ್ಯೋಗಿ ಪದವೀಧರರು ಎಂದಿದ್ದೀರಿ, ವೈದ್ಯಕೀಯ, ಎಂಜಿನಿಯರಿಂಗ್ ಮಾಡಿ ನಿರುದ್ಯೋಗಿಗಳಾದವರಿಗೆ ಇಲ್ಲವೇ? ಡಿಪ್ಲೊಮಾದವರಿಗೆ ₹1,500 ನಿಗದಿ ಮಾಡಿದ್ದೀರಿ. ಭತ್ಯೆ ನೀಡುವಾಗಲೂ ಪದವೀಧರರು ಮತ್ತು ಡಿಪ್ಲೊಮಾ ಮಾಡಿದವರಿಗೆ ತಾರತಮ್ಯ ಏಕೆ’ ಎಂದೂ ಅವರು ಪ್ರಶ್ನಿಸಿದರು.

2 ಕೆ.ಜಿ.ಅಕ್ಕಿ ಕಡಿತ: ಬಿಪಿಎಲ್ ಪಡಿತರ ಚೀಟಿದಾರರಿಗೆ ಜುಲೈ ತಿಂಗಳಲ್ಲಿ ತಲಾ ಎರಡು ಕೆ.ಜಿ ಅಕ್ಕಿಯನ್ನು ಕಡಿತ ಮಾಡಿ ವಿತರಿಸಲಾಗಿದೆ ಎಂದೂ ಕುಮಾರಸ್ವಾಮಿ ಹೇಳಿದರು.

‘ಆದ್ಯತಾ ವಲಯದ ಕಾರ್ಡುದಾರರಿಗೆ ಒಬ್ಬ ವ್ಯಕ್ತಿಗೆ ತಲಾ 5 ಕೆ.ಜಿ ಬದಲಿಗೆ 3 ಕೆ.ಜಿ ಅಕ್ಕಿ, 2 ಕೆ.ಜಿ ರಾಗಿ ವಿತರಿಸಲಾಗಿದೆ. ಅಂತ್ಯೋದಯದಡಿ 21 ಕೆ.ಜಿ ಅಕ್ಕಿ 14 ಕೆ.ಜಿ.ರಾಗಿ ವಿತರಿಸಲಾಗಿದೆ. ಡಿಬಿಟಿ ಮೂಲಕ ಹಣ ನೀಡುವ ಬದಲು ಬೇಳೆ, ಬೆಲ್ಲ, ಅಡುಗೆ ಎಣ್ಣೆ ವಿತರಿಸಬಹುದಿತ್ತು. ಇದರಿಂದ ಪೌಷ್ಟಿಕ ಆಹಾರ ನೀಡಿದಂತಾಗುತ್ತಿತ್ತು. ನೀವು ನೀಡುವ ಹಣ ಸದ್ಬಳಕೆ ಆಗುತ್ತದೆ ಎಂಬುದಕ್ಕೆ ಖಾತರಿ ಇಲ್ಲ’ ಎಂದು ಕುಮಾರಸ್ವಾಮಿ ತಿಳಿಸಿದರು.

ಸಿದ್ದರಾಮಯ್ಯ ಅವರು 2018ರಲ್ಲಿ ತಮ್ಮ ಕೊನೇ ಬಜೆಟ್‌ನಲ್ಲಿ ‘ಅನ್ನಭಾಗ್ಯ’ ಯೋಜನೆಯಿಂದಾಗಿ ಕರ್ನಾಟಕವನ್ನು ಹಸಿವು ಮುಕ್ತ ಮಾಡಿದ್ದೇನೆ ಎಂದು ಘೋಷಿಸಿಕೊಂಡಿದ್ದರು. ಕರ್ನಾಟಕ ಹಸಿವು ಮುಕ್ತವಾಗಿದ್ದರೆ ಹೆಚ್ಚುವರಿ 5 ಕೆ.ಜಿ ಅಕ್ಕಿ ವಿತರಿಸುವ ತೀರ್ಮಾನ ಏಕೆ ಕೈಗೊಂಡಿರಿ? ಇದಕ್ಕೆ ನನ್ನ ತಕರಾರಿಲ್ಲ. ಜನರನ್ನು ದಷ್ಟಪುಷ್ಟ ಮಾಡುವ ಆಲೋಚನೆ ಇರಬೇಕು ಎಂದು ಲೇವಡಿ ಮಾಡಿದರು.

ಕುಮಾರಸ್ವಾಮಿಗೆ ವಿಪಕ್ಷ ಸ್ಥಾನ ‘ಎರವಲು ಸೇವೆ’: ಸವದಿ ಲೇವಡಿ

ವಿರೋಧಪಕ್ಷದ ಸ್ಥಾನವನ್ನು ಬಿಜೆಪಿಯವರು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಎರವಲು ಸೇವೆಯ ಮೇಲೆ ಬಿಟ್ಟುಕೊಡಲಿದ್ದಾರೆ ಎಂದು ಕಾಂಗ್ರೆಸ್‌ನ ಲಕ್ಷ್ಮಣ ಸವದಿ ಲೇವಡಿ ಮಾಡಿದರು.

ವಿಧಾನಸಭೆಯಲ್ಲಿ ಬುಧವಾರ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಜೆಡಿಎಸ್‌ನ ಜಿ.ಟಿ.ದೇವೇಗೌಡ ಮಾತನಾಡುವಾಗ ಮಧ್ಯ ಪ್ರವೇಶಿಸಿದ ಸವದಿ, ಹೀಗೆ ಹೇಳುವ ಮೂಲಕ ಬಿಜೆಪಿ ನಾಯಕರ ಕಾಲೆಳೆದರು.

‘ಬಿಜೆಪಿಯವರು ಏಕಾಏಕಿ ಬಿ.ಎಸ್.ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಏಕೆ ಇಳಿಸಿದರು ಎಂಬುದು ಗೊತ್ತಾಗಿಲ್ಲ. ನಿಮಗೇನಾದರೂ ಗೊತ್ತಿದ್ದರೆ ತಿಳಿಸಿ’ ಎಂದು ಜಿ.ಟಿ.ದೇವೇಗೌಡ ಅವರು ಸವದಿಯವರನ್ನೇ ಪ್ರಶ್ನಿಸಿದರು.

‘ಈ ವಿಚಾರದ ಬಗ್ಗೆ ನಿಮಗೆ ಮಾಹಿತಿ ಇದೆ. ಅವರೇ ಅದನ್ನು ಹೇಳಬಹುದು’ ಎಂದು ಸವದಿ ಪ್ರತಿಕ್ರಿಯಿಸಿದರು.

‘ಕುಮಾರಸ್ವಾಮಿ ಅವರೇ ಆರಂಭದಲ್ಲಿ ನೀವು ವಿರೋಧಪಕ್ಷದ ನಾಯಕರಾಗಿ ಸಮರ್ಥವಾಗಿ ಕೆಲಸ ಮಾಡಿ. ವಿರೋಧ ಪಕ್ಷದ ನಾಯಕನ ಸ್ಥಾನ ಕುಮಾರಸ್ವಾಮಿ ಅವರ ಮನೆ ಬಾಗಿಲಿಗೆ ಬರುತ್ತದೆ. ಹೀಗಾಗಿ ವಿರೋಧ ಪಕ್ಷದ ಸ್ಥಾನದಲ್ಲಿ ಬಿಜೆಪಿಯ ಯಾವುದೇ ನಾಯಕ ಕೂರುತ್ತಿಲ್ಲ. ಆ ಸ್ಥಾನಕ್ಕಾಗಿ ಪರಸ್ಪರ ಕಚ್ಚಾಡುತ್ತಿದ್ದಾರೆ’ ಎಂದೂ ಕುಟುಕಿದರು.

ಭೂ ಒತ್ತುವರಿ ತಡೆಗೆ ‘ಕಂದಾಯ ಬೀಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಭೂಮಿ ಒತ್ತುವರಿ ತಡೆಗೆ ಪೊಲೀಸ್ ಬೀಟ್ ಮಾದರಿಯಲ್ಲಿ ‘ಕಂದಾಯ ಬೀಟ್’ ಆರಂಭಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ವಿಧಾನ ಪರಿಷತ್‌ನಲ್ಲಿ ಹೇಳಿದರು.

ಕಂದಾಯ ಭೂಮಿ ಒತ್ತುವರಿ ಕುರಿತು ಬಿಜೆಪಿ ಸದಸ್ಯ ವೈ.ಎ.ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಬುಧವಾರ ಉತ್ತರಿಸಿದ ಅವರು, ಬೆಂಗಳೂರು ನಗರ ವ್ಯಾಪ್ತಿಯಲ್ಲೇ 38,947 ಎಕರೆ, ಬೆಂಗಳೂರು ಗ್ರಾಮಾಂತರ ವ್ಯಾಪ್ತಿಯಲ್ಲಿ 3,898 ಎಕರೆ ಕಂದಾಯ ಭೂಮಿ ಒತ್ತುವರಿಯಾಗಿದೆ. 15,952 ಪ್ರಕರಣಗಳು ದಾಖಲಾಗಿವೆ. 7,147 ಎಕರೆ ಮರಳಿ ವಶಕ್ಕೆ ಪಡೆಯಲಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲ ಭಾಗಗಳ ಒತ್ತುವರಿ ತಡೆಯಲು ಪ್ರಮುಖ ಅಧಿಕಾರಿಗಳನ್ನು ಒಳಗೊಂಡ ಬೀಟ್ ವ್ಯವಸ್ಥೆ ಮಾಡಲಾಗುವುದು. ಒತ್ತುವರಿ ತೆರವುಗೊಳಿಸಲು ಈಗಾಗಲೇ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚಿಸಲಾಗಿದೆ. ಕಾಲಮಿತಿಯ ಒಳಗೆ ತೆರವು ಕಾರ್ಯ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದರು.

ಕೆಲ ಭಾಗಗಳಲ್ಲಿ ಪಟ್ಟಭದ್ರರು ಭೂಮಿ ಕಬಳಿಸಿದ್ದಾರೆ. ಕೆಲವು ಕಡೆ ತಹಶೀಲ್ದಾರ್ ಸೇರಿದಂತೆ ಕಂದಾಯ ಅಧಿಕಾರಿಗಳು, ವಕೀಲರ ಸಹಕಾರದಲ್ಲಿ ಕಬಳಿಕೆ ನಡೆದಿದೆ. ಇದಕ್ಕೆ ವ್ಯವಸ್ಥೆಯ ಲೋಪ ಕಾರಣ. ಇರುವ ಕಾನೂನು ಪ್ರಬಲವಾಗಿದ್ದರೂ, ದುರುಪಯೋಗ ಮಾಡಲಾಗಿದೆ. ಬೀಟ್ ವ್ಯವಸ್ಥೆ ಜಾರಿಯಾದರೆ ನೇತೃತ್ವ ವಹಿಸುವ ಪ್ರತಿಯೊಬ್ಬರಿಗೂ ಮೂರರಿಂದ ಆರು ತಿಂಗಳು ಹೊಣೆಗಾರಿಕೆ ನಿಗದಿ ಮಾಡಲಾಗುವುದು. ಒತ್ತುವರಿಯಾದರೆ ಕ್ರಮ ಕೈಗೊಳ್ಳಲಾಗುವುದು ಎಂದು ವಿವರ ನೀಡಿದರು.

‘ಮುದ್ರಾಂಕ ಶುಲ್ಕ ಹೆಚ್ಚಳ ಇಲ್ಲ’

ಮುದ್ರಾಂಕ ಶುಲ್ಕವನ್ನು ಹೆಚ್ಚಳ ಮಾಡುವುದಿಲ್ಲ. ಈಗಿರುವ ಶೇ 5ರಷ್ಟು ಶುಲ್ಕವೇ ಮುಂದುವರಿಯಲಿದೆ. ಹಿಂದೆ ಕಡಿತ ಮಾಡಿದ್ದ ₹ 45 ಲಕ್ಷದವರೆಗಿನ ಫ್ಲಾಟ್‌ಗಳ ನೋಂದಣಿ ಮೇಲಿನ ಶುಲ್ಕ ಕಡಿತ ಸೌಲಭ್ಯವನ್ನೂ ಹಿಂಪಡೆಯುವುದಿಲ್ಲ. ಆಸ್ತಿಗಳ ಮೇಲಿನ ಮಾರ್ಗಸೂಚಿ ದರವನ್ನು ಹೆಚ್ಚಿಸಿ, ಶೀಘ್ರ ಮರುನಿಗದಿ ಮಾಡಲಾಗುವುದು. ಎಲ್ಲ ನೋಂದಣಾಧಿಕಾರಿ ಕಚೇರಿಗಳಲ್ಲೂ ಅಗತ್ಯ ಮೂಲ ಸೌಕರ್ಯ ಕಲ್ಪಿಸಲಾಗುವುದು ಎಂದು ಕೃಷ್ಣ ಬೈರೇಗೌಡ ಹೇಳಿದರು.

ಸಂಕ್ಷಿಪ್ತ ಸುದ್ದಿ

ಗೃಹ ಜ್ಯೋತಿ: ಇದೇ 26 ರವರೆಗೆ ಅರ್ಜಿ ಸಲ್ಲಿಕೆಗೆ ಅವಕಾಶ

ಬೆಂಗಳೂರು: ‘ಗೃಹಜ್ಯೋತಿ’ ಯೋಜನೆಯಡಿ ಅರ್ಜಿ ಸಲ್ಲಿಸಲು ಇದೇ 26 ರವರೆಗೆ ಅವಕಾಶ ಇದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ವಿಧಾನಸಭೆಯಲ್ಲಿ ಬುಧವಾರ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಎತ್ತಿದ ಪ್ರಶ್ನೆಗೆ ಸಮಜಾಯಿಷಿ ನೀಡಿದರು.

ಜುಲೈ ತಿಂಗಳ ಬಿಲ್ ಆಗಸ್ಟ್‌ಗೆ ಬರಲಿದೆ. ಈವರೆಗೆ 2.14 ಕೋಟಿ ಗ್ರಾಹಕರ ಪೈಕಿ 1.3 ಕೋಟಿ ಗ್ರಾಹಕರು ಅರ್ಜಿ ಹಾಕಿದ್ದಾರೆ. ಕುಟೀರ ಜ್ಯೋತಿ, ಅಮೃತಭಾಗ್ಯ ಉಚಿತ ವಿದ್ಯುತ್ ಯೋಜನೆಗಳ ಫಲಾನುಭವಿಗಳು ಸುಮಾರು 40 ಲಕ್ಷ ಮಂದಿ ಇದ್ದಾರೆ. ಅವರೂ ಇದೇ ತಿಂಗಳ 26, 27ರ ಒಳಗೆ ಅರ್ಜಿ ಸಲ್ಲಿಸಬಹುದು ಎಂದು ಹೇಳಿದರು.

‘ಅರ್ಜಿ ಸಲ್ಲಿಕೆಗೆ ಕಟ್ ಆಫ್ ದಿನಾಂಕ ಇಲ್ಲ. ಅರ್ಜಿ ಸಲ್ಲಿಸುವಂತೆ ಯಾರಿಗೂ ಒತ್ತಾಯ ಮಾಡಿಲ್ಲ. ಎಲ್ಲ ಅರ್ಹರಿಗೂ ಉಚಿತ ವಿದ್ಯುತ್ ಕೊಡಲು ಪ್ರಯತ್ನಿಸುತ್ತೇವೆ. ಗೃಹಜ್ಯೋತಿ ಅಡಿ ಅರ್ಜಿ ಸಲ್ಲಿಸದವರಿಗೆ ಅದಾಲತ್ ಮೂಲಕ ಅರ್ಜಿ ಸಲ್ಲಿಕೆಗೆ ವ್ಯವಸ್ಥೆ ಮಾಡುತ್ತೇವೆ’ ಎಂದು ಜಾರ್ಜ್ ತಿಳಿಸಿದರು.

‘ಚುನಾವಣೆ ವೇಳೆ ಎಲ್ಲರಿಗೂ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುವುದಾಗಿ ಹೇಳಿದ್ದೀರಿ. ಚುನಾವಣೆ ಗೆದ್ದ ಮೇಲೆ 200 ಯೂನಿಟ್‌ವರೆಗೆ ಎಂದು ಹೇಳಲಾರಂಭಿಸಿದ್ದೀರಿ. ಆದೇಶ ಹೊರಡಿಸಿದಾಗ ವಾರ್ಷಿಕ ಸರಾಸರಿ ಅನ್ವಯ ನೀಡುವುದಾಗಿ ಷರತ್ತು ವಿಧಿಸಿದ್ದೀರಿ. ನೀವು 200 ಯೂನಿಟ್ ಉಚಿತ ಕೊಡುತ್ತೀರಿ ಎಂದು ಜನ ಫ್ರಿಡ್ಜು , ಎಇಎಚ್, ಎಸಿ ಇತ್ಯಾದಿ ಉಪಕರಣಗಳನ್ನು ಖರೀದಿಸಲು ಆಲೋಚನೆ ಮಾಡಿದ್ದರು. ಆದರೆ, ನೀವು ವಾರ್ಷಿಕ ಸರಾಸರಿ ನಿಗದಿ ಮಾಡಿದ್ದರಿಂದ, ಅವರು ಆ ಯಾವುದೇ ಉಪಕರಣಗಳನ್ನು ಖರೀದಿಸಲು ಸಾಧ್ಯವಾಗಲಿಲ್ಲ’ ಎಂದು ಕುಮಾರಸ್ವಾಮಿ ಹೇಳಿದರು.

ಐದು ವರ್ಷವೂ ಸಿದ್ದರಾಮಯ್ಯ ನೇತೃತ್ವ: ರಾಯರಡ್ಡಿ

ಬೆಂಗಳೂರು: ‘ಐದು ವರ್ಷಗಳ ಕಾಲ ಸಿದ್ದರಾಮಯ್ಯ ನೇತೃತ್ವದಲ್ಲೇ ಸರ್ಕಾರ ಕೆಲಸ ಮಾಡಲಿದೆ. ಇನ್ನೂ ನಾಲ್ಕು ವರ್ಷ ಹತ್ತು ತಿಂಗಳ ಕಾಲ ರಾಜ್ಯದಲ್ಲಿ ನಮ್ಮ ಸರ್ಕಾರ ಅಭಿವೃದ್ಧಿ ಕೆಲಸ ಮಾಡಲಿದೆ’ ಎಂದು ಕಾಂಗ್ರೆಸ್‌ನ ಬಸವರಾಜ ರಾಯರಡ್ಡಿ ವಿಧಾನಸಭೆಯಲ್ಲಿ ಬುಧವಾರ ಹೇಳಿದರು.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಸಂಪೂರ್ಣ ಬಹುಮತದೊಂದಿಗೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ. ಈ ಸರ್ಕಾರ ಮೂರು ತಿಂಗಳಿಗೆ, ಆರು ತಿಂಗಳಿಗೆ ಪತನವಾಗುತ್ತಿದೆ ಎಂದು ನೀವು ಹೇಳುತ್ತಿದ್ದೀರಿ. ಅಂತಹ ಯಾವುದೂ ನಡೆಯುವುದಿಲ್ಲ. ಆಗ ಕೆಲವರು ಪಕ್ಷದಿಂದ ಹೊರ ಹೋಗಿರಬಹುದು. ಈಗ ಯಾರೂ ಅಂತಹವರಿಲ್ಲ. ಐದು ವರ್ಷವೂ ಸಿದ್ದರಾಮಯ್ಯ ನೇತೃತ್ವದಲ್ಲೇ ಸರ್ಕಾರ ಇರುತ್ತದೆ’ ಎಂದರು.

‘ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ’ ಎಂದು ವಿರೋಧ ಪಕ್ಷಗಳ ಸದಸ್ಯರು ಜೋರಾಗಿ ಕೂಗಿದರು. ಅದಕ್ಕೆ ಪ್ರತಿಕ್ರಿಯಿಸಿದ ರಾಯರಡ್ಡಿ, ‘ಶಿವಕುಮಾರ್ ಅವರನ್ನು ಪಕ್ಷವು ಮುಖ್ಯಮಂತ್ರಿ ಮಾಡಿದರೆ ನಮ್ಮ ಅಭ್ಯಂತರವೇನೂ ಇಲ್ಲ’ ಎಂದು ಹೇಳಿದರು.

ನಾಗದೇವತೆ ಪೂಜೆಗೆ ಅಡ್ಡಿ: ಬಿಜೆಪಿ ಧರಣಿ

ಪುನೀತ್ ಕೆರೆಹಳ್ಳಿ ವಿರುದ್ಧ 10 ಪ್ರಕರಣ ಇರುವ ಕಾರಣ ನೋಟಿಸ್: ಗೃಹ ಸಚಿವ ಜಿ. ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್ ಬಳಿ ಇರುವ ತುಳಸಿತೋಟದಲ್ಲಿನ ನಾಗರಕಟ್ಟೆಯ ನಾಗದೇವತೆ ಪೂಜೆಗೆ ಪೊಲೀಸರು ಅಡ್ಡಿಪಡಿಸಿದ್ದಾರೆ. ಪೂಜಾ ಆಯೋಜನೆ ಮಾಡಿದವರಿಗೆ ನೋಟಿಸ್ ನೀಡಿದ್ದಾರೆ. ಇದು ಕಾಂಗ್ರೆಸ್ ಸರ್ಕಾರದ ಧರ್ಮ ವಿರೋಧಿ ನಡೆ ಎಂದು ಆರೋಪಿಸಿ ಬಿಜೆಪಿ ಸದಸ್ಯರು ಬುಧವಾರ ವಿಧಾನ ಪರಿಷತ್‌ನಲ್ಲಿ ಧರಣಿ ನಡೆಸಿದರು.

ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಎನ್.ರವಿಕುಮಾರ್, ಹಿಂದೂ ಸಂಕಲ್ಪ ರಾಷ್ಟ್ರದ ವತಿಯಿಂದ ಜುಲೈ 9ರಂದು ಪೂಜೆ ಆಯೋಜಿಸಿದ್ದ ಪುನೀತ್ ಕೆರೆಹಳ್ಳಿ ಅವರಿಗೆ ನೋಟಿಸ್ ನೀಡಲಾಗಿದೆ. ಹಿಂದೂ ದೇವರ ಪೂಜೆಗೆ ಅಡ್ಡಿಪಡಿಸಲಾಗುತ್ತಿದೆ. ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು. ಸರ್ಕಾರ ತಕ್ಷಣ ಉತ್ತರ ನೀಡಬೇಕು ಎಂದು ಪಟ್ಟುಹಿಡಿದರು.



ಜೈನ ಮುನಿ ಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿ ವಿಧಾನಪರಿಷತ್‌ನಲ್ಲಿ ಬಿಜೆಪಿ ಸದಸ್ಯರು ಧರಣಿ ನಡೆಸಿದರು —ಪ್ರಜಾವಾಣಿ ಚಿತ್ರ

ನಿಯಮದಂತೆ ಎರಡು ದಿನಗಳ ಒಳಗೆ ಗೃಹ ಸಚಿವರಿಂದ ಉತ್ತರ ಕೊಡಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಉತ್ತರ ನೀಡಿದರು. ಸಚಿವರ ಉತ್ತರದಿಂದ ತೃಪ್ತರಾಗದ ಬಿಜೆಪಿ ಸದಸ್ಯರು ಧರಣಿ ಆರಂಭಿಸಿದರು. ಈ ಸಮಯದಲ್ಲಿ ಕೃಷ್ಣ ಬೈರೇಗೌಡ ಅವರು ‘ನೀವು ರಾಜ್ಯ ಹಾಳು ಮಾಡಿದ್ದೀರಿ. ಈಗ ಸದನದ ಕಲಾಪ ಹಾಳು ಮಾಡಬೇಡಿ’ ಎಂದಿದ್ದು ವಿರೋಧ ಪಕ್ಷದ ಸದಸ್ಯರನ್ನು ಕೆರಳಿಸಿತು. ಗದ್ದಲದ ವಾತಾವರಣ ನಿರ್ಮಾಣವಾದ್ದರಿಂದ ಸಭಾಪತಿ ಕಲಾಪವನ್ನು ಮುಂದೂಡಿದರು.

ಮಧ್ಯಾಹ್ನದ ಕಲಾಪ ಆರಂಭವಾಗುತ್ತಿದ್ದಂತೆ ಉತ್ತರ ನೀಡಿದ ಗೃಹ ಸಚಿವ ಜಿ. ಪರಮೇಶ್ವರ, ‘ನಾಗರಕಟ್ಟೆ ಪೂಜೆಗೆ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ. ಪುನೀತ್ ಕೆರೆಹಳ್ಳಿ ಅಪರಾಧ ಹಿನ್ನಲೆಯ ವ್ಯಕ್ತಿ. ಆತನ ಮೇಲೆ 10 ಪ್ರಕರಣಗಳಿವೆ. ಒಂದು ಪ್ರಕರಣವೂ ದಾಖಲಾಗಿದೆ. ಜಾಮೀನಿನ ಮೇಲೆ ಆತ ಹೊರಗಿದ್ದಾನೆ. ಈತನ ಮೇಲೆ ಕೇಸ್ ಇರುವ ಕಾರಣಕ್ಕೆ ನೋಟಿಸ್ ನೀಡಿದ್ದಾರೆ. ಧಾರ್ಮಿಕ ಭಾವನೆಗೆ ಧಕ್ಕೆ ತರುವ ಉದ್ದೇಶದಿಂದ ನೋಟಿಸ್ ನೀಡಿಲ್ಲ. ಪೂಜೆ ಮಾಡುವುದಕ್ಕೆ ಯಾವುದೇ ಪೊಲೀಸ್ ಅನುಮತಿ ಬೇಕಿಲ್ಲ’ ಎಂದು ಸ್ಪಷ್ಟಪಡಿಸಿದರು.

ಆಗ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ‘ನಾವು ಪ್ರಶ್ನೆ ಎತ್ತಿರುವುದು ಪೂಜೆ ಮಾಡಲು ಪೊಲೀಸ್ ಅನುಮತಿ ಬೇಕೇ ಎಂಬ ಬಗ್ಗೆ. ಯಾವುದೇ ವ್ಯಕ್ತಿ ಬಗ್ಗೆ ನಾವು ಪ್ರಸ್ತಾಪ ಮಾಡುತ್ತಿಲ್ಲ. ಪೂಜೆ ಮಾಡಲು ಅನುಮತಿ ಪಡೆಯಬೇಕೇ? ವ್ಯಕ್ತಿ ಮೇಲೆ ಪ್ರಕರಣ ದಾಖಲಾಗಿದ್ದರೆ ಅದಕ್ಕೆ ನಮ್ಮ ಆಕ್ಷೇಪ ಇಲ್ಲ‘ ಎಂದರು.

‘ಯಾವ ವ್ಯಕ್ತಿ ಪೂಜೆಗೆ ಕರೆ ಕೊಟ್ಟಿದ್ದರೋ ಅವರ ಮೇಲೆ ಸಂಶಯವಿದೆ. ಪೂಜೆ ಮಾಡಲು ಯಾವುದೇ ಅನುಮತಿ ಬೇಕಿಲ್ಲ. ಆದರೆ, ಆಯೋಜನೆ ಮಾಡಿದ್ದ ವ್ಯಕ್ತಿ ಮೇಲೆ ಅಪರಾಧ ಪ್ರಕರಣಗಳಿವೆ. ಹೀಗಾಗಿ ಪೊಲೀಸರು ನೋಟಿಸ್ ನೀಡಿದ್ದಾರೆ’ ಎಂದೂ ಸ್ಪಷ್ಟಪಡಿಸಿದರು.

‘ಕಾಯಕ’ ಮರೆಸುವ ಗ್ಯಾರಂಟಿ: ಜಿಟಿಡಿ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಸವಣ್ಣ ಅವರು ಕಾಯಕವೇ ಕೈಲಾಸ ಎಂದು ಕಾಯಕದ ಮಹತ್ವ ಸಾರಿದ್ದರು. ಆದರೆ, ನಿಮ್ಮ ಗ್ಯಾರಂಟಿಗಳು ಕೂತುಂಡು ಬದುಕುವುದನ್ನು ಕಲಿಸುತ್ತವೆ’ ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಟೀಕಿಸಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಿದ ಅವರು, ಬಡವರ ಹಸಿವು ತಣಿಸಬೇಕು ನಿಜ. ಅದಕ್ಕೆ ಕಾರ್ಯಕ್ರಮಗಳೂ ಇರಬೇಕು. ಆದರೆ, ಅವುಗಳಿಂದ ಆರ್ಥಿಕ ಪ್ರಗತಿ ಕುಂಠಿತ ಆಗಬಾರದು ಎಂದರು.

‘ಬಸವಣ್ಣ ಅವರ ‘ನುಡಿದಂತೆ ನಡೆ’ ವಚನದ ನುಡಿ ಆಗಾಗ್ಗೆ ಹೇಳುತ್ತೀರಿ. ಆದರೆ ಕಾಯಕದ ಬಗ್ಗೆ ಹೇಳಿರುವುದನ್ನು ಮಾತನಾಡುವುದಿಲ್ಲ. ಕಾಯಕ ಮಾಡದೇ ಉಣ್ಣಬಾರದು ಎಂದು ಬಸವಣ್ಣ ಹೇಳಿದ್ದಾರೆ. ಕೆಲಸ ಮಾಡದೇ ಆಹಾರ ಸೇವಿಸುವುದು ಹರಾಮ್ ಎಂದು ಇಸ್ಲಾಂ ಕೂಡಾ ಹೇಳಿದೆ. ಕಾಂಗ್ರೆಸ್‌ನ ಗ್ಯಾರಂಟಿ ಕೂತುಂಡು ಬದುಕುವುದಕ್ಕೆ ಮಾತ್ರ ಸೀಮಿತವಾಗಿದೆ’ ವ್ಯಂಗ್ಯವಾಡಿದರು.

‘ಇವೆಲ್ಲದರ ಪರಿಣಾಮ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ. ಹಳೆ ಕಾಮಗಾರಿಗಳಿಗೆ ತಡೆ ಹಿಡಿಯಲಾಗಿದೆ. ಹೊಸದಾಗಿ ಯಾವುದೇ ಕಾಮಗಾರಿ ಕೊಡುತ್ತಿಲ್ಲ. ಶಾಸಕರ ಅನುದಾನವನ್ನೂ ನಿಲ್ಲಿಸಲಾಗಿದೆ. ಕುಡಿಯುವ ನೀರು, ರಸ್ತೆ ಕಾಮಗಾರಿ, ಶಾಲೆ ಕಟ್ಟಡಗಳ ನಿರ್ಮಾಣ ಕಾರ್ಯ ಸಂಪೂರ್ಣವಾಗಿ ನಿಂತುಹೋಗಿದೆ. ಶಾಲೆಗಳಿಗೆ ಛಾವಣಿಯೇ ಇಲ್ಲವಾಗಿದೆ. ಇದರಿಂದ ನಮಗೆಲ್ಲ ಕೆಟ್ಟ ಹೆಸರು ಬರುತ್ತದೆ’ ಎಂದು ಹರಿಹಾಯ್ದರು.

‘ಹಾಗೆಂದು ನಾನು ಗ್ಯಾರಂಟಿಗಳ ವಿರೋಧಿ ಅಲ್ಲ. ಸಿದ್ದರಾಮಯ್ಯ ಒಳ್ಳೆ ಯೋಜನೆಗಳನ್ನೇ ಜಾರಿ ಮಾಡಿದ್ದಾರೆ. ಅವುಗಳಿಗೆ ಸಂಪೂರ್ಣ ಬೆಂಬಲವಿದೆ’ ಎಂದು ಅವರು ಕಾಲೆಳೆದರು.

‘ಕೇಂದ್ರ ಸರ್ಕಾರ ಟೀಕಿಸದೆ ಕೆಲಸ ಮಾಡಿ’

ಬೆಂಗಳೂರು: ‘ಸುಳ್ಳು ಹೇಳಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್, ಕೇಂದ್ರದ ಬಿಜೆಪಿ ಸರ್ಕಾರ ಬಡವರ ವಿರೋಧಿ ಎಂದು ಬಿಂಬಿಸಲು ಯತ್ನಿಸುತ್ತಿದೆ. ಕೇಂದ್ರವನ್ನು ದೂರುವುದನ್ನು ಬಿಟ್ಟು ಕೆಲಸ ಮಾಡಬೇಕು’ ಎಂದು ಬಿಜೆಪಿಯ ಬಿ.ವೈ. ವಿಜಯೇಂದ್ರ ವಿಧಾನಸಭೆಯಲ್ಲಿ ಬುಧವಾರ ಹೇಳಿದರು.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ನೂರು ಸುಳ್ಳು ಹೇಳಿ ಮದುವೆ ಮಾಡು ಎಂಬ ಗಾದೆ ಇದೆ. ನೀವು ಐದು ಸುಳ್ಳು ಗ್ಯಾರಂಟಿ ಕೊಟ್ಟು ಅಧಿಕಾರಕ್ಕೆ ಬಂದಿದ್ದೀರಿ. ಈಗ ರಾಜ್ಯಪಾಲರ ಭಾಷಣ, ಬಜೆಟ್ ಎಲ್ಲದರಲ್ಲೂ ಕೇಂದ್ರ ಸರ್ಕಾರದ ವಿರುದ್ಧ ಆರೋಪ ಮಾಡುತ್ತಿದ್ದೀರಿ. ಇದು ರಾಜ್ಯ ಸರ್ಕಾರಕ್ಕೆ ಶೋಭೆ ತರುವ ವರ್ತನೆ ಅಲ್ಲ’ ಎಂದು ಹೇಳಿದರು.

‘ದೇಶದಲ್ಲಿ 60 ವರ್ಷಗಳಿಗೂ ಹೆಚ್ಚು ಕಾಲ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿತ್ತು. ಈಗಲೂ ಉಚಿತ ಕೊಡುಗೆಗಳನ್ನು ಕೊಡಬೇಕಾದ ಸ್ಥಿತಿಯಲ್ಲಿ ರಾಜ್ಯ ಇರುವುದಕ್ಕೆ ಕಾಂಗ್ರೆಸ್ ಪಕ್ಷವೇ ಹೊಣೆ ಅಲ್ಲವೆ’ ಎಂದು ಪ್ರಶ್ನಿಸಿದರು.

‘ಗೆದ್ದಿದ್ದೇವೆ ಎಂದು ಬೀಗುವುದಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ಗೆದ್ದಿದ್ದೇವೆ ಎಂದು ಬೀಗುವುದಿಲ್ಲ. ಜನರ ಆಶಯಗಳನ್ನು ಈಡೇರಿಸಲು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ’ ಎಂದು ಕಾಂಗ್ರೆಸ್ಸಿನ ಸಲೀಂ ಅಹ್ಮದ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡಿದ ಅವರು, ‘ಬಿಜೆಪಿ ವಿರುದ್ಧ ಜನಾದೇಶ ಬಂದಿದೆ. ಭ್ರಷ್ಟಾಚಾರವೇ ಸೋಲಿಗೆ ಕಾರಣ. ಶೇ 40 ಕಮಿಷನ್ ಸರ್ಕಾರವನ್ನು ಜನ ಕಿತ್ತು ಹಾಕಿದ್ದಾರೆ’ ಎಂದರು, ‘ನಾವು ಘೋಷಿಸಿದ್ದ ಅನ್ನಭಾಗ್ಯ ಯೋಜನೆಗೆ ಅಕ್ಕಿ ನೀಡದೆ ಕೇಂದ್ರ ಮತ್ತು ರಾಜ್ಯದ ಬಿಜೆಪಿ ನಾಯಕರು ರಾಜಕೀಯ ಮಾಡುತ್ತಿದ್ದಾರೆ. ಮಾರುಕಟ್ಟೆಗಿಂತ ಹೆಚ್ಚಿನ ಬೆಲೆಗೆ ನಾವು ಕೊಳ್ಳುತ್ತೇವೆ ಎಂದರೂ ಅಕ್ಕಿ ಕೊಡುತ್ತಿಲ್ಲ’ ಎಂದು ಟೀಕಿಸಿದರು.

ಸಲೀಂ ಮಾತಿಗೆ ಕೆರಳಿದ ಬಿಜೆಪಿ ಸದಸ್ಯರು, ‘ಪ್ರಕೃತಿ ವಿಕೋಪ ಸಂಭವಿಸಿದ ಸಂದರ್ಭದ ಬಳಕೆಗೆ ಅಕ್ಕಿ ಸಂಗ್ರಹಿಸಿಡಲಾಗಿದೆ. ಸುಳ್ಳು ಆರೋಪ ಸರಿಯಲ್ಲ’ ಎಂದರು. ಬಿಜೆಪಿ ಸದಸ್ಯರ ಆಕ್ರೋಶದ ನಡುವೆಯೇ ಮಾತು ಮುಂದುವರಿಸಿದ ಸಲೀಂ, ‘ಜನರಿಗೆ ಮನ್ ಕಿ ಬಾತ್ ಬೇಕಿಲ್ಲ. ಕಾಮ್ ಕಿ ಬಾತ್ ಬೇಕಿದೆ. ಕೇಂದ್ರದಿಂದ ಆಗಿರುವ ಅನ್ಯಾಯವನ್ನು ನಾವು ಜನರ ಮುಂದೆ ಕೊಂಡೊಯ್ಯುತ್ತೇವೆ’ ಎಂದರು.

ಬಿಜೆಪಿಯ ಕೇಶವಪ್ರಸಾದ್, ‘ರಾಜ್ಯಪಾಲರ ಮೂಲಕ ಸರ್ಕಾರ ಮಾಡಿದ ಭಾಷಣ ಮುಂದಿನ ದಿಕ್ಸೂಚಿ ಆಗಲಿದೆ ಎಂದು ನಾವು ಭಾವಿಸಿದ್ದೆವು. ಅದು ಆಗಿಲ್ಲ. ಕೇವಲ ಐದು ಭಾಗ್ಯಗಳ ಮಧ್ಯೆ ಸರ್ಕಾರ ಗಿರಕಿ ಹೊಡೆಯುತ್ತಿದೆ’ ಎಂದು ಆರೋಪಿಸಿದರು.

ರಾಹುಲ್ ಗಾಂಧಿ ಮತ್ತು ಇಂದಿರಾಗಾಂಧಿ ಹೆಸರು ಪ್ರಸ್ತಾಪಿಸದೇ ಕಾಂಗ್ರೆಸ್ ಸರ್ಕಾರವನ್ನು ಅವರು ತರಾಟೆಗೆ ತೆಗೆದುಕೊಂಡಾಗ, ಕಾಂಗ್ರೆಸ್ ಸದಸ್ಯರು ಸಿಡಿಮಿಡಿಗೊಂಡರು.

‘ಶಕ್ತಿ’ ಬಂದ ನಂತರ ಆದಾಯ ವೃದ್ಧಿಸಿದೆ: ‘ಶಕ್ತಿ’ ಯೋಜನೆಯಿಂದ ಸರ್ಕಾರಿ ಸಾರಿಗೆ ಸಂಸ್ಥೆಯಲ್ಲಿ ಮೌನ ಕ್ರಾಂತಿ ಆಗಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

‘ಸಾರಿಗೆ ಬಸ್‌ಗಳಲ್ಲಿ ಶೇ 20ರಿಂದ 30ರಷ್ಟು ಪ್ರಯಾಣಿಕರು ಹೆಚ್ಚಾಗಿದ್ದಾರೆ. ಇದರಿಂದ ಸಾರಿಗೆ ಸಂಸ್ಥೆಗೆ ಆದಾಯ ಬಂದಿದೆ. ಈ ಮೂಲಕ, ಸಾರಿಗೆ ನಿಗಮ ಸ್ವಾವಲಂಬಿಯಾಗುತ್ತದೆ. ನಾಲ್ಕೂ ನಿಗಮಗಳು ಲಾಭಕ್ಕೆ ಬಂದಿವೆ. ಇದರಿಂದ ಶಕ್ತಿ ಯೋಜನೆ ನಷ್ಟವಲ್ಲ, ಲಾಭಕ್ಕೆ ಬಂದಿದೆ’ ಎಂದರು.

‘ಶ್ರೀಮಂತರ ಸಾಲ ಮನ್ನಾ ಮಾಡಿದರೆ ಸರಿ, ಬಡವರಿಗೆ ಅನ್ನ ಕೊಟ್ಟರೆ ಅದಕ್ಕೆ ಆಕ್ರೋಶ. ಬಡವರ ಬಗ್ಗೆ ಯಾಕೆ ಸಿಟ್ಟು’ ಎಂದು ಅವರು ಪ್ರಶ್ನಿಸಿದಾಗ, ಬಿಜೆಪಿಯ ಭಾರತಿ ಶೆಟ್ಟಿ ಮತ್ತು ಇತರೆ ಸದಸ್ಯರು ಆಕ್ಷೇಪಿಸಿದರು. ಆಗ ತೀವ್ರ ವಾಗ್ವಾದ ನಡೆಯಿತು.

ಬಿ.ಎಸ್ಸಿ ನರ್ಸಿಂಗ್: 2 ಸುತ್ತು ಕೌನ್ಸೆಲಿಂಗ್– ಶರಣಪ್ರಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿ.ಎಸ್ಸಿ ನರ್ಸಿಂಗ್ ಕೋರ್ಸ್‌ಗಳ ಸೀಟು ಹಂಚಿಕೆಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಸಿದ್ದು, ಎರಡು ಸುತ್ತು ಕೌನ್ಸೆಲಿಂಗ್ ಬಳಿಕ ಉಳಿಕೆಯಾದ ಸೀಟುಗಳನ್ನು ಭರ್ತಿ ಮಾಡಲು ಖಾಸಗಿ ಸಂಸ್ಥೆಗಳಿಗೆ ಅವಕಾಶ ನೀಡಲಾಗುವುದು’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಎಸ್.ವಿ. ಸಂಕನೂರ ಅವರು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಸಚಿವರು, ‘ನರ್ಸಿಂಗ್ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ಮತ್ತು ಸೀಟು ಹಂಚಿಕೆ ಕ್ರಮವನ್ನು ಕೆಇಎ ವತಿಯಿಂದಲೇ ನಡೆಸುವಂತೆ 2023ರ ಏಪ್ರಿಲ್ 13ರಂದೇ ಸರ್ಕಾರ ಆದೇಶ ಮಾಡಿದೆ. ಅದರಂತೆ, ಇಂಡಿಯನ್ ನರ್ಸಿಂಗ್ ಕೌನ್ಸೆಲಿಂಗ್ (ಐಎನ್‌ಸಿ) ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಮಾರ್ಗಸೂಚಿಗಳನ್ನು ಅನುಸರಿಸಿ ಕ್ರಮ ವಹಿಸಲಾಗುವುದು’ ಎಂದರು.

‘ರಾಜ್ಯದಲ್ಲಿ ಒಟ್ಟು 33 ಸಾವಿರ ನರ್ಸಿಂಗ್ ಸೀಟುಗಳು ಲಭ್ಯವಿದೆ. ಸಿಇಟಿ ಹಾಜರಾದವರಲ್ಲಿ 1,75,682 ವಿದ್ಯಾರ್ಥಿಗಳು ಸೀಟು ಹಂಚಿಕೆಗೆ ಅರ್ಹತೆ ಪಡೆದಿದ್ದಾರೆ. ಐಎನ್‌ಸಿ ಅಧಿಸೂಚನೆ ಪ್ರಕಾರ ಆಗಸ್ಟ್ 1ರಿಂದ ಸೆ. 30ರ ಒಳಗೆ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸಬೇಕಿದೆ’ ಎಂದೂ ತಿಳಿಸಿದರು.

‘ಖಾಸಗಿ ನರ್ಸಿಂಗ್ ಕಾಲೇಜುಗಳಲ್ಲಿ ಶೇ 20ರಷ್ಟು ಸರ್ಕಾರಿ, ಉಳಿದ ಶೇ 80ರಷ್ಟು ಸೀಟುಗಳನ್ನು ಅವರೇ ಭರ್ತಿ ಮಾಡಿಕೊಳ್ಳುತ್ತಾರೆ. ಆದರೆ, ಅರ್ಹತೆ ಮೇಲೆ ಸೀಟು ಭರ್ತಿ ಮಾಡಬೇಕು. ಕೋರ್ಸ್ ಶುಲ್ಕ ಹೆಚ್ಚಿಸುವಂತೆ ಅವರು ಬೇಡಿಕೆ ಇಟ್ಟಿದ್ದಾರೆ. ಈ ಬಗ್ಗೆ ಮಾತುಕತೆ ನಡೆದಿದ್ದು, ಪರಸ್ಪರ ಒಪ್ಪಂದ ಮಾಡಿಕೊಳ್ಳಲು ಚಿಂತನೆ ನಡೆದಿದೆ’ ಎಂದರು.

‘ನರ್ಸಿಂಗ್ ಕಾಲೇಜುಗಳಲ್ಲಿನ ಅವ್ಯವಸ್ಥೆ, ಅವ್ಯವಹಾರಗಳ ಬಗ್ಗೆ ಬಿಜೆಪಿಯ ಎನ್. ರವಿಕುಮಾರ್ ಪ್ರಸ್ತಾಪಿಸಿದಾಗ, ‘ನರ್ಸಿಂಗ್ ಕಾಲೇಜುಗಳ ಮೇಲೆ ಸರ್ಕಾರವೇ ನಿಗಾ ಇಡಲಿದೆ. ಅಕ್ರಮದಂಥ ವಿಷಯಗಳಲ್ಲಿ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ನೀವು (ಸದಸ್ಯರು) ಮಾಹಿತಿ ನೀಡಿದರೂ ತಕ್ಷಣ ಕ್ರಮ ಖಚಿತ’ ಎಂದೂ ಸಚಿವರು ಭರವಸೆ ನೀಡಿದರು.

ಎಎಪಿಗೆ ‘ಮುಖ್ಯಮಂತ್ರಿ’ ಚಂದ್ರು ಅಧ್ಯಕ್ಷ



ಬೆಂಗಳೂರು: ‘ಮುಖ್ಯಮಂತ್ರಿ’ ಚಂದ್ರು ಅವರನ್ನು ಆಮ್ ಆದ್ಮಿ ಪಕ್ಷದ(ಎಎಪಿ) ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಚಂದ್ರು ಅವರು ಪಕ್ಷದ ಪ್ರಚಾರ ಸಮಿತಿ ಅಧ್ಯಕ್ಷರಾಗಿದ್ದರು.

ರಾಜ್ಯ ಸಂಘಟನಾ ಕಾರ್ಯದರ್ಶಿಗಳನ್ನಾಗಿ ಬಿ.ಟಿ. ನಾಗಣ್ಣ ಹಾಗೂ ಅರ್ಜುನ್ ಪರಪ್ಪ ಹಲಗಿಗೌಡರ್ ಅವರನ್ನು ನೇಮಿಸಿ ಸಂಘಟನೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಂದೀಪ್ ಪಾಠಕ್ ದೆಹಲಿಯಲ್ಲಿ ಘೋಷಣೆ ಮಾಡಿದ್ದಾರೆ.

ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ಪೃಥ್ವಿರೆಡ್ಡಿ ಅವರನ್ನು ರಾಷ್ಟ್ರೀಯ ಜಂಟಿ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ಸಹಾಯಕ ಪ್ರಾಧ್ಯಾಪಕರ ನೇಮಕಾತಿ–2021ರ ಗೊಂದಲ

‘ನ್ಯಾಯಾಲಯದ ಆದೇಶದ ಬಳಿಕ ತೀರ್ಮಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಹಾಯಕ ಪ್ರಾಧ್ಯಾಪಕರ ನೇಮಕಾತಿ–2021ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಗುರುವಾರ ನೀಡುವ ಆದೇಶ ಪರಿಶೀಲಿಸಿ ರಾಜ್ಯ ಸರ್ಕಾರವು ಅಂತಿಮ ತೀರ್ಮಾನ ಕೈಗೊಳ್ಳಲಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಭರವಸೆ ನೀಡಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನಾ ಸ್ಥಳಕ್ಕೆ ಬುಧವಾರ ಭೇಟಿ ನೀಡಿ ಮಾತನಾಡಿದರು.

‘ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣವು ಒಂದು ವಿಷಯಕ್ಕೆ ಮಾತ್ರ ಸೀಮಿತವಾಗಿದೆ. ತಪ್ಪಿತಸ್ಥರ ಮೇಲೆ ಕ್ರಮವೂ ಆಗಿದೆ. ತನಿಖೆ ನಡೆಸಿದ್ದ ಸಿಸಿಬಿ ಪೊಲೀಸರು ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದಾರೆ. ತನಿಖೆ ಮುಕ್ತಾಯದ ಬಗ್ಗೆ ಅಂತಿಮ ವರದಿ ಸಲ್ಲಿಸಿಲ್ಲ. ಹೀಗಾಗಿ, ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಅಂತಿಮ ವರದಿ ಸಲ್ಲಿಸಲು ಸೂಚಿಸಲಾಗಿದೆ’ ಎಂದು ಹೇಳಿದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನಾಕಾರರನ್ನು ಉದ್ದೇಶಿಸಿ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಮಾತನಾಡಿದರು.

‘ಕಲ್ಯಾಣ ಕರ್ನಾಟಕದ 371‘ಜೆ’ಗೆ ಸಂಬಂಧಿಸಿದಂತೆ ಹಿಂದಿನ ಸರ್ಕಾರವು ಪರೀಕ್ಷೆ ಸಮಯದಲ್ಲಿ ಹೊರಡಿಸಿದ ಆದೇಶವು ಗೊಂದಲಕ್ಕೆ ಕಾರಣವಾಗಿತ್ತು. ಇನ್ನು ಕೆಲವೇ ದಿನಗಳಲ್ಲಿ ಸಮಸ್ಯೆಗೆ ಪರಿಹಾರ ಸಿಗಲಿದೆ’ ಎಂದು ಹೇಳಿದರು.

‘ನೇಮಕಾತಿಗೊಂಡಿರುವ 1,242 ಅಭ್ಯರ್ಥಿಗಳಿಗೂ ನ್ಯಾಯ ಒದಗಿಸುತ್ತೇವೆ. ಯಾರೊಬ್ಬರಿಗೂ ಅನ್ಯಾಯವಾಗಲು ಬಿಡುವುದಿಲ್ಲ. ಸರ್ಕಾರವು ಸಿಸಿಬಿ ಅಂತಿಮ ವರದಿ ಹಾಗೂ ನ್ಯಾಯಾಲಯದ ತೀರ್ಪು ನಿರೀಕ್ಷಿಸುತ್ತಿದೆ’ ಎಂದು ಹೇಳಿದರು.

ಸಚಿವರ ಭರವಸೆ ಮೇರೆಗೆ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು, ತಾತ್ಕಾಲಿಕವಾಗಿ ಪ್ರತಿಭಟನೆಯನ್ನು ವಾಪಸ್ ಪಡೆದರು.

ಬೋಧಕರ ನೇಮಕಾತಿ ವಿಳಂಬ ತಡೆಗೆ ಕಾನೂನು: ಸಚಿವ ಮಧು ಬಂಗಾರಪ್ಪ

ಬೆಂಗಳೂರು: ‘ರಾಜ್ಯದ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ 2015ರ ಡಿಸೆಂಬರ್‌ಗಿಂತಲೂ ಪೂರ್ವದಲ್ಲಿ ಖಾಲಿಯಾಗಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಿದ ನಂತರ 2016ರ ಜ. 1ರ ಬಳಿಕ ಖಾಲಿಯಾಗಿರುವ ಹುದ್ದೆಗಳನ್ನು ತುಂಬಲಾಗುವುದು. ನೇಮಕಾತಿ ವಿಳಂಬ ತಡೆಯಲು ಕಾನೂನು ತರುವ ಚಿಂತನೆಯಿದೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ ತಿಳಿಸಿದರು.

ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ಅವರು ವಿಷಯ ಪ್ರಸ್ತಾಪಿಸಿ, ‘ಕಾಲ ಕಾಲಕ್ಕೆ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದರಿಂದ ಹಾಲಿ ಶಾಲೆಗಳಲ್ಲಿ ಶೇ 50ಕ್ಕಿಂತ ಹೆಚ್ಚಿನ ಹುದ್ದೆಗಳು ಖಾಲಿ ಇವೆ. ಇದರಿಂದ ಗುಣಾತ್ಮಕ ಶಿಕ್ಷಣಕ್ಕೆ ತೊಂದರೆಯಾಗುತ್ತಿದೆ’ ಎಂದರು. ಅವರ ಮಾತಿಗೆ ಎಸ್.ವಿ. ಸಂಕನೂರ, ಶಶೀಲ್ ನಮೋಶಿ ಧ್ವನಿಗೂಡಿಸಿದರು.

‘2015ರ ಡಿಸೆಂಬರ್‌ಗಿಂತಲೂ ಪೂರ್ವದಲ್ಲಿ ಖಾಲಿಯಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಅನುಮತಿ ನೀಡಲಾಗಿದೆ. ಮೊದಲು ಆ ಹುದ್ದೆಗಳನ್ನು ಭರ್ತಿ ಮಾಡುವಂತೆ ಆರ್ಥಿಕ ಇಲಾಖೆ ತಿಳಿಸಿದೆ. ಜಿಲ್ಲೆಗಳಲ್ಲಿ ಕಾರ್ಯಭಾರ ಕಡಿಮೆ ಇರುವ ಅನುದಾನಿತ ಶಾಲೆಗಳ ಶಿಕ್ಷಕರನ್ನು ಅಗತ್ಯ ಇರುವ ಶಾಲೆಗಳಿಗೆ ಮರು ನಿಯೋಜನೆಗೊಳಿಸಲು ಜಿಲ್ಲಾ ಉಪ ನಿರ್ದೇಶಕರ ಹಂತದಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ’ ಎಂದೂ ಸಚಿವರು ವಿವರಿಸಿದರು.

ಐಎಫ್‌ಎಸ್, ಎಸ್‌ಎಫ್‌ಎಸ್, ಐಪಿಎಸ್ ಅಧಿಕಾರಿಗಳ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಸ್ ಹಾಗೂ ಐಎಫ್‌ಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಐಪಿಎಸ್: ಐಪಿಎಸ್ ಅಧಿಕಾರಿ ಎಸ್.ಎನ್. ಸಿದ್ರಾಮಪ್ಪ ಅವರನ್ನು ಬೆಳಗಾವಿ ನಗರ ಪೊಲೀಸ್ ಕಮಿಷನರ್ ಆಗಿ ವರ್ಗಾವಣೆ ಮಾಡಲಾಗಿದೆ.

ವರ್ತಿಕಾ ಕಟಿಯಾರ್ ಅವರನ್ನು ಆಂತರಿಕ ಭದ್ರತಾ ವಿಭಾಗದ ಎಸ್‌ಪಿ, ಡಿ.ಆರ್. ಸಿರಿಗೌರಿ ಅವರನ್ನು ಬೆಳಗಾವಿ ನಗರ ಉಪ ಪೊಲೀಸ್ ಆಯುಕ್ತೆ (ಆಡಳಿತ), ಅನೂಪ್ ಎ. ಶೆಟ್ಟಿ ಅವರನ್ನು ಸಿಐಡಿ ಸೈಬರ್ ಕ್ರೈಮ್ ವಿಭಾಗದ ಎಸ್‌ಪಿ ಆಗಿ ನಿಯೋಜಿಸಲಾಗಿದೆ.

ಐಎಫ್‌ಎಸ್ ಅಧಿಕಾರಿಗಳಾದ ಎ.ವಿ. ಸೂರ್ಯ ಸೇನ್ ಅವರನ್ನು ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಮತ್ತು ವೈ.ಕೆ. ದಿನೇಶ್‌ಕುಮಾರ್ ಅವರನ್ನು ಉಡುಪಿ ಅರಣ್ಯ ವಲಯದ ನಿರ್ದೇಶಕರಾಗಿ (ಪರಿಸರ) ವರ್ಗಾವಣೆ ಮಾಡಲಾಗಿದೆ. ಅಲ್ಲದೆ, ಅವರಿಗೆ ಹೆಚ್ಚುವರಿಯಾಗಿ ಮಂಗಳೂರು ವಲಯ ನಿರ್ದೇಶಕ (ಪರಿಸರ) ಹುದ್ದೆಯನ್ನೂ ನೀಡಲಾಗಿದೆ.

ಎಸ್‌ಎಫ್‌ಎಸ್ ಅಧಿಕಾರಿಗಳಾದ ಎಂ. ರಾಮಕೃಷ್ಣಪ್ಪ ಅವರನ್ನು ರಾಮನಗರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ, ಎಲ್. ನಂದೀಶ್ ಅವರನ್ನು ಕೊಪ್ಪ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ ನೇಮಿಸಲಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in

ಅಭಿಮತ



ಸುಭಾಷಿತ

'ಹೊಸದು' ಎಂಬುದು ನಮ್ಮನ್ನು ಹೆದರಿಸಬೇಕಾಗಿಲ್ಲ.

-ಟಿ.ಪಿ.ಕೈಲಾಸಂ

ಇ.ಡಿ. ಕುರಿತು 'ಸುಪ್ರೀಂ' ತೀರ್ಪು ಕೇಂದ್ರ ಸರ್ಕಾರಕ್ಕೆ ಹಿನ್ನಡೆ

ಜಾರಿ ನಿರ್ದೇಶನಾಲಯದ (ಇ.ಡಿ) ನಿರ್ದೇಶಕ ಎಸ್‌.ಕೆ. ಮಿಶ್ರಾ ಅವರ ಸೇವಾವಧಿಯನ್ನು ವಿಸ್ತರಣೆ ಮಾಡಿದ ಕೇಂದ್ರ ಸರ್ಕಾರದ ತೀರ್ಮಾನವನ್ನು ಸುಪ್ರೀಂ ಕೋರ್ಟ್‌ ಅಸಿಂಧುಗೊಳಿಸಿದೆ. ಈ ಅಧಿಕಾರಿಯ ಸೇವಾವಧಿಯನ್ನು ಮತ್ತೆ ಮತ್ತೆ ವಿಸ್ತರಣೆ ಮಾಡಿದ್ದ ಕೇಂದ್ರಕ್ಕೆ ಇದು ಒಂದು ಹಿನ್ನಡೆ. ಆದರೆ ಕೇಂದ್ರೀಯ ತನಿಖಾ ದಳ (ಸಿಬಿಐ) ಹಾಗೂ ಇ.ಡಿ. ಮುಖ್ಯಸ್ಥರ ಅಧಿಕಾರ ಅವಧಿಯನ್ನು ವಿಸ್ತರಿಸಲು ಅವಕಾಶ ಕಲ್ಪಿಸುವ ಕಾನೂನು ತಿದ್ದುಪಡಿಯನ್ನು ನ್ಯಾಯಾಲಯ ಎತ್ತಿಹಿಡಿದಿದೆ. ಮಿಶ್ರಾ ಅವರು ವಿಸ್ತರಿತ ಸೇವಾ ಅವಧಿಯಲ್ಲಿ ಇದ್ದ ಸಂದರ್ಭದಲ್ಲಿ, ಅಂದರೆ 2021ರಲ್ಲಿ, ಮತ್ತೆ ಸೇವಾ ಅವಧಿ ವಿಸ್ತರಣೆಗೆ ಅವಕಾಶ ಇಲ್ಲ ಎಂದು ಸುಪ್ರೀಂ ಕೋರ್ಟ್‌ ನೀಡಿದ್ದ ಆದೇಶವೊಂದನ್ನು ಮೀರಲು ಕೇಂದ್ರ ಈ ತಿದ್ದುಪಡಿಯನ್ನು ತಂದಿತ್ತು. ಈ ತಿದ್ದುಪಡಿಯನ್ನು ತಮಗೆ ಬೇಕಾದ ಅಧಿಕಾರಿಗಳನ್ನು ಈ ಎರಡು ಆಯಕಟ್ಟಿನ ಜಾಗಗಳಲ್ಲಿ ಮುಂದುವರಿಸಲು ದುರ್ಬಳಕೆ ಮಾಡಿಕೊಳ್ಳಬಹುದು ಎಂಬ ಅಂಶವನ್ನು ಕೋರ್ಟ್‌ ಗಮನಕ್ಕೆ ತರಲಾಗಿದೆ. ಆದರೆ ತಿದ್ದುಪಡಿಯ ದುರ್ಬಳಕೆಯನ್ನು ತಡೆಯಲು ಅಗತ್ಯವಿರುವ ಕ್ರಮಗಳು ಕಾನೂನಿನಲ್ಲಿ ಅಡಕವಾಗಿವೆ ಎಂದು ಕೋರ್ಟ್‌ ಉಲ್ಲೇಖಿಸಿದೆ. ಆದರೆ, ದುರ್ಬಳಕೆ ತಡೆಯುವ ಉದ್ದೇಶದ ಕ್ರಮಗಳು ವಾಸ್ತವದಲ್ಲಿ ಪರಿಣಾಮಕಾರಿ ಆಗಿಲ್ಲ. ಸಂಸತ್ತು ತನ್ನ ವಿವೇಕವನ್ನು ಬಳಸಿ ಅನುಮೋದನೆ ನೀಡಿರುವ ಕಾನೂನಿನ ಒಳಿತು, ಕೆಡುಕುಗಳ ಬಗ್ಗೆ ತಾನು ನಿರ್ಣಯಿಸಲು ಆಗುವುದಿಲ್ಲ ಎಂದು ಕೋರ್ಟ್‌ ಹೇಳಿದೆ. ಇದು ಚರ್ಚಾರ್ಹ ವಿಚಾರ.



ಶಾಸನಬದ್ಧ ಸಂಸ್ಥೆಯಾಗಿರುವ ಜಾರಿ ನಿರ್ದೇಶನಾಲಯವು ಸ್ವತಂತ್ರವಾಗಿ ಕೆಲಸ ನಿರ್ವಹಿಸಬೇಕು

ಸರ್ಕಾರವು ಈ ಸಂಸ್ಥೆಗಳನ್ನು ನಿಯಂತ್ರಿಸಲು ಅಧಿಕಾರವನ್ನು ಬಳಸಿಕೊಳ್ಳುವ ಸಾಧ್ಯತೆಯನ್ನು ಹಾಗೂ ಅಧಿಕಾರವನ್ನು ಬಳಸಿಕೊಳ್ಳುವ ವಾಸ್ತವವನ್ನು ಕೋರ್ಟ್‌ ತೀರ್ಪಿಗೆ ಸರ್ಕಾರದ ಕಡೆಯಿಂದ ಬಂದಿರುವ ಪ್ರತಿಕ್ರಿಯೆಯು ಖಚಿತಪಡಿಸುವಂತಿದೆ. ತೀರ್ಪಿನ ವಿಚಾರವಾಗಿ ಸಂಭ್ರಮಿಸುತ್ತ ಇರುವವರು ಭ್ರಮೆಯಲ್ಲಿ ಇದ್ದಾರೆ, ಏಕೆಂದರೆ ಇ.ಡಿ. ಒಬ್ಬ ವ್ಯಕ್ತಿಯನ್ನು ಮೀರಿ ನಿಂತಿರುವ ಸಂಸ್ಥೆ ಎಂದು ಕೇಂದ್ರ ಗೃಹ ಸಚಿವ ಅಮಿತ್‌ ಶಾ ಹೇಳಿದ್ದಾರೆ. ಭ್ರಷ್ಟರ ಮೇಲೆ ದಾಳಿ ನಡೆಸಲು ಇ.ಡಿ. ಹೊಂದಿರುವ ಅಧಿಕಾರವು ಮುಂದುವರಿಯುತ್ತದೆ ಮತ್ತು ಇ.ಡಿ. ನಿರ್ದೇಶಕರು 'ವಂಶಪಾರಂಪರ್ಯದ ಕಾರಣದಿಂದಾಗಿ ವಿಶೇಷ ಸವಲತ್ತು ಹೊಂದಿರುವವರ ವ್ಯಾಪಕ ಭ್ರಷ್ಟಾಚಾರವನ್ನು' ಗಮನಿಸುತ್ತ ಇರುತ್ತಾರೆ ಎಂದು ಶಾ ಅವರು ಹೇಳಿದ್ದಾರೆ. ಹಲವು ರಾಜಕೀಯ ಮುಖಂಡರ ವಿರುದ್ಧ ಇರುವ ಪ್ರಕರಣಗಳು ಹಾಗೂ ಅವರ ವಿರುದ್ಧ ನಡೆದಿರುವ ತನಿಖೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಶಾ ಅವರು ಹೀಗೆ ಹೇಳಿರುವಂತಿದೆ. ಇ.ಡಿ.ಯನ್ನು ಕೇಂದ್ರ ಸರ್ಕಾರವು ತನ್ನ ರಾಜಕೀಯ ವಿರೋಧಿಗಳು ಹಾಗೂ ಇತರ ಟೀಕಾಕಾರರ ವಿರುದ್ಧ ಬಳಸಿಕೊಳ್ಳುತ್ತಿದೆ ಎಂಬ ಟೀಕೆಯಲ್ಲಿ ವಾಸ್ತವ ಇದೆ ಎಂಬಂತಿದೆ ಶಾ ಅವರು ನೀಡಿರುವ ಹೇಳಿಕೆ. 'ವಂಶಪಾರಂಪರ್ಯದ ಕಾರಣದಿಂದಾಗಿ ವಿಶೇಷ ಸವಲತ್ತು ಹೊಂದಿರುವವರು' ಎಂಬ ಪದಗಳ ಬಳಕೆಯು ಅವರ ಹೇಳಿಕೆಗೆ ಸ್ಪಷ್ಟವಾಗಿ ರಾಜಕೀಯ ಬಣ್ಣ ನೀಡುತ್ತದೆ.

ಇ.ಡಿ. ಅನುಸರಿಸುತ್ತಿರುವ ನೀತಿಯನ್ನು ಶಾ ಅವರು ಅನುಮೋದಿಸುತ್ತಿರುವುದು ಹಾಗೂ ಸಂಸ್ಥೆಯು ತನ್ನ ಈಗಿನ ನಡೆಯನ್ನು ಮುಂದುವರಿಸಲಿದೆ ಎಂದು ಹೇಳುತ್ತಿರುವುದು ಸರಿಯಲ್ಲ. ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಶಾಸನಬದ್ಧ ಸಂಸ್ಥೆ ಇ.ಡಿ. ಎಂದು ಪರಿಗಣಿಸಲಾಗಿದೆ. ಇದು ಸ್ವತಂತ್ರವಾಗಿ ಕೆಲಸ ಮಾಡಬೇಕು. ಸಂಸ್ಥೆಯ ಪರವಾಗಿ ಮಾತನಾಡಲು ಸರ್ಕಾರದಲ್ಲಿ ಭಾಗಿಯಾಗಿರುವ ವ್ಯಕ್ತಿಗೆ ಅಧಿಕಾರ ಇಲ್ಲ, ಹಾಗೆ ಮಾತನಾಡಲು ಕಾರಣಗಳೂ ಇಲ್ಲ. ಅದರಲ್ಲೂ, ಗೃಹ ಸಚಿವರಿಗೆ ಅಂತಹ ಕಾರಣಗಳು ಇರಬಾರದು. ಏಕೆಂದರೆ, ಇ.ಡಿ., ಹಣಕಾಸು ಸಚಿವಾಲಯದ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತದೆ. ಇ.ಡಿ. ವಾಸ್ತವದಲ್ಲಿ ಕೆಲಸ ಮಾಡುವುದು ಸರ್ಕಾರದ ಅಧೀನದಲ್ಲಿಯೇ ವಿನಾ ಸಂಸ್ಥೆಯ ನಿರ್ದೇಶಕ ಸ್ಥಾನದಲ್ಲಿರುವ ವ್ಯಕ್ತಿಯ ಅಧೀನದಲ್ಲಿ ಅಲ್ಲ ಎಂಬ ವಾಸ್ತವವನ್ನು ಮತ್ತೆ ನೆನಪಿಸುವ ಬಗೆಯಲ್ಲಿ ಶಾ ಅವರ ಮಾತುಗಳನ್ನು ಅರ್ಥ ಮಾಡಿಕೊಳ್ಳಬಹುದು. ಹೀಗಾಗಿಯೇ, ವಿರೋಧ ಪಕ್ಷಗಳು ಶಾ ಅವರ ಹೇಳಿಕೆಯನ್ನು ಒಂದು ಬೆದರಿಕೆಯಾಗಿ ಹಾಗೂ ಇ.ಡಿ. ತನ್ನ ನಡೆಯನ್ನು ಬದಲಿಸಿಕೊಳ್ಳುವುದಿಲ್ಲ ಎನ್ನುವ ಘೋಷಣೆ ಎಂಬಂತೆ ಪರಿಗಣಿಸಿವೆ.

ದಿನದ ಟ್ವೀಟ್

ಮಳೆ ವೈಚಿತ್ರ್ಯ



ಉತ್ತರ ಭಾರತದ ರಾಜ್ಯಗಳು ಅತಿವೃಷ್ಟಿಯಿಂದ ತತ್ತರಿಸುತ್ತಿದ್ದರೆ, ತಮಿಳುನಾಡಿನ ದಕ್ಷಿಣ ಭಾಗದಲ್ಲಿ ಇದುವರೆಗೆ ಮುಂಗಾರು ಮಳೆ ನಿರಾಶಾದಾಯಕವಾಗಿದೆ. ಸಾಮಾನ್ಯವಾಗಿ ಈ ಸಮಯದಲ್ಲಿ ತುಂಬಿ ತುಳುಕುತ್ತಿದ್ದ ನಮ್ಮ ಹಳ್ಳಿಗಳ ಕೆರೆಗಳು ಮತ್ತು ಹೊಳೆಗಳಲ್ಲಿ ಈ ಬಾರಿ ಅಂತಹ ಚಿತ್ರಣ ಇಲ್ಲ. ಇದು ರೈತರಲ್ಲಿ ಆತಂಕ ಮೂಡಿಸಿದೆ. ಶೀಘ್ರದಲ್ಲೇ ಉತ್ತಮ ಮಳೆಯಾಗುತ್ತದೆ ಎಂಬ ಭರವಸೆ ಹೊಂದಿದ್ದೇನೆ ಮತ್ತು ಅದಕ್ಕಾಗಿ ಪ್ರಾರ್ಥಿಸುತ್ತೇನೆ.

ಶ್ರೀಧರ್ ವೆಂಬು, ಉದ್ಯಮಿ

ಕಿಡಿನುಡಿ



ಬೆಂಗಳೂರಿನಲ್ಲಿ ನಡೆದ ಕಂಪನಿಯೊಂದರ ಸಿಇಒ ಮತ್ತು ಎಂ.ಡಿ. ಹತ್ಯೆ ಪ್ರಕರಣದಲ್ಲಿ, ನಗರದ ಪೊಲೀಸರು ಅಪರಾಧ ನಡೆದ ಆರು ಗಂಟೆಗಳ ಒಳಗಾಗಿ, ಕಂಪನಿಯ ಮಾಜಿ ಉದ್ಯೋಗಿ ಸೇರಿದಂತೆ ಮೂವರನ್ನು ಬಂಧಿಸಿದ್ದಾರೆ. ನಾಲ್ಕನೇ ಆರೋಪಿ ಅರುಣ್ ಕುಮಾರ್ ತಲೆಮರೆಸಿಕೊಂಡಿದ್ದಾನೆ.
ಈ ಮಧ್ಯೆ, ಪ್ರಕರಣಕ್ಕೆ ಸಂಬಂಧಿಸಿದಂತೆ, ಕೋಮುಬಣ್ಣ ಬಳಿದುಕೊಂಡ ತಪ್ಪು ಮಾಹಿತಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರವಾಹದೋಪಾದಿಯಲ್ಲಿ ಹರಿದಾಡುತ್ತಿವೆ.

ಅನುಷಾ ರವಿ ಸೂದ್, ಪತ್ರಕರ್ತೆ

25 ವರ್ಷಗಳ ಹಿಂದೆ
ಸೋಮವಾರ, 13-7-1998

• ಮಹಿಳಾ ಮೀಸಲಾತಿ ಮಸೂದೆ ಇಂದು ಸಂಸತ್ತಿನಲ್ಲಿ ಮಂಡನೆ

ನವದೆಹಲಿ, ಜುಲೈ 12 (ಪಿಟಿಐ)– ವಿವಾದಾತ್ಮಕ ಮಹಿಳಾ ಮೀಸಲಾತಿ ಮಸೂದೆಯನ್ನು ಲೋಕಸಭೆಯಲ್ಲಿ ಸೋಮವಾರ ಮಂಡಿಸಲು ಸರ್ಕಾರ ಸರ್ವ ಸಿದ್ಧತೆ ನಡೆಸಿದೆ. ಮಸೂದೆಯು ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಶೇಕಡ 33ರಷ್ಟು ಮೀಸಲಾತಿ ನೀಡುತ್ತದೆ.

ಕೆಲವು ರಾಜಕೀಯ ಪಕ್ಷಗಳು ಮಸೂದೆಯನ್ನು ಈಗಿರುವಂತೆ ಅಂಗೀಕರಿಸಲು ವಿರೋಧವನ್ನು ವ್ಯಕ್ತಪಡಿಸಿವೆ.

ಲೋಕಸಭೆಯಲ್ಲಿ ಎಡಪಕ್ಷಗಳು ಹಾಗೂ ಕೆಲವೊಂದು ಸಣ್ಣ ಗುಂಪುಗಳು ಮಸೂದೆಯನ್ನು ಬೆಂಬಲಿಸುವುದರಿಂದ ಅದಕ್ಕೆ ಮೂರನೇ ಎರಡರಷ್ಟು ಮತ ದೊರೆಯುವುದರಲ್ಲಿ ಸಂಶಯವಿಲ್ಲ ಎಂದು ಸಂಸದೀಯ ವ್ಯವಹಾರಗಳ ಸಚಿವ ಮದನ್‌ಲಾಲ್ ಖುರಾನ ಅವರು ಇಂದು ಇಲ್ಲಿ ತಿಳಿಸಿದರು.

• ಜಮ್ಮು ಪ್ರದೇಶದಲ್ಲಿ ಪಾಕಿಸ್ತಾನದಿಂದ ಭಾರಿ ಗುಂಡಿನ ದಾಳಿ

ಜಮ್ಮು, ಜುಲೈ 12 (ಪಿಟಿಐ)– ಪಾಕಿಸ್ತಾನದಿಂದ ಸೇನಾಪಡೆಗಳು ಜಮ್ಮು ಪ್ರದೇಶದಲ್ಲಿ ಹಿಂದೆಂದಿಗಿಂತಲೂ ಭಾರಿ ಪ್ರಮಾಣದಲ್ಲಿ ಗುಂಡಿನ ದಾಳಿಯನ್ನು ನಿನ್ನೆ ರಾತ್ರಿಯಿಂದ ನಡೆಸುತ್ತಿರುವುದಾಗಿ ಅಧಿಕೃತ ಮೂಲಗಳು ತಿಳಿಸಿವೆ.

ಭಾರತದ 16 ನೆಲೆಗಳು ಹಾಗೂ ನಾಗರಿಕ ಪ್ರದೇಶಗಳ ಮೇಲೆ ಈ ಗುಂಡಿನ ದಾಳಿ ನಡೆಯುತ್ತಿದೆ. ಈ ಮಧ್ಯೆ ಕಾಶ್ಮೀರದಲ್ಲಿ ಒಟ್ಟು 12 ಜನರು ಕಳೆದ 24 ಗಂಟೆಗಳಲ್ಲಿ ಹಿಂಸಾಚಾರದಲ್ಲಿ ಸಾವಿಗೀಡಾಗಿದ್ದಾರೆ.

50 ವರ್ಷಗಳ ಹಿಂದೆ
ಶುಕ್ರವಾರ, 13-7-1973

• ಇಸ್ಲಾಮಾಬಾದ್‌ನಲ್ಲಿ ಅಧಿಕಾರಿ ಮಟ್ಟದ ಸಭೆ: ಭಾರತದ ಒಪ್ಪಿಗೆ

ನವದೆಹಲಿ, ಜುಲೈ 12– 1971ರ ಯುದ್ಧದಿಂದ ಉದ್ಭವಿಸಿರುವ ಮಾನವೀಯ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಭಾರತ ಮತ್ತು ಪಾಕಿಸ್ತಾನದ ಉನ್ನತ ಪ್ರತಿನಿಧಿಗಳು ಈ ತಿಂಗಳ 24ರಂದು ಇಸ್ಲಾಮಾಬಾದ್‌ನಲ್ಲಿ ಸಭೆ ಸೇರುವರು.

ಈ ಮಾತುಕತೆಯು ಎರಡು ಅಥವಾ ಮೂರು ದಿನಗಳ ಕಾಲ ನಡೆಯುವ ನಿರೀಕ್ಷೆ ಇದೆ.

ಪ್ರಧಾನಿ ಅವರ ಮಾಜಿ ಮುಖ್ಯ ಕಾರ್ಯದರ್ಶಿ ಪಿ.ಎನ್. ಹಕ್ಸರ್ ಅವರು ಈ ಮಾತುಕತೆಯಲ್ಲಿ ಭಾಗವಹಿಸುವ ಭಾರತ ನಿಯೋಗದ ನಾಯಕರು.

ಪಾಕಿಸ್ತಾನದ ರಕ್ಷಣೆ ಮತ್ತು ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ಅಜೀಜ್ ಅಹ್ಮದ್ ಅವರು ಮಾತುಕತೆಯಲ್ಲಿ ಭಾಗವಹಿಸುವ ಪಾಕಿಸ್ತಾನದ ನಿಯೋಗದ ನಾಯಕರು. ಭಾರತ ಮತ್ತು ಪಾಕಿಸ್ತಾನ ತುರ್ತು ಪತ್ರ ವ್ಯವಹಾರ ನಡೆಸಿದ ಬಳಿಕ ಮಾತುಕತೆಯ ಸ್ಥಳ ಹಾಗೂ ದಿನ ನಿರ್ಧಾರವಾಯಿತು.

• ಮುಂದಿನ ಸಂಸತ್ ಅಧಿವೇಶನದಲ್ಲಿ 'ಕರ್ನಾಟಕ' ನಾಮಕರಣ

ಬೆಂಗಳೂರು, ಜುಲೈ 12– ಮುಂಬರುವ ಸಂಸತ್ತಿನ ಅಧಿವೇಶನದಲ್ಲಿ ರಾಜ್ಯದ ಹೆಸರನ್ನು 'ಕರ್ನಾಟಕ' ಎಂದು ಬದಲಾಯಿಸುವ ಸಂವಿಧಾನದ ತಿದ್ದುಪಡಿ ವಿಧೇಯಕ ಅಂಗೀಕಾರವಾಗಲಿದೆ ಎಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

ರಾಜ್ಯದ ಹೆಸರನ್ನು ಬದಲಾಯಿಸುವ ಕಾರ್ಯವನ್ನು ಮುಂದಕ್ಕೆ ಹಾಕಲಾಗುವುದೆಂದು ಎದ್ದಿರುವ ಊಹಾಪೋಹವನ್ನು ಮುಖ್ಯಮಂತ್ರಿ ಅಲ್ಲಗಳೆದರು.

ಈ ಸಂಕಟಗಳು ಯಾರಿಗೂ ಬೇಡ, ಆದರಿಂದ ಪಾರಾಗುವ ಉಪಾಯಗಳೂ ಯಾರಿಗೂ ಬೇಡ!

ಪಶ್ಚಿಮದ ಕ್ಷೋಭೆ, ಪೃಥ್ವಿಗೆಲ್ಲ ಪೀಡೆ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಹೆದ್ದಾರಿಯ ಆ ದಟ್ಟ ಟ್ರಾಫಿಕ್ ಒಂದು ದುಃಸ್ವಪ್ನದ ರೂಪ ಪಡೆದಿತ್ತು. ವಾಹನಗಳ ಬದಲು ದಪ್ಪ ದಪ್ಪ ದಿಮ್ಮಿಗಳು ನೂರಿನ್ನೂರರ ಸಂಖ್ಯೆಯಲ್ಲಿ ಸಾಗಿ ಬರುತ್ತಿದ್ದವು. ಯಾವ ಸಿಗ್ನಲ್ಲಿಗೂ ಅವು ಕಾಯುತ್ತಿರಲಿಲ್ಲ. ಗುಡಿ ಗೋಪುರಗಳು, ಮಹಡಿ ಮನೆಗಳು, ಸೇತುವೆಗಳು ಸಾಗಿ ಬರುತ್ತಿದ್ದವು. ಚಂದದ ಕಾರುಗಳು, ಟೆಂಪೊಗಳು, ಉದ್ದುದ್ದ ಬಸ್‌ಗಳು ಚಕ್ರಗಳ ಸಹಾಯವಿಲ್ಲದೆ ಪಲ್ಟಿ ಹೊಡೆಯುತ್ತ ಚಲಿಸುತ್ತಿದ್ದವು. ರಸ್ತೆಗಳೇ ತುಂಡು ತುಂಡಾಗಿ ಚಲಿಸುತ್ತಿದ್ದವು. ಗುಡ್ಡ-ಬೆಟ್ಟಗಳಂಚಿನ ಬಂಡೆಗಳೂ ಉರುಳುರುಳಿ ಟ್ರಾಫಿಕ್ಕಿಗೆ ಸೇರುತ್ತಿದ್ದವು.

ದುಃಸ್ವಪ್ನವೆ? ಖಂಡಿತ ಅಲ್ಲ. ಮೊನ್ನೆ ಸೋಮವಾರ ವಾರ್ತಾಪರದೆಗಳ ಮೇಲೆ ಕಂಡುಬಂದ ರಿಯಾಲಿಟಿ ಶೋ ಅದಾಗಿತ್ತು. ಹಿಮಾಚಲ ಪ್ರದೇಶ, ಉತ್ತರಾಖಂಡ, ಉತ್ತರ ಪ್ರದೇಶಗಳಲ್ಲಿ ಸಂಭವಿಸಿದ ಮೇಘಸ್ಫೋಟದ, ಮಹಾಧಾರೆಯ ದೃಶ್ಯ ಅದಾಗಿತ್ತು. ಬೀದಿಗಳೇ ನದಿಯಾಗಿದ್ದವು. ನಿಸರ್ಗಕ್ಕೆ ಮನುಷ್ಯ ಕೊಡುತ್ತಿದ್ದ ಏಟುಗಳಿಗೆ ಪ್ರತಿಯಾಗಿ ಪೃಥ್ವಿಯೇ ಎದಿರೇಟು ಕೊಡುತ್ತಿರುವ ದೃಶ್ಯಮಾಲೆ ಅದಾಗಿತ್ತು.

'ನೀನು ಮರಗಳನ್ನು ಬೀಳಿಸಿ ರಾಶಿ ಒಟ್ಟಿದ್ದೀಯ, ತಗೋ ನಿನ್ನ ದಿಮ್ಮಿಗಳ ರಾಶಿ! ನೀನಿಲ್ಲಿ ಬಂಡೆಗಳಿಗೆ ಡೈನಮೈಟ್ ಇಟ್ಟು ಬೀಳಿಸುತ್ತಿದ್ದೀಯ, ತಗೋ ನಾನೂ ಬೀಳಿಸುತ್ತೇನೆ. ನೀನಿಲ್ಲಿ ಕಾಂಕ್ರೀಟ್ ಮನೆ, ಡಾಂಬರ್ ಹೈವೇ, ಉಕ್ಕಿನ ಸೇತುವೆ ಕಟ್ಟಬಾರದಿತ್ತು. ತಗೋ ನಾನಿದನ್ನೆಲ್ಲ ಕ್ಲೀನಪ್ ಮಾಡುತ್ತೇನೆ. ನೀನು ಇಲ್ಲಿ ಪೆಟ್ರೋಲ್, ಡೀಸೆಲ್ ಹೊಗೆ ಹಾಯಿಸುವ ಈಪಾಟಿ ಬಸ್ಸು, ಲಾರಿ, ಕಾರುಗಳ ಸಾಲುಸಾಲು ಮೆರವಣಿಗೆ ಮಾಡುತ್ತಿದ್ದೀಯ, ತಗೋ ನಾನಿವನ್ನೆಲ್ಲ ಗುಡಿಸಿ ಹಾಕುತ್ತೇನೆ' ಹೀಗೆಂದು ಪ್ರಕೃತಿ ಪಾಠ ಹೇಳುವಂತಿತ್ತು.

ಮುಗಿಲಿನ ಎರಡು ಮಹಾಶಕ್ತಿಗಳು ಒಟ್ಟಾಗಿ ಮುಗಿಬಿದ್ದಿದ್ದಕ್ಕೇ ಉತ್ತರ ಭಾರತದಲ್ಲಿ ಮೊನ್ನೆ ದಾಖಲೆಯ ಜಲಪ್ರಳಯ ಸಂಭವಿಸಿತೆಂದು ಪವನವಿಜ್ಞಾನಿಗಳು ಹೇಳಿದ್ದಾರೆ. ಒಂದು, ಬಂಗಾಳ ಉಪಸಾಗರದಿಂದ ದಿಲ್ಲಿಯ ಕಡೆ ಬರುತ್ತಿದ್ದ ಆಗ್ನೇಯ ಮಾನ್ಸೂನ್- ಅದು ತನ್ನ ಮಾಮೂಲು ಪಂಚಾಂಗಕ್ಕೆ ತಕ್ಕಂತೆ ಸಾಗಿ ಬರುತ್ತಿತ್ತು. ಅದೇ ವೇಳೆಗೆ ಯುರೋಪ್ ಕಡೆಯಿಂದ 'ವೆಸ್ಟರ್ನ್ ಡಿಸ್ಟರ್ಬನ್ಸ್' ಹೆಸರಿನ ಚಂಡಮೇಘವೂ ಇರಾಕ್-ಇರಾನ್ ಮೇಲಿಂದ ಸಾಗಿ ಬಂತು. ಇದೂ ಪ್ರತಿ ವರ್ಷ ಬರುವಂಥದ್ದೇ, ಆದರೆ ಅಕ್ಟೋಬರ್‌ನಲ್ಲಿ ಬಂದು ಮಳೆ ಸುರಿಸಬೇಕಿತ್ತು. ಏನು ಅವಸರವಿತ್ತೊ ಈಗಲೇ ಬಂದು ಢೀ ಕೊಟ್ಟಿದೆ. ಅಂತೂ ಡಬಲ್ ಎಂಜಿನ್ ಧಮಾಕಾ.

ಈ ವೆಸ್ಟರ್ನ್ ಡಿಸ್ಟರ್ಬನ್ಸ್ ಎಂಬುದರ ಚಲನೆಯೂ ಈ ಬಾರಿ ವಿಲಕ್ಷಣದ್ದಾಗಿತ್ತು. ಆಫ್ರಿಕಾ ಮತ್ತು ಯುರೋಪ್ ಖಂಡದ ನಡುವಣ ಮಧ್ಯಸಮುದ್ರದಿಂದ (ಮೆಡಿಟರೇನಿಯನ್ ಸೀ) ಮೋಡ ಮೇಲಕ್ಕೇರಿ ಇತ್ತ ಸಾಗಿ ಬರುತ್ತದೆ. ಆ ಸಮುದ್ರ ಈಚೀಚೆಗೆ ಜಾಸ್ತಿ ಬಿಸಿಯಾಗುತ್ತಿದೆ. ಎಷ್ಟು ಬಿಸಿ ಎಂದರೆ, ಅಲ್ಲೇ ಪಕ್ಕದ ಫ್ರಾನ್ಸ್, ಜರ್ಮನಿ, ಇಟಲಿ, ಗ್ರೀಸ್ ಮತ್ತು ಸ್ಪೇನ್ ದೇಶಗಳಲ್ಲಿ ಕಳೆದ ವರ್ಷ ಸೆಕೆಯಿಂದಾಗಿಯೇ 61 ಸಾವಿರ 'ಹೆಚ್ಚುವರಿ ಮರಣ ಸಂಭವಿಸಿದೆ' ಎಂದು ವಿಜ್ಞಾನಿಗಳು ಹೇಳಿದ್ದನ್ನು ಲಂಡನ್ನಿನ ನ್ಯೂ ಸೈಂಟಿಸ್ಟ್ ಪತ್ರಿಕೆ ಈ ವಾರ ವರದಿ ಮಾಡಿದೆ. ಸಾವಪ್ಪಿದ ಹೆಚ್ಚಿನವರೆಲ್ಲ ಹೃದ್ರೋಗ ಮತ್ತು ದಮ್ಮಿನ ಕಾಯಿಲೆಯಿದ್ದವರಾಗಿದ್ದರು. ಯುರೋಪ್‌ನಲ್ಲಿ ಕಳೆದ ಬೇಸಿಗೆಯ ಸೆಕೆ ಹಿಂದಿನ ಎಲ್ಲ ದಾಖಲೆಗಳನ್ನೂ ಮೀರಿತ್ತು. ಗ್ರೀಸ್ ದೇಶದ ಕತೆ ನಮಗೆ ಗೊತ್ತೇ ಇದೆ. 2021ರಲ್ಲಿ ಅಲ್ಲಿನ ತಾಪಮಾನ 47 ಡಿಗ್ರಿ ಸೆಲ್ಸಿಯಸ್ ಮೀರಿದಾಗ ತಂತಾನೆ ಹೊತ್ತಿಕೊಂಡ ಕಾಳ್ಗಿಚ್ಚು ಅದೆಷ್ಟು ಭೀಕರವಾಗಿತ್ತೆಂದರೆ, 27 ದೇಶಗಳು ಬೆಂಕಿ ನಂದಿಸಲು ನೆರವಿಗೆ ಧಾವಿಸಿದವು. ನಂತರ ಬಂದ ಮಹಾಮಳೆಯಲ್ಲಿ ಸಾಗಿಬಂದ ಬೂದಿಪ್ರವಾಹವೂ ಸಾರ್ವಕಾಲಿಕ ದಾಖಲೆಯನ್ನೇ ನಿರ್ಮಿಸಿತ್ತು.

ಮಧ್ಯಸಮುದ್ರದ ದಕ್ಷಿಣ ತೀರದ ಈಜಿಪ್ಟಿನಲ್ಲೂ ಹವಾಮಾನ ಸಂಕಟ ಹೆಚ್ಚುತ್ತಿದೆ; ಅಷ್ಟೇ ಅಲ್ಲ, ಅಲ್ಲಿನ ಖ್ಯಾತ ಅಲೆಕ್ಸಾಂಡ್ರಿಯಾ ನಗರವೇ ಹಂತಹಂತವಾಗಿ ಭೂಗತವಾಗುತ್ತಿದೆ. ನೆಲ ಕುಸಿಯುತ್ತಿರುವುದು ಒಂದು ಕಾರಣವಾದರೆ, ಸಮುದ್ರದ ಮಟ್ಟ ಏರುತ್ತಿರುವುದು ಇನ್ನೊಂದು ಕಾರಣ. ನೆಲ ಕುಸಿಯಲು ಮಹತ್ವದ ಕಾರಣ ಏನೆಂದರೆ ಅಲ್ಲಿನ ಸಮುದ್ರಕ್ಕೆ ರಂಧ್ರ ಕೊರೆದು ನೈಸರ್ಗಿಕ ಅನಿಲವನ್ನು ಮೇಲಕ್ಕೆತ್ತಿ ಉರಿಸಲಾಗುತ್ತಿದೆ. ಹಾಗೆ ಫಾಸಿಲ್ ಇಂಧನಗಳನ್ನು ಉರಿಸುವುದರಿಂದಲೇ ಭೂತಾಪ ಹೆಚ್ಚಾಗಿ ಸಮುದ್ರ ಮಟ್ಟ ಮೆಲ್ಲಗೆ ಮೇಲೇರುತ್ತಿದೆ. ವಿಶ್ವಸಂಸ್ಥೆಯ ತಜ್ಞರ ಲೆಕ್ಕದ ಪ್ರಕಾರ, ಪೃಥ್ವಿಯ ಇತರೆಲ್ಲ ಸಾಗರಗಳಿಗಿಂತ ವೇಗವಾಗಿ ಮಧ್ಯ ಸಮುದ್ರದ ಮಟ್ಟ ಏರುತ್ತಿದೆ. ಇನ್ನು 17 ವರ್ಷಗಳಲ್ಲಿ ಅದು 50 ಸೆಂಟಿಮೀಟರ್ ಮೇಲಕ್ಕೆ ಏರಲಿದೆ. ಈಗಾಗಲೇ ಸಮುದ್ರ ಮೂರು ಕಿಲೊಮೀಟರ್ ಒಳಕ್ಕೆ ನುಗ್ಗಿದ್ದು ಐತಿಹಾಸಿಕ ರೊಸೆಟ್ಟಾ ದೀಪಸ್ತಂಭವನ್ನೂ ನುಂಗಿದೆ.

ಕಳೆದ ವಾರದ ವಿವಿಧ ದೇಶಗಳ ವಿದ್ಯಮಾನಗಳನ್ನು ಗಮನಿಸಿದರೆ ಇಡೀ ಭೂಮಿಯೇ ಮೈ ಪರಚಿಕೊಳ್ಳುತ್ತಿದೆಯೇನೊ ಎಂದು ಭಾಸವಾಗುತ್ತಿತ್ತು. ಅಮೆರಿಕದಲ್ಲಿ ಪ್ರತಿದಿನವೂ ಒಂದಲ್ಲ ಒಂದು ಕಡೆ ಒಂದೊಂದು ಬಗೆಯ ವಿಕೋಪಗಳು ಘಟಿಸುತ್ತಿವೆ. ನಮ್ಮ ಪಂಜಾಬ್ ರೈತರು ಭತ್ತದ ಕೂಳೆಗೆ ಬೆಂಕಿ ಕೊಟ್ಟಾಗ ದಿಲ್ಲಿಯ ಜನರು ಮುಖವಾಡ ತೊಡುವ ಹಾಗೆ, ಕೆನಡಾದ ಅಗ್ನಿಕಾಂಡದಿಂದಾಗಿ ನ್ಯೂಯಾರ್ಕ್ ನಗರ ಈಚೆಗೆ ಕಪ್ಪಿಟ್ಟಿತ್ತು. ಅಲ್ಲಿ ಒಂದೆಡೆ ಶಾಖಗೋಲ, ಇನ್ನೊಂದೆಡೆ ಅತಿಹಿಮಪಾತ, ವರ್ಮೊಂಟ್‌ನಲ್ಲಿ ಪ್ರವಾಹ, ಫೀನಿಕ್ಸ್‌ನಲ್ಲಿ ಅತಿಶಾಖ ನಿನ್ನೆ ಒಂದೇ ದಿನ ವರದಿಯಾಗಿದೆ. 'ಹವಾಮಾನ ವೈಪರೀತ್ಯ ಇನ್ನೇನು ನಿತ್ಯಸತ್ಯವಾಗುತ್ತಿದೆ' ಎಂದು ನ್ಯೂಯಾರ್ಕ್ ಗವರ್ನರ್ ಹೇಳಿದ್ದಾರೆ. ಅದು ಎಲ್ಲರ ಅನುಭವಕ್ಕೂ ಬರುತ್ತಿದೆ. ಆದರೆ ಕಾರ್ಬನ್ ಕಮ್ಮಿ ಮಾಡಬಲ್ಲ ಜೀವನಶೈಲಿಯ ಬಗ್ಗೆ ಯಾರೂ ಮಾತಾಡುತ್ತಿಲ್ಲ.

ಭೂತಾಪಮಾನ ಏರಿಕೆಯಿಂದ ಅರಣ್ಯಗಳ ಉಷ್ಣತೆ ಹೆಚ್ಚುತ್ತಿದೆ, ನೆಲದ ಶಾಖ ಹೆಚ್ಚುತ್ತಿದೆ, ಸಮುದ್ರಗಳು ಬಿಸಿಯಾಗುತ್ತಿವೆ. ಅವೆಲ್ಲ ನಮ್ಮ ಇಂದ್ರಿಯಗಳ ಅರಿವಿಗೆ ಬಾರದಿದ್ದರೂ ವಿಜ್ಞಾನಿಗಳ ವರದಿಯ ಮೂಲಕ ಗೊತ್ತಾಗುತ್ತಿದೆ. ಈಗಂತೂ ನೆಲದಾಳದ ಶಾಖವೂ ಹೆಚ್ಚುತ್ತಿದ್ದು, ವಿಶೇಷವಾಗಿ ನಗರಗಳ ತಳದಲ್ಲಿ ಶಾಖದ್ವೀಪಗಳು ಸೃಷ್ಟಿಯಾಗುತ್ತಿವೆ. ಅಲ್ಲಿನ ಸುರಂಗಗಳು, ವಿದ್ಯುತ್ ಕೇಬಲ್‌ಗಳು, ಅನಿಲ ಕೊಳವೆಗಳು, ಅಂತರ್ಜಲ ನಾಳಗಳು ಏನೆಲ್ಲ ಅಪಾಯಗಳು ಬರಲಿವೆ ಎಂಬುದರ ಕುರಿತು ಈ ವಾರ 'ನೇಚರ್' ವಿಜ್ಞಾನ ಪತ್ರಿಕೆಯಲ್ಲಿ ಸಂಶೋಧನಾ ಪ್ರಬಂಧ ಪ್ರಕಟವಾಗಿದೆ.

ಇಂದಿನ ತಾಜಾ ಸುದ್ದಿ ಏನೆಂದರೆ, ಇದೇ ಮೊದಲ ಬಾರಿಗೆ ಎಂಬಂತೆ ಅಮೆರಿಕದ ದೂತನಾಗಿ ಜಾನ್ ಕೆರ್ರಿ ನಾಡಿದ್ದು ಚೀನಾಕ್ಕೆ ಹೊರಡುತ್ತಿದ್ದಾರೆ. ಅತಿ ಹೆಚ್ಚು ಹೊಗೆ ಕಕ್ಕುವ ಎರಡು ಮಹಾನ್ ದೇಶಗಳು ಕಾರ್ಬನ್ ಡೈಆಕ್ಸೈಡ್ ಹೊರಸೂಸುವುದನ್ನು ಕಮ್ಮಿ ಮಾಡುವ ದಿಸೆಯಲ್ಲಿ ಜಂಟಿ ಮಾತುಕತೆ ನಡೆಸಲಿದ್ದಾರೆ. ಅವರಿಗೂ ಬಿಸಿ ತಟ್ಟುತ್ತಿದೆ. ಇತ್ತ ನಮ್ಮ ಸರ್ಕಾರಕ್ಕೂ ತುಸು ಬಿಸಿ ಮುಟ್ಟಿದೆ ಎಂಬುದು ಮೊನ್ನೆ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್‌ನಲ್ಲಿ ಕಾರ್ಬನ್ ಹೆಜ್ಜೆಗುರುತನ್ನು ಕಮ್ಮಿ ಮಾಡಲೆಂದು ತುಸು ಹಣವನ್ನು ಮೀಸಲಿಟ್ಟಿದ್ದೂ ಸುದ್ದಿಯಾಗಿದೆ.

ಅವೆಲ್ಲ ಒತ್ತಟ್ಟಿಗಿರಲಿ. ಮೆಡಿಟರೇನಿಯನ್ ಸಮುದ್ರದಿಂದ ನಮ್ಮತ್ತ ಬೀಸಿಬರುವ ಮಾರುತಕ್ಕೆ 'ವೆಸ್ಟರ್ನ್ ಡಿಸ್ಟರ್ಬನ್ಸ್' (ಪಶ್ಚಿಮದ ಕ್ಷೋಭೆ) ಎಂದು ಯಾರು ಹೆಸರಿಟ್ಟರೊ? ಅದು ಇನ್ನೊಂದು ಅರ್ಥದಲ್ಲೂ ಇಡೀ ಪೃಥ್ವಿಗೆ ಕ್ಷೋಭೆ ತರುತ್ತಿದೆ. ಫಾಸಿಲ್ ಇಂಧನಗಳ ಬಳಕೆ ಆರಂಭವಾಗಿದ್ದೇ ಯುರೋಪಿನಲ್ಲಿ. ಆ ಇಂಧನಗಳ ಬಲದಿಂದಲೇ ಜಗತ್ತನ್ನೆಲ್ಲ ಜಾಲಾಡಿ, ಎಲ್ಲಿ ಏನೇ ಸಂಪತ್ತಿದ್ದರೂ ಅದು ತಮ್ಮದಾಗಬೇಕೆಂಬ ಅಲ್ಲಿನವರ ಹಪಹಪಿಯೇ ಈಗ ಜಗದ್ವ್ಯಾಪಿಯಾಗಿದೆ. ಎಲ್ಲ ಸಮಾಜಗಳ ಆರ್ಥಿಕತೆಗೆ ಮತ್ತು ಈಗಿನ ಈ ಭೋಗಸಂಸ್ಕೃತಿಗೆ ಮೂಲ ಕಾರಣವೇನೆಂದರೆ ಪಶ್ಚಿಮದ ಆದರ್ಶಗಳೇ ಎಲ್ಲರ ಆದರ್ಶವೆನಿಸಿವೆ. ಹಾಸಿಗೆಯಿದ್ದಷ್ಟೇ ಕಾಲು ಚಾಚಬೇಕೆಂಬ ಮನಃಸ್ಥಿತಿ, ಬದಲೀ ಬದುಕಿನ ವಿಧಾನ, ಸಮಸಮಾಜ, ಸುಸ್ಥಿರ ಅಭಿವೃದ್ಧಿಯಂಥ ಗುರಿ ನಮ್ಮದಾಗಬೇಕೆಂದು ಎಚ್ಚರಿಕೆ ನೀಡಿದ ಬುದ್ಧ, ಬಸವ, ಗಾಂಧೀಜಿಯೆಲ್ಲ ಬರೀ ಬೀದಿ- ಬಡಾವಣೆಗಳ ಹೆಸರುಗಳಾಗಿದ್ದಾರೆ.

ಅಂದಹಾಗೆ, ಮೊನ್ನೆಯ ಅತಿವೃಷ್ಟಿಯಲ್ಲಿ, ಹಿಮಾಚಲ ಪ್ರದೇಶದ ಮೂಲಕ ಹರಿಯುವ ಬಿಯಾಸ್ (ವ್ಯಾಸ) ನದಿಯ ಮಹಾಪ್ರವಾಹದಲ್ಲಿ ಮೂರಂತಸ್ತಿನ ಕಟ್ಟಡವೂ ಕೊಚ್ಚಿ ಹೋಗಿ ಅತ್ಯಂತ ಹೆಚ್ಚಿನ ಕಷ್ಟನಷ್ಟಕ್ಕೀಡಾದ ಕುಲ್ಲು ನಗರದ ಆ ಬಡಾವಣೆಯ ಹೆಸರೇನು ಗೊತ್ತೆ? ಗಾಂಧೀನಗರ.



ಚುರುಮುರಿ



ಟೊಮೆಟೊ ಭಾಗ್ಯ

• ಕೆ.ವಿ.ರಾಜಲಕ್ಷ್ಮಿ

'ಅದೇನು ಮಳೆ ಉತ್ತರದಲ್ಲಿ? ಮನೆಮಾಳಿಗೆಯೆಲ್ಲ ನೋಡನೋಡ್ತಿರೋ ಹಾಗೆ ಕುಸೀತಿದೆ, ಗುಡ್ಡಗಳು ಕರಗಿಬೀಳ್ತಿವೆ, ರಸ್ತೆಯಲ್ಲಿ ಅಡಿಗಟ್ಟಲೆ ನೀರು, ಅದೇ ಇನ್ನೊಂದು ಕಡೆ ಮಳೆರಾಯನ ಕೃಪೆಗಾಗಿ ಪೂಜೆ-ಪುನಸ್ಕಾರ' ಅತ್ತೆಯ ಧ್ವನಿಯಲ್ಲಿ ವಿಷಾದವಿತ್ತು. 'ಪ್ರವಾಸಕ್ಕೆ ಹೋದವ್ರು ಪ್ರಯಾಸ ಪಡೋ ಹಾಗಾಯ್ತು' ನೆಲ ಒರೆಸುತ್ತಾ ನಿಂಗಿಯ ಮಾತು.

ನಮ್ಮ ಚರ್ಚೆಯಲ್ಲಿ ಅವಳೂ ಭಾಗವಹಿಸುವ ಮಟ್ಟಕ್ಕೆ ವಿಷಯ ತಿಳಿದುಕೊಂಡಿದ್ದಾಳೆ. 'ಸರಿಯಾಗಿ ಹೇಳಿದೆ ನಿಂಗಿ, ಭೇಷ್' ನನ್ನವಳ ಮೆಚ್ಚುಗೆ.

ದಿಢೀರನೆ ಏನೋ ನೆನಪಾದಂತಾಗಿ, 'ನಿಮ್ಮ ಮನೇಲಿ 'ಭಾಗ್ಯಲಕ್ಷ್ಮಿ' ಯಾರು? ನಿಮ್ಮತ್ತೆ ಅಲ್ವ?' ಕೆಣಕಿದೆ. 'ನಮ್ಮನೆಗೆ ನಾನೇ ಯಜಮಾನಿ. ಸಂಸಾರದ ಜವಾಬ್ದಾರಿ ನಮಗೂ ಗೊತ್ತಾಗ್ಬೇಕೂಂತ ನಮ್ಮ ಅತ್ತೆ ಬೇರೆ ಇಟ್ಟಿದ್ದಾರೆ. ಈಗ ಕೊಡ್ತಿರೋ ಹೆಚ್ಚುವರಿ ಅಕ್ಕಿ ದುಡ್ಡಿನಿಂದ ಎಷ್ಟೋ ಉಪಕಾರವಾಯ್ತು'. ನಾನು ತೆಪ್ಪಗಾದೆ.

'ಕಾಲೇಜಿಗೆ ದಬ್ಬ ಬೇಡ, ಮಧ್ಯಾಹ್ನಕ್ಕೆ ನಮಗೆಲ್ಲ ಟೊಮೆಟೊ ಬಾತ್ ಟ್ರೀಟ್ ಇದೆ' ಪುಟ್ಟಿ ರೆಡಿಯಾಗತೊಡಗಿದಳು.

'ಟೊಮೆಟೊ ಬೆಲೆ ಸೆಂಚುರಿ ದಾಟಿ ನೂರೈವತ್ತಕ್ಕೆ ದಾಪುಗಾಲು ಹಾಕ್ತಿದೆ! ಸದ್ಯಕ್ಕೆ ಬಳಸೋದು ದೂರದ ಮಾತು' ನನ್ನವಳ ಖಡಕ್ ಮಾತಿಗೆ ಕೊಂಚ ಕಳವಳಗೊಂಡೆ. ಆದರೆ ಅದೇ ವಾಸ್ತವ. ಅದರ ಜಾಗಕ್ಕೆ ಹುಣಿಸೇಹಣ್ಣು ಬಂದಾಗಿದೆ. ಆದರೂ ಟೊಮೆಟೊಗೆ ಸಾಟಿಯೇ?

'ಸರಿಯಾದ ಬೆಲೆ ಸಿಗದೆ ರಸ್ತೇಲಿ ಚೆಲ್ಲಿದ್ದೂ ಇದೇ ಕಣ್ಣಲ್ಲಿ ನೋಡಿದ್ದೀವಿ, ಈಗ ನೋಡಿದ್ರೆ ಈ ಪರಿ. ಅತಿವೃಷ್ಟಿ, ಅನಾವೃಷ್ಟಿ ಎರಡೂ ಬಾಧೆಯೇ' ಅತ್ತೆಯ ವಿಶ್ಲೇಷಣೆ.

ಅಷ್ಟರಲ್ಲೇ ಕಂಠಿ ಬಂದ, ಕೈಯಲ್ಲಿ ಹಣ್ಣಿನ ತುಂಡುಗಳಿದ್ದ ಕವರ್!

'ರಸ್ತೆ ಬದಿ, ಟೊಮೆಟೊನ ಕುಯ್ದು ಪೀಸ್ ಲೆಕ್ಕದಲ್ಲಿ ಮಾರ್ತಿದ್ರು, ಹತ್ತು ಪೀಸ್ ತೊಗೊಂಡು, ಮೇಲೆ ಕೊಸರು ಅಂತ ಎರಡು ವಸೂಲಿ ಮಾಡಿದೆ'.

'ನಮ್ಮ ಕಾಲದಲ್ಲಿ ತೆಂಗಿನ ಹೋಳುಗಳನ್ನು ಹೀಗೇ ಮಾರುತ್ತಿದ್ದರು' ಅತ್ತೆ ನೆನಪಿಸಿಕೊಂಡರು.

'ಇದರಲ್ಲೇ ನಿಮಗೂ' ಎಂದು ನಾಲ್ಕು ಹೋಳು ತೆಗೆದ. 'ಟೊಮೆಟೊ ಭಾಗ್ಯ' ನಾನೆಂದೆ. ನನ್ನವಳ ಮುಖ ಅರಳಿತು.

ಸಂಗತ

ಪಠ್ಯ ನಿಗದಿ: ರಾಜಕೀಯ ತಂತ್ರಗಾರಿಕೆ ಸಲ್ಲ

ಪಠ್ಯಗಳ ಆಯ್ಕೆ ನಡೆಯುವ ಸಂದರ್ಭದಲ್ಲಿ ಉಂಟಾಗುವ ಬೌದ್ಧಿಕ ತಿಕ್ಕಾಟಗಳ ಹಿಂದೆ ಸೈದ್ಧಾಂತಿಕ ಆಯಾಮಗಳಿದ್ದರೆ ಅದು ಅಪಾಯಕಾರಿ ಬೆಳವಣಿಗೆ

• ಡಾ. ಶಿವಲಿಂಗಸ್ವಾಮಿ ಎಚ್.ಕೆ.

ಸರ್ಕಾರವನ್ನು ಮುನ್ನಡೆಸುವ ಪಕ್ಷ ಬದಲಾದೊಡನೆ ಶಾಲಾ ಪಠ್ಯಗಳೂ ಬದಲಾಗಬೇಕು ಎಂಬ ಧೋರಣೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಸ್ವತಂತ್ರ ಭಾರತದಲ್ಲಿ ಶಿಕ್ಷಣವು ಸಂಪೂರ್ಣ ಪ್ರಜಾಪ್ರಭುತ್ವೀಕರಣಗೊಂಡಿದೆ ಎಂದು ಎಲ್ಲರೂ ಹೆಮ್ಮೆಯಿಂದ ಹೇಳುವ ಸಂದರ್ಭದಲ್ಲಿ, ಬರೀ ರಾಜಕೀಯ ಸಿದ್ಧಾಂತಗಳನ್ನು ಪ್ರಚುರಪಡಿಸುವ ಸಲುವಾಗಿ ಪಠ್ಯಗಳ ಆಯ್ಕೆ ನಡೆಯುವಂತಹ ಸ್ಥಿತಿ ತಲೆದೋರಿರುವುದು ದುರದೃಷ್ಟಕರ.

ಈ ಆತಂಕಕಾರಿ ಬೆಳವಣಿಗೆ ಕುರಿತು ಶಿಕ್ಷಣ ತಜ್ಞರು ತ್ವರಿತವಾಗಿ ಗಮನಹರಿಸಬೇಕಾಗಿದೆ. ಶಿಕ್ಷಣದ ಮೂಲ ಉದ್ದೇಶವು ರಾಜಕೀಯವನ್ನು ವಿಮರ್ಶಾತ್ಮಕವಾಗಿ ನೋಡುವುದೇ ವಿನಾ ರಾಜಕೀಯವನ್ನೇ ಶಿಕ್ಷಣದ ರೂಪದಲ್ಲಿ ತರುವುದಲ್ಲ ಎಂಬುದನ್ನು ಪ್ರತಿ ಶಿಕ್ಷಣ ತಜ್ಞ ಇಂದು ಅರ್ಥ ಮಾಡಿಕೊಳ್ಳಬೇಕಾಗಿದೆ.

ಪಠ್ಯಗಳ ಆಯ್ಕೆ ನಡೆಯುವ ಸಂದರ್ಭದಲ್ಲಿ ಬೌದ್ಧಿಕ ತಿಕ್ಕಾಟಗಳು ನಿರೀಕ್ಷಿತ ಮತ್ತು ಸರ್ವೇ ಸಾಮಾನ್ಯ. ಆದರೆ, ಇದರ ಹಿಂದೆ ಸೈದ್ಧಾಂತಿಕ ಆಯಾಮಗಳಿದ್ದರೆ ಅದು ಅಪಾಯಕಾರಿ ಬೆಳವಣಿಗೆ. ಪಠ್ಯಕ್ರಮ ನಿಗದಿಗೆ ನಮ್ಮ ರಾಜಕೀಯ ಸಿದ್ಧಾಂತಗಳು ಪ್ರಚೋದಕ ಶಕ್ತಿಗಳಾದರೆ, ಭಾರತದ ವಿಶೇಷವಾದ ಜಾತಿ ಮತ್ತು ಧರ್ಮದ ವೈವಿಧ್ಯಕ್ಕೆ ಸಮಾನ ಪ್ರಾತಿನಿಧ್ಯ ಸಿಗುವುದಿಲ್ಲ. ಬದಲಾಗಿ, ಸಿದ್ಧಾಂತಗಳನ್ನು ತುರುಕುವ ಮೂಲಕ ಮಕ್ಕಳಿಗೆ ಎಳೆ ವಯಸ್ಸಿನಲ್ಲಿಯೇ ಪ್ರತ್ಯೇಕೀಕರಣವನ್ನು ಕಲಿಸಿದಂತೆ ಆಗುತ್ತದೆ. ಉದಾರ ಶಿಕ್ಷಣವು ಮಕ್ಕಳನ್ನು ಸ್ವತಂತ್ರ ಚಿಂತಕರನ್ನಾಗಿ ರೂಪಿಸುತ್ತದೆ. ಆದರೆ ಇಂತಹ ಶಿಕ್ಷಣವನ್ನು ಬದಿಗೊತ್ತಿ ಸೈದ್ಧಾಂತಿಕ ಪೂರ್ವಗ್ರಹದ ಮೂಲಕ ಶಿಕ್ಷಣವನ್ನು ನೀಡುವ ಪ್ರಯತ್ನ ನಡೆದರೆ, ಮಕ್ಕಳಲ್ಲಿ ಚಿಂತನೆ ಅಥವಾ ಪ್ರಶ್ನೆಗಳಿಗೆ ದಾರಿಯಾಗುವುದಿಲ್ಲ. ಆಗ ಅವರು ಬರೀ ಹಿಂಬಾಲಕರಾಗಿ ರೂಪುಗೊಳ್ಳುತ್ತಾರೆ.

ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಪ್ರೋತ್ಸಾಹದಾಯಕ ಪರಿಸ್ಥಿತಿ ಸೃಷ್ಟಿಯಾಗಬೇಕೆಂದರೆ, ಎಲ್ಲ ಹಂತದ ಅಧ್ಯಯನ ಮಂಡಳಿಗಳೂ ಯಾವುದೇ ರಾಜಕೀಯ ಪ್ರಭಾವಕ್ಕೆ ಒಳಗಾಗದೆ ಸಂಪೂರ್ಣವಾಗಿ ಸ್ವಾಯತ್ತ ಅಂಗಗಳಾಗಿ ಕಾರ್ಯ ನಿರ್ವಹಿಸಬೇಕು. ರಾಜಕೀಯ ಉದ್ದೇಶಕ್ಕಾಗಿ ಸೈದ್ಧಾಂತಿಕವಾಗಿ ಏಕರೂಪದ ಸಮುದಾಯವನ್ನು ಸೃಷ್ಟಿಸುವ ಹುನ್ನಾರ ಇರಬಾರದು. ಹಾಗಾಗಿ, ಪಠ್ಯಕ್ರಮ ರಚನೆಯು ರಾಜಕೀಯ ಸಿದ್ಧಾಂತಗಳ ಮೂಲಕ ಆಗದೆ ಪ್ರಜಾಸತ್ತಾತ್ಮಕ ಧೋರಣೆಯ ಮೂಲಕ ಆಗಬೇಕಿದೆ. ಪ್ರತಿ ತರಗತಿಯಲ್ಲಿ ಜಾತಿ ಮತ್ತು ಧರ್ಮದ ವೈವಿಧ್ಯವನ್ನು ನಿರೀಕ್ಷಿಸಿಯೇ ಪಠ್ಯಕ್ರಮವನ್ನು ಸಿದ್ಧಪಡಿಸಬೇಕಿದೆ.

ತರಗತಿಗೆ ಪಠ್ಯವೊಂದು ಆಯ್ಕೆಯಾದರೆ ಆ ಪಠ್ಯದ ಧ್ಯೇಯೋದ್ದೇಶ ಎಲ್ಲ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯನ್ನು ಸಾಕಾರಗೊಳಿಸುವುದೇ ಆಗಿರಬೇಕು. ನಮ್ಮ ಮುಂದೆ ಇರುವ ವಿದ್ಯಾರ್ಥಿಗಳ ಮಾನಸಿಕ ಸಿದ್ಧತೆಯು ಅವರ ಸಾಂಸ್ಕೃತಿಕ ಹಿನ್ನೆಲೆಯನ್ನು ಅವಲಂಬಿಸಿರುತ್ತದೆ ಎಂಬುದು ಇಲ್ಲಿ ಬಹುಮುಖ್ಯವಾಗಿ ಗಮನಿಸಬೇಕಿರುವ ಅಂಶ. 'ನಾನೇಕೆ ಹಿಂದೂವಲ್ಲ' ಎಂಬ ಪುಸ್ತಕದಲ್ಲಿ ಕಂಚ ಐಲಯ್ಯ ಅವರು, ಪ್ರಾಥಮಿಕ ಹಂತದಲ್ಲಿಯೇ ಧಾರ್ಮಿಕ ಮತ್ತು ಸೈದ್ಧಾಂತಿಕ ಹಿನ್ನೆಲೆಯುಳ್ಳ ಪುಸ್ತಕಗಳನ್ನು ನಿಗದಿಪಡಿಸಿದರೆ, ಅವು ಮಕ್ಕಳನ್ನು ಜಾತಿಯ ಅನ್ವಯ ಪ್ರತ್ಯೇಕಿಸುತ್ತವೆ ಎನ್ನುತ್ತಾರೆ. ಸರ್ಕಾರಗಳ ಸೈದ್ಧಾಂತಿಕ ತಿಕ್ಕಾಟಗಳ ನಡುವೆ ನಿಗದಿಯಾಗುವ ಕೆಲವು ಪಠ್ಯಗಳು ಮಕ್ಕಳನ್ನು ಸರಿದಾರಿಯಲ್ಲಿ ಕೊಂಡೊಯ್ಯುತ್ತವೆ ಎಂದು ನಿಶ್ಚಯವಾಗಿ ಹೇಳಲಾಗದು.

ವಿದ್ಯಾರ್ಥಿಗಳು ನಿಗದಿತ ಪಠ್ಯವನ್ನು ಪರೀಕ್ಷೆಯ ದೃಷ್ಟಿಯಿಂದ ಓದಬೇಕೋ ಅಥವಾ ಜೀವನವನ್ನು ಉತ್ತಮಪಡಿಸಿಕೊಳ್ಳುವ ಸಲುವಾಗಿಯೋ ಎಂಬುದಕ್ಕೆ ಉತ್ತರ ಕಂಡುಕೊಂಡರೆ, ಅಧ್ಯಯನ ಮಂಡಳಿಗಳ ಪ್ರಯತ್ನ ಯಾವ ದಿಕ್ಕಿನಲ್ಲಿದೆ ಎಂಬುದನ್ನು ತಿಳಿಯಬಹುದು. ಎಲ್ಲಕ್ಕಿಂತ ಮುಖ್ಯವಾಗಿ, ಪಠ್ಯಗಳನ್ನು ನಿಗದಿಪಡಿಸುವಾಗ ನಮ್ಮ ಪ್ರಯತ್ನಗಳು ಸಾಂವಿಧಾನಿಕವಾಗಿ ಇರಬೇಕು. ಅಧ್ಯಯನ ಮಂಡಳಿಯಲ್ಲಿ ವಿವಿಧ ರೀತಿಯ ಪ್ರಾವೀಣ್ಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯವರು ಇರಬೇಕು ಹಾಗೂ ಅವರೆಲ್ಲರ ಅಭಿಪ್ರಾಯಗಳು ಪರಿಗಣನೆಗೆ ಬಂದರಷ್ಟೇ ಪ್ರಜಾಪ್ರಭುತ್ವಕ್ಕೆ ಬೆಲೆ ಕೊಟ್ಟಂತೆ. ಹಾಗೆಯೇ ಎಲ್ಲ ಸದಸ್ಯರೂ ರಾಜಕೀಯ ಸಿದ್ಧಾಂತಗಳನ್ನು ಬದಿಗಿರಿಸಿದರೆ ಮಾತ್ರ, ಕುವೆಂಪು ಅವರು ಪ್ರತಿಪಾದಿಸಿದಂತೆ 'ಮನುಜಮತ' ಸೃಷ್ಟಿಯಾಗುತ್ತದೆ ಮತ್ತು ಎಲ್ಲರ ಉದಯ ಅಂದರೆ 'ಸರ್ವೋದಯ' ಸಾಧ್ಯವಾಗುತ್ತದೆ.



ಯಾವುದೇ ಪಠ್ಯವನ್ನು ನಿಗದಿಪಡಿಸುವ ಮುನ್ನ ಅದರ ಧ್ಯೇಯೋದ್ದೇಶವನ್ನು ಯಾವುದಾದರೂ ಪ್ರಬಲ ಸೈದ್ಧಾಂತಿಕ ಚೌಕಟ್ಟು ನಿರ್ದೇಶಿಸುತ್ತಿದೆಯೇ ಎಂಬುದನ್ನು ಅಧ್ಯಯನ ಮಂಡಳಿಗಳ ತಜ್ಞರು ಬಹಳ ಸೂಕ್ಷ್ಮವಾಗಿ ಗಮನಿಸಬೇಕು. ಪಠ್ಯದ ಕರ್ತೃ ಯಾವುದಾದರೂ ರಾಜಕೀಯ ಸಿದ್ಧಾಂತಗಳನ್ನು ಗುಪ್ತವಾಗಿ ತನ್ನ ಪಠ್ಯದ ಮೂಲಕ ಹರಿಯಬಿಡುತ್ತಿದ್ದಾನೆಯೇ, ಪಠ್ಯದಲ್ಲಿರುವ ವಿಷಯದ ಮೂಲ ಅರ್ಥವು ಮರೆಮಾಚಲ್ಪಟ್ಟು ವಿದ್ಯಾರ್ಥಿಗಳು ದಾರಿ ತಪ್ಪಬಹುದೇ ಎಂಬಂಥ ಪ್ರಶ್ನೆಗಳು ಅವರಲ್ಲಿ ಇರಬೇಕು. ಅದನ್ನು ಆಧರಿಸಿ ಪಠ್ಯಗಳು ನಿಗದಿಯಾದರೆ, ಅವುಗಳನ್ನು ಜ್ಞಾನ ಮತ್ತು ಕೌಶಲದ ಆಧಾರದ ಮೇಲೆ ಗುರುತಿಸಬಹುದು. ಇಲ್ಲವಾದಲ್ಲಿ ಪಠ್ಯಗಳು ಬರೀ ಸೈದ್ಧಾಂತಿಕ ಮೌಲ್ಯಗಳನ್ನು ಗಟ್ಟಿಗೊಳಿಸುವ ರಾಜಕೀಯ ಕಾರ್ಯಭಾರಿಗಳಾಗುತ್ತವೆ.

ಶಿಕ್ಷಣವು ಸಮಾಜದ ಎಲ್ಲ ಸಾಂಸ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅಡಿಪಾಯ ಹಾಕಿಕೊಡಬೇಕು. ಶಿಕ್ಷಣ ಕ್ಷೇತ್ರದ ಅಸ್ಮಿತೆಯನ್ನು ನಿರ್ಧರಿಸುವುದು ಅದರ ಸ್ವಾಯತ್ತತೆ. ಆ ಸ್ವಾಯತ್ತತೆಯನ್ನು ರಾಜಕೀಯವು ಆಕ್ರಮಿಸಿಕೊಂಡುಬಿಟ್ಟರೆ ಶಿಕ್ಷಣ ಕ್ಷೇತ್ರವೇ ಒಂದು ಸಮಸ್ಯೆಯಾಗಿ ಕಾಡಬಹುದು.

ವಾಚಕರ ವಾಣಿ

ಪ್ರಕೃತಿಯ ಪಾಠಶಾಲೆಗೂ ಮಕ್ಕಳನ್ನು ಕರೆದೊಯ್ಯೋಣ

ಬೆಂಗಳೂರಿನ 8 ವರ್ಷದ ಬಾಲಕಿ ಆದ್ಯಾ ಬೆಣ್ಣೂರ್, ಆಫ್ರಿಕಾದ ಅತ್ಯಂತ ಎತ್ತರದ ಶಿಖರ ಕಿಲಿಮಂಜಾರೊವನ್ನು ಏರಿದ ಸುದ್ದಿಯನ್ನು (ಪ್ರ.ವಾ., ಜುಲೈ 8) ಓದಿ ರೋಮಾಂಚಿತಳಾಗಿ, ಮಗು ಆದ್ಯಾಳನ್ನು, ಅವಳ ತಂದೆ ಹರ್ಷ ಬೆಣ್ಣೂರ್ ಅವರನ್ನು ಅಭಿನಂದಿಸಬಯಸಿದೆ. ಪ್ರಕೃತಿಯ ಪಾಠಶಾಲೆಗೂ ನಮ್ಮ ಮಕ್ಕಳನ್ನು ಕರೆದೊಯ್ದು ಪಡೆಯುವ ಅನುಭವಗಳ ಮೂಲಕ ಅದರ ಭವ್ಯತೆಯನ್ನು, ಅದರ ದಿವ್ಯ ಸೌಂದರ್ಯ ದರ್ಶನವನ್ನು ಮಾಡಿಸುವಂಥ ಪಾಲಕರು ನಮ್ಮ ಸಮಾಜದಲ್ಲಿ ಇದ್ದರೆ ಅವರ ಬಗೆಗೆ ನನಗೆ ಅಪಾರ ಮೆಚ್ಚುಗೆ ಇದೆ. ಹೆಚ್ಚೆಚ್ಚು ಅಂಕಗಳನ್ನು ಪಡೆಯಬೇಕೆಂಬ ಆಸೆಯ ಹುಚ್ಚು ಕುದುರೆಯನ್ನೇರಿ, ಮುಚ್ಚಿದ ಕೋಣೆಗಳಲ್ಲಿ ಮಕ್ಕಳನ್ನು ಬಂಧಿಸಿಟ್ಟು, ಅವರು ಮುಂದೆ ಡಾಕ್ಟರೋ ಎಂಜಿನಿಯರೋ ಚಾರ್ಟರ್ಡ್ ಅಕೌಂಟೆಂಟೋ ಆಗಿ ರಾಶಿ ರಾಶಿ ದುಡ್ಡು ತರುವ ಉದ್ಯೋಗಿಗಳಾಗಬೇಕೆಂಬ ಆಶಯಕ್ಕಾಗಿ ತಮ್ಮ ತನು-ಮನ-ಧನ ಅರ್ಪಿಸುತ್ತ ಹೋರಾಡುವ ಮಾತಾಪಿತರಿಂದ ತುಂಬಿದೆ ನಮ್ಮ ಈ ಸಮಾಜ. ಇಂತಲ್ಲಿ ಪರ್ವತಾರೋಹಿಗಳು, ಈಜುಪಟುಗಳು, ಚಿತ್ರಕಲಾವಿದರು, ಸಾಹಿತ್ಯ, ಸಂಗೀತ, ಕಲಾನಿಪುಣರನ್ನು ರೂಪಿಸುವ ಪಾಲಕರು, ಗುರುಗಳನ್ನು ಕಾಣುವ ಕುತೂಹಲ ನನಗಿದೆ.

ಪುಸ್ತಕೀಯ ಜ್ಞಾನಕ್ಕಿಂತ ಹೊರ ಜಗತ್ತಿನಲ್ಲಿ ನಡೆದು ಪಡೆದ ಸ್ವಾನುಭವದ ಜ್ಞಾನ ಹೆಚ್ಚು ಆಪ್ತವಾಗುತ್ತದೆ ಮತ್ತು ಗಾಢವಾದ ಆನಂದವನ್ನು ನೀಡುತ್ತದೆ. ಈ ಸತ್ಯವನ್ನು ನಮ್ಮ ಪಾಲಕರು ಅರಿಯಬೇಕಾಗಿದೆ. ನಮ್ಮ ಶಿಕ್ಷಕರು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಭವಿಷ್ಯದ ದಿನಗಳಲ್ಲಿ ನಮ್ಮ ತರುಣ ಜನಾಂಗವು ಸಾಹಸಿಗಳಾಗಬೇಕಿದ್ದರೆ, ಆತ್ಮವಿಶ್ವಾಸ ಉಳ್ಳವರಾಗಬೇಕಿದ್ದರೆ, ಆತ್ಮನಿರ್ಭರರಾಗಬೇಕಿದ್ದರೆ ಪುಸ್ತಕೀಯ ಜ್ಞಾನದಾಚೆಗೆ ಇರುವ ನಿಸರ್ಗದಲ್ಲಿ ತುಂಬಿಕೊಂಡಿರುವ ಅಗಾಧ ಜ್ಞಾನ, ಸೌಂದರ್ಯ ಮತ್ತು ಆನಂದಾನುಭೂತಿಯತ್ತ ನಡೆಯುವ ಪ್ರಯತ್ನಗಳು ಆಗಲಿ.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ರಾಜಕೀಯ?!

ಬಲ್ಲವರು ಹೇಳುತ್ತಾರೆ
ರಾಜಕೀಯ ಎಂಬುದು
ಚದುರಂಗದಾಟ,
ಶರದ್ ಪವಾರ್ ನುಡಿಯುತ್ತಾರೆ
ಅದೊಂದು ಥರ ಕ್ರಿಕೆಟ್ ಕೂಟ,
ಅಲ್ಲಿಯೂ ಇಲ್ಲಿಯೂ ಎರಡರಲ್ಲೂ
ಉಂಟು ಬೌನ್ಸರ್, ಬೌಂಡರಿ, ಸಿಕ್ಸರ್
ಗೂಗ್ಲಿ, ಜಂಗ್ಲಿ ಹೂಟ.

ಕೆ.ಬಸವನಗೌಡ, ಹಗರಿಬೊಮ್ಮನಹಳ್ಳಿ

ನೀರಾಗೆ ಸಿಗಲಿ ಅವಕಾಶ

ಕೊಬ್ಬರಿಯ ಬೆಲೆ ಕುಸಿತದ ಕಾರಣದಿಂದ ಸರ್ಕಾರವು 'ನೀರಾ'ವನ್ನು ಉತ್ಪಾದಿಸಲು ಅವಕಾಶ ಕೊಟ್ಟು ರೈತರಿಗೆ ಸಹಕರಿಸಬೇಕು. ನೀರಾ ಉತ್ಪಾದಿಸಲು ಇರುವ ನಿಯಮಾವಳಿ ಬದಲಾಯಿಸಿ, ಉತ್ಪಾದನೆಯನ್ನು ಉತ್ತೇಜಿಸುವುದರ ಜೊತೆಗೆ ಶೀತಲೀಕರಣ, ಸಂಗ್ರಹ ವ್ಯವಸ್ಥೆಯನ್ನು ಕಲ್ಪಿಸಬೇಕು ಹಾಗೂ ನೀರಾಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಬೇಕು.

ಕರಿಯಪ್ಪ ಆರ್., ಕಲ್ಲಹಳ್ಳಿ, ತುಮಕೂರು

ದೃಶ್ಯಾವಳಿ ಅದೇ, ಪಾತ್ರ ಅದಲು ಬದಲು!

ರಾಜಕೀಯ ಪಕ್ಷಗಳಲ್ಲಿ ಒಂದು ಸಾಮ್ಯ ಇದೆ. ವಿರೋಧ ಪಕ್ಷದಲ್ಲಿ ಇದ್ದಾಗ ಯಾವುದೇ ಅಹಿತಕರ ಹಿಂಸಾತ್ಮಕ ಪ್ರಕರಣಗಳು ನಡೆದರೆ ತಕ್ಷಣ ಸಿಬಿಐ ತನಿಖೆಗೆ ಒತ್ತಾಯಿಸುತ್ತವೆ. ಆಡಳಿತ ಪಕ್ಷದಲ್ಲಿ ಇದ್ದಾಗ 'ನಮ್ಮ ಪೊಲೀಸರು ಸಮರ್ಥರಾಗಿದ್ದು, ಸಿಬಿಐ ತನಿಖೆಯ ಅವಶ್ಯಕತೆ ಇಲ್ಲ' ಎಂದು ಹೇಳುತ್ತವೆ. ಸದನದಲ್ಲಿ ಸಿಬಿಐ ತನಿಖೆಗಾಗಿ ಒತ್ತಾಯಿಸಲಾದ ಯಾವುದೇ ಚರ್ಚೆಯಲ್ಲಿ ಇದು ಎದ್ದು ಕಾಣುತ್ತದೆ.

ಜೈನ ಮುನಿಗಳ ಹತ್ಯೆ ಪ್ರಕರಣದಲ್ಲಿ ವಿರೋಧ ಪಕ್ಷಗಳು ಸಿಬಿಐ ತನಿಖೆಗೆ ಒತ್ತಾಯಿಸುತ್ತಿರುವುದು ಮತ್ತು ಸರ್ಕಾರ ಅದನ್ನು ನಿರಾಕರಿಸುತ್ತಾ, 'ನಮ್ಮ ಪೊಲೀಸರೇ ತನಿಖೆ ನಡೆಸುತ್ತಾರೆ' ಎಂದು ಹೇಳುತ್ತಿರುವುದು ಈ ಟ್ರೆಂಡ್‌ಗೆ ಇನ್ನೊಂದು ಉದಾಹರಣೆ. ಸಿಬಿಐ ತನಿಖೆ ಕೋರಿಕೆಯ ದಿಸೆಯಲ್ಲಿ ದೃಶ್ಯಾವಳಿ ಅದೇ ಇರುತ್ತದೆ, ಪಾತ್ರಗಳು ಮಾತ್ರ ಅದಲು ಬದಲು ಆಗುತ್ತವೆ.

ರಮಾನಂದ ಶರ್ಮಾ, ಬೆಂಗಳೂರು

ವಿಶೇಷ ಸ್ಥಾನಮಾನ ರದ್ದತಿ: ವಿಚಾರಣೆ ಸ್ವಾಗತಾರ್ಹ


ಸಂವಿಧಾನದ 370ನೇ ವಿಧಿ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಿರುವ ಕ್ರಮದ ಬಗ್ಗೆ ಸುಪ್ರೀಂ ಕೋರ್ಟ್ ಕೊನೆಗೂ ನಿರಂತರ ವಿಚಾರಣೆ ನಡೆಸಲು ತೀರ್ಮಾನಿಸಿರುವುದು ಒಕ್ಕೂಟ ವ್ಯವಸ್ಥೆಯನ್ನು ಗೌರವಿಸುವವರಿಗೆಲ್ಲ ಒಂದು ಆಶಾದಾಯಕ ಬೆಳವಣಿಗೆ. ಇದಕ್ಕೆ ತುಸು ಮುನ್ನ ಕೇಂದ್ರ ಗೃಹ ಸಚಿವಾಲಯ ಸಲ್ಲಿಸಿದ 2018- 23ರ ಅವಧಿಯ 'ಪ್ರಗತಿ' ಪ್ರಮಾಣಪತ್ರ ಕುರಿತು 'ಅದು ಮೊಕದ್ದಮೆಯ ಮೇಲೆ ಪರಿಣಾಮ ಬೀರದು, ಅದನ್ನು ಅವಲಂಬಿಸಲಾಗುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ನಿಲುವು ತಳೆದಿರುವುದೂ ಸೂಕ್ತವಾಗಿದೆ.

ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು 2019ರ ಆಗಸ್ಟ್‌ನಲ್ಲಿ ತೆಗೆದುಹಾಕಿದಾಗ ಅಲ್ಲಿ ಚುನಾಯಿತ ಸರ್ಕಾರ ಇರಲಿಲ್ಲ, 2018ರ ಡಿಸೆಂಬರ್‌ನಲ್ಲೇ ರಾಷ್ಟ್ರಪತಿ ಆಳ್ವಿಕೆ ಜಾರಿ ಮಾಡಲಾಗಿತ್ತು. ಒಂದು ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶ ಮಾಡಿದ್ದು ಗಾಯದ ಮೇಲೆ ಬರೆ ಎಳೆದಂತಾಯಿತು. ಲಡಾಕ್‌ಗೂ ವಿಶೇಷ ಅನುಕೂಲ ಆಗಲಿಲ್ಲ. ಇದಕ್ಕೆ ಈಗ ಹೇಳಿರುವ ಕಾರಣಗಳನ್ನು 'ನಂತರದ ಚಿಂತನೆ' ಎನ್ನಬಹುದಷ್ಟೆ. ಇದರ ಜತೆಗೆ ಪೋಸ್ಟ್ ಟ್ರೂತ್ ಪಾಲಿಟಿಕ್ಸ್ ಕೂಡ ಇದೆ. 'ನ್ಯಾಯದಾನದಲ್ಲಿ ತಡ ಆದರೆ ನ್ಯಾಯವನ್ನು ನಿರಾಕರಿಸಿದಂತೆ' ಎಂಬ ಮಾತಿದೆ. ಈ ವಿಷಯದಲ್ಲಿ ತಡವಂತೂ ಆಗಿಬಿಟ್ಟಿದೆ, ಪರಿಣಾಮ- ಅಲ್ಲಿ ರಾಜ್ಯ ಮಟ್ಟದ ಚುನಾವಣೆಗಳೇ ನಡೆದಿಲ್ಲ, ಗೃಹ ಸಚಿವರು ಹಾಗೂ ಲೆಫ್ಟಿನೆಂಟ್ ಗವರ್ನರ್‌ಗಳೇ ಕಾರುಬಾರು ನಡೆಸಿದ್ದಾರೆ. ಈಗ ಈ ವಿಚಾರಣೆ ಮುಗಿಯುವವರೆಗಾದರೂ ಬಿಜೆಪಿ ಮತ್ತು ಅದರ ನೇತೃತ್ವದ ಸರ್ಕಾರದಲ್ಲಿ ಇರುವವರು 'ವಿಧಿ 370, 35ಎ ರದ್ದು ಮಾಡಿ ದೇಶವನ್ನು ಒಂದುಗೂಡಿಸಿದೆವು' ಎಂದು ಎಲ್ಲೆಡೆ ಹೇಳಿಕೊಳ್ಳಬಾರದು (ನಡ್ಡಾ ಅವರು ಇದನ್ನು ಒಂದು ಸಾಧನೆ ಎಂದು ಹಲವೆಡೆ ಬಣ್ಣಿಸಿದ್ದಾರೆ). ಈಗ ವ್ಯಾಜ್ಯದಲ್ಲಿ ಹೊಸಬರು ಸೇರುವಂತಿಲ್ಲ. ಜಮ್ಮು ಕಾಶ್ಮೀರದ ಆಗಿನ ಸ್ಥಿತಿ ಹಾಗೂ ತಮ್ಮ ಅಜೆಂಡಾ ಹೇರಲು ಅನುಸರಿಸಿದ ತಂತ್ರ, ಕ್ರಮಗಳ ಬಗೆಗೆ ವಾಸ್ತವ ಮಾಹಿತಿ ಇರುವವರು ದಾವೆದಾರರಿಗೆ ಒದಗಿಸಬಹುದಾಗಿದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಟೊಮೆಟೊ ಬೆಲೆ ಏರಿಳಿತ



ಟೊಮೆಟೊ ಬೆಲೆಯಲ್ಲಿ ಆಗುವ ಏರಿಳಿತಕ್ಕೆ ಸಂಬಂಧಿಸಿದಂತೆ ಕೇಂದ್ರ ಕೃಷಿ ಸಚಿವಾಲಯವು ಪ್ರತೀ 3ಂಗಳು ಬೆಲೆ ವರದಿಯನ್ನು ಪ್ರಕಟಿಸುತ್ತಿತ್ತು. 2020ರ ಮೇವರೆಗಿನ ವರದಿ ಲಭ್ಯವಿದ್ದು, ದೇಶದಲ್ಲಿ ಟೊಮೆಟೊ ಸಗಟು ಸರಾಸರಿ ಬೆಲೆಯನ್ನು ಈ ವರದಿ ದಾಖಲಿಸಿದೆ. ಈ ವರದಿಗಳ ಪ್ರಕಾರ 2015ರಿಂದ 2020ರ ಮೇವರೆಗಿನ ಅತ್ಯಂತ ಕನಿಷ್ಠ ಬೆಲೆ ₹10 (ಸಗಟು ಬೆಲೆ). ಆದರೆ, ಈ ಅವಧಿಯಲ್ಲಿ ಕರ್ನಾಟಕದಲ್ಲಿ ಪ್ರತಿ ಕೆ.ಜಿ. ಟೊಮೆಟೊ ಬೆಲೆ 50 ಪೈಸೆಗಿಂತ ಕಡಿಮೆಯಾಗಿದ್ದ ಉದಾಹರಣೆಗಳು ಸಾಕಷ್ಟು ಇವೆ

ಪ್ರಜಾವಾಣಿ ವಾರ್ತೆ

ದೇಶದಲ್ಲಿ ಟೊಮೆಟೊ ಬೆಲೆ ವಿಪರೀತ ಎನ್ನುವಷ್ಟರ ಮಟ್ಟಿಗೆ ಏರಿಕೆಯಾಗಿದೆ. 'ಮೊದಲು, ಈರುಳ್ಳಿ ಕತ್ತರಿಸುವಾಗ ಕಣ್ಣೀರು ಬರುತ್ತಿತ್ತು. ಆದರೆ ಈಗ ಟೊಮೆಟೊ ಕತ್ತರಿಸುವಾಗಲೂ ಕಣ್ಣೀರು ಬರುತ್ತದೆ'. ಟೊಮೆಟೊ ಬೆಲೆ ಏರಿಕೆಯ ತೀವ್ರತೆಯನ್ನು ವ್ಯಕ್ತಪಡಿಸಲು ಹುಟ್ಟಿಕೊಂಡ ಮಾತಿದು. ಸಾಮಾಜಿಕ ಜಾಲತಾಣಗಳಲ್ಲಿ ಈ ರೀತಿಯ ಪೋಸ್ಟ್‌ಗಳು, ಹೇಳಿಕೆಗಳು ಭಾರಿ ಸಂಖ್ಯೆಯಲ್ಲಿ ಓಡಾಡುತ್ತಿವೆ. ಟೊಮೆಟೊ ಬೆಲೆ ಏರಿಕೆಯಾಗುತ್ತಿದೆ ಎಂದು ಜನರು ಹೌಹಾರುತ್ತಿರುವುದು ಒಂದೆಡೆ. ಹೊಲದಲ್ಲಿರುವ, ಸಾಗಾಟದಲ್ಲಿರುವ, ಮಾರುಕಟ್ಟೆಯಲ್ಲಿರುವ, ಅಂಗಡಿಗಳಲ್ಲಿ ಇರುವ ಟೊಮೆಟೊಗಳನ್ನು ಕಾಪಾಡಿಕೊಳ್ಳುವ ಹೊಸತಂತ್ರಗಳು ಮತ್ತೊಂದೆಡೆ. ಇದರ ಮಧ್ಯೆ ಟೊಮೆಟೊ ಬೆಲೆ ಏರಿಕೆಯಾಗುತ್ತಿರುವುದು ಏಕೆ ಎಂಬುದರತ್ತಲೂ ಗಮನ ಹರಿಸಬೇಕಿದೆ.

ದೇಶದ ಎಲ್ಲಾ ರಾಜ್ಯಗಳಲ್ಲಿ ಟೊಮೆಟೊ ಬೆಳೆಯುವುದಿಲ್ಲ. ದೇಶದ ಒಟ್ಟು ಟೊಮೆಟೊ ಇಳುವರಿಯ ಶೇ 60ರಷ್ಟು ಪಾಲು ದಕ್ಷಿಣದ ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳಲ್ಲಿ ಬೆಳೆಯಲಾಗುತ್ತದೆ. ಇನ್ನು ಮಧ್ಯಪ್ರದೇಶ, ಮಹಾರಾಷ್ಟ್ರ, ಛತ್ತೀಸಗಢ, ಪಶ್ಚಿಮ ಬಂಗಾಳ, ಹಿಮಾಚಲ ಪ್ರದೇಶಗಳಲ್ಲಿನ ಬೆಳೆಯನ್ನು ಲೆಕ್ಕಕ್ಕೆ ಸೇರಿಸಿಕೊಂಡರೆ ಅದು ಒಟ್ಟು ದೇಶದ ಶೇ 90ರಷ್ಟು ಟೊಮೆಟೊ ಇಳುವರಿಯಾಗುತ್ತದೆ. ದಕ್ಷಿಣದ ರಾಜ್ಯಗಳಲ್ಲಿ ಜೂನ್–ಸೆಪ್ಟೆಂಬರ್, ಅಕ್ಟೋಬರ್–ಫೆಬ್ರುವರಿ, ಜನವರಿ–ಜೂನ್ ಎಂದು ಮೂರು ಅವಧಿಗಳಲ್ಲಿ ಟೊಮೆಟೊ ಬೆಳೆಯಲಾಗುತ್ತದೆ. ಈ ಮೂರೂ ಅವಧಿಯಲ್ಲಿ ಮಳೆ ಮತ್ತು ಚಳಿಯಲ್ಲಿ ಬದಲಾವಣೆಯಾದರೆ, ಅದು ಟೊಮೆಟೊ ಬೆಳೆಯನ್ನು ಬಾಧಿಸುತ್ತದೆ.



ಟೊಮೆಟೊಗೆ ಈಗ ಭಾರಿ ಬೆಲೆ ಬಂದಿದೆಯಾದರೂ, ಹಲವು ಬಾರಿ ಬೆಲೆ ನೆಲಕಚ್ಚಿದೆ. ಒಂದು ಬುಟ್ಟಿ ಟೊಮೆಟೊಗೆ ₹5ಕ್ಕಿಂತಲೂ ಕಡಿಮೆ ಬೆಲೆ ದೊರೆತಆಗ ರೈತರು ತಾವು ಬೆಳೆದ ಟೊಮೆಟೊವನ್ನು ರಸ್ತೆಗೆ ಚೆಲ್ಲಿ ಹೋದ ನೂರಾರು ನಿದರ್ಶನಗಳಿಗೆ ಕರ್ನಾಟಕ ಸಾಕ್ಷಿಯಾಗಿದೆ

ದಕ್ಷಿಣದ ರಾಜ್ಯಗಳಲ್ಲಿ ಜನವರಿ–ಫೆಬ್ರುವರಿಯಲ್ಲಿ ಬಿತ್ತನೆ ಮಾಡಿದ ಟೊಮೆಟೊ ಜೂನ್–ಜುಲೈನಲ್ಲಿ ಮಾರುಕಟ್ಟೆಗೆ ಬರಬೇಕಿತ್ತು. ಆದರೆ, ದೀರ್ಘ ಚಳಿ, ಕಡುಬೇಸಿಗೆ ಮತ್ತು ಮಳೆ ವಿಳಂಬದ ಕಾರಣದಿಂದ ನಿರೀಕ್ಷಿತ ಇಳುವರಿ ಬಂದಿಲ್ಲ. ಕರ್ನಾಟಕ, ಆಂಧ್ರಪ್ರದೇಶದ ಟೊಮೆಟೊ ಹೊಲಗಳಲ್ಲಿ ಎಲೆಸುತ್ತು ರೋಗ ಕಾಣಿಸಿಕೊಂಡ ಕಾರಣ ಇಳುವರಿ ಕುಂಠಿತವಾಗಿದೆ. ಇದೇ ಅವಧಿಯಲ್ಲಿ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿ ಬಿತ್ತನೆ ಮಾಡಿದ್ದ ಟೊಮೆಟೊ ಬೆಳೆಗೂ ಬೇರೆ–ಬೇರೆ ಶಿಲೀಂಧ್ರ ರೋಗಗಳು ಕಾಣಿಸಿಕೊಂಡಿವೆ. ಮಧ್ಯ ಭಾರತ ಮತ್ತು ಉತ್ತರ ಭಾರತದ ರಾಜ್ಯಗಳಲ್ಲಿ ಅಕಾಲಿಕ ಮಳೆಯ ಕಾರಣದಿಂದ ಟೊಮೆಟೊ ಬೆಳೆ ನಾಶವಾಗಿದೆ. ಒಟ್ಟಾರೆಯಾಗಿ ಟೊಮೆಟೊ ಇಳುವರಿ ಕಡಿಮೆಯಾಗಿದ್ದರಿಂದ, ಬೆಲೆ ವಿಪರೀತ ಎನ್ನುವಷ್ಟರ ಮಟ್ಟಿಗೆ ಏರಿಕೆಯಾಗಿದೆ.

ಆಧಾರ: ಕೇಂದ್ರ ಕೃಷಿ ಸಚಿವಾಲಯ, ಪಿಟಿಐ

ವಯಸ್ಸು 61; ಕೈಯಲ್ಲಿ 12 ಸಿನಿಮಾ!



ಶಿವರಾಜ್‌ಕುಮಾರ್

'ಆನಂದ್' ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟ ಶಿವರಾಜ್‌ಕುಮಾರ್, ತಮ್ಮ 37 ವರ್ಷಗಳ ಸಿನಿಪಯಣದಲ್ಲಿ ಹ್ಯಾಟ್ರಿಕ್ ಹೀರೋ ದಿಂದ ಸೆಂಚುರಿ ಸ್ಟಾರ್ ಆದವರು. 125ನೇ ಸಿನಿಮಾ ಪೂರೈಸಿದ ಸಂಭ್ರಮದಲ್ಲಿರುವ ಅವರು ತಮ್ಮ 61ನೇ ಜನ್ಮದಿನವನ್ನು ಮೂರು ವರ್ಷಗಳ ಬಳಿಕ ಅಭಿಮಾನಿಗಳ ಸಮ್ಮುಖದಲ್ಲೇ ಆಚರಿಸಿಕೊಂಡರು. ಡಾ.ರಾಜ್‌ಕುಮಾರ್ ದಂಪತಿ ಸಮಾಧಿಗೆ ಪೂಜೆ ಸಲ್ಲಿಸಿ, 'ಘೋಸ್ಟ್' ಸಿನಿಮಾದ 'ಬಿಗ್ ಡ್ಯಾಡಿ' ಟೀಸರ್ ರಿವೀಲ್ ಮಾಡಿದ ಶಿವರಾಜ್‌ಕುಮಾರ್, ಇನ್ನೂ ಹತ್ತು ವರ್ಷ ಸಾಲು ಸಾಲು ಸಿನಿಮಾ ಮಾಡುವ ಕನಸು ಬಿಚ್ಚಿಟ್ಟರು. ಸೆಂಚುರಿ ಸ್ಟಾರ್, ತಮ್ಮ ಕೈಯಲ್ಲಿರೋ ಸಿನಿಮಾಗಳ ಸಂಖ್ಯೆ ಹೇಳಿದಾಗ ಒಂದು ಕ್ಷಣ ಅವರ ವಯಸ್ಸು ಎಲ್ಲರಿಗೂ ಮರೆತುಹೋಯ್ತು...

'ಸದ್ಯಕ್ಕೆ 10–12 ಸಿನಿಮಾ ಕೈಯಲ್ಲಿದೆ. ಪ್ರಸ್ತುತ 'ಘೋಸ್ಟ್' ಡಬ್ಬಿಂಗ್ ಬಾಕಿ ಇದೆ. ಯೋಗರಾಜ್ ಭಟ್ ಅವರ 'ಕರಟಕ ದಮನಕ' ಚಿತ್ರೀಕರಣ ನಡೆಯುತ್ತಿದೆ. ಗೀತಾ ಪಿಕ್ಚರ್ಸ್ ಲಾಂಛನದಡಿ ನಿರ್ಮಾಣವಾಗುತ್ತಿರುವ 'ಭೈರತಿ ರಣಗಲ್', ಅರ್ಜುನ್ ಜನ್ಯ ನಿರ್ದೇಶನದ '45' ಈ ವರ್ಷದ ಸರದಿಯಲ್ಲಿವೆ. ಮುಂದೆ ಯಾವ ಸಿನಿಮಾವನ್ನು ಕೈಗೆತ್ತಿಕೊಳ್ಳಬೇಕು ಎನ್ನುವುದು ಮುಂದಿನ ವರ್ಷ ನಿರ್ಧರಿಸಲಿದ್ದೇನೆ. 'ಟಗರು–2' ಬರುವ ಯೋಜನೆ ಮೊದಲೇ ಇತ್ತು. ಬಂದು ಮಾತುಕತೆ ನಡೆಸುತ್ತೇನೆ ಎಂದು ಸೂರಿ ಹೇಳಿದ್ದಾರೆ. ಎರಡನೇ ಭಾಗವನ್ನು ಸೂರಿ ಅವರಿಂದಷ್ಟೇ ಮಾಡಲು ಸಾಧ್ಯ. 2023 ಒಂದು ರೀತಿಯಲ್ಲಿ ನನಗೆ ಹೊಸ ಅನುಭವಗಳನ್ನು ನೀಡಿದೆ. ನಮ್ಮ ಕುಟುಂಬದ ಭಾಗದಂತೆ ಇರುವ ರಜನಿಕಾಂತ್ ಅವರ ಜೊತೆ 'ಜೈಲರ್' ಸಿನಿಮಾದಲ್ಲಿ 10 ನಿಮಿಷಗಳ ಒಂದು ಕ್ಯಾಮಿಯೊ ಮಾಡಿದ್ದೇನೆ. ಇದು ನನ್ನ ಮೊದಲ ತಮಿಳು ಸಿನಿಮಾ. ಆಗಸ್ಟ್ 10ಕ್ಕೆ ಇದು ರಿಲೀಸ್ ಆಗಲಿದೆ. ಜೊತೆಯಲ್ಲಿ ಧನುಷ್ ಅವರ ಜೊತೆ 'ಕ್ಯಾಪ್ಟನ್ ಮಿಲ್ಲರ್' ನನ್ನ ಮತ್ತೊಂದು ತಮಿಳು ಸಿನಿಮಾ. ತಮಿಳು ಸಿನಿಮಾದಲ್ಲಿ ನಟಿಸಿರುವುದು ಈ ವರ್ಷದ ವಿಶೇಷ ಎನ್ನಬಹುದು' ಎಂದರು ಶಿವರಾಜ್‌ಕುಮಾರ್.

ದಸರಾಗೆ 'ಘೋಸ್ಟ್': 'ಪಾಶ್ಚಿಮಾತ್ಯ ಶೈಲಿಯ ಈ ಸಿನಿಮಾದ ಚಿತ್ರಕಥೆಗೆ ಬಹಳ ವೇಗವಿದೆ. ಒಂದು ಸೈಕಾಲಾಜಿಕಲ್ ಥ್ರಿಲ್ಲರ್ ಇದಾಗಿದೆ. 'ಓಂ'ಗಿಂತಲೂ ಒಂದು ವಿಭಿನ್ನವಾದ ಪಾತ್ರವಿದು. ಇಲ್ಲಿಯೂ 'ಬಿಗ್ ಡ್ಯಾಡಿ' ಪಾತ್ರದ ಜೀವ ಸತ್ಯನಂತೆ ಇದೆ. ಚಿತ್ರೀಕರಣ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ನನ್ನ ಪಾತ್ರದ ಡಬ್ಬಿಂಗ್ ಇನ್ನು ಆಗಬೇಕಷ್ಟೇ. ಈ ವರ್ಷದ ನನ್ನ ಮೊದಲ ಸಿನಿಮಾ 'ಘೋಸ್ಟ್' ಆಗಿರಲಿದೆ. ದಸರಾಗೆ ಈ ಸಿನಿಮಾ ಬಿಡುಗಡೆ ಆಗಲಿದೆ. ಈ ಭಾಗದಲ್ಲಿ ನಾಯಕಿ ಇಲ್ಲ. 'ಘೋಸ್ಟ್' ಸಿನಿಮಾದ ಎರಡನೇ ಭಾಗದಲ್ಲಿ ನಾಯಕಿ ಇರಬಹುದು. ಘೋಸ್ಟ್ ಎರಡನೇ ಭಾಗದ ನಿರ್ಮಾಣಕ್ಕೆ ಒಂದು ಒಳ್ಳೆಯ ಹಿಡಿತ ಸಿಕ್ಕಿದೆ' ಎನ್ನುತ್ತಾರೆ ಸೆಂಚುರಿ ಸ್ಟಾರ್.




ಶ್ರೀನಿ

'ನಾನು ಜಾಗವನ್ನು ಇಷ್ಟಪಡುವವನೇ ಅಲ್ಲ, ಸಿನಿಮಾಗಳನ್ನು ಇಷ್ಟಪಡುವವನು. ಯಾವುದೇ ಸಮಸ್ಯೆ ಬಂದರೂ ಅದನ್ನು ಬಗೆಹರಿಸಲು ನಾವಿದ್ದೇವೆ. ನಾನೊಬ್ಬ ಹಿರಿಯ ನಟನಾಗಿ ಅದರಲ್ಲಿ ಭಾಗಿಯಾಗುತ್ತೇನೆ. ಒಂದು ವಾರದೊಳಗೆ ಒಳ್ಳೆಯ ಪರಿಹಾರ ಸೂಚಿಸಲಿದ್ದೇವೆ' ಎಂದು ಚಿತ್ರರಂಗದ ಸಮಸ್ಯೆ, ಎದ್ದಿರುವ ವಿವಾದಗಳ ಕುರಿತು ಶಿವರಾಜ್‌ಕುಮಾರ್ ಪ್ರತಿಕ್ರಿಯೆ ನೀಡಿದರು.

ನೈಜ ಘಟನೆ: 'ತಮಿಳುನಾಡಿನಲ್ಲಿ ನಡೆದ ಒಂದು ನೈಜ ಘಟನೆಯನ್ನು ಆಧಾರವಾಗಿಟ್ಟುಕೊಂಡು ಈ ಕಥೆ ಹೆಣೆದಿದ್ದೇನೆ. ಘೋಸ್ಟ್ ಚಿತ್ರದಲ್ಲಿ ಶಿವರಾಜ್‌ಕುಮಾರ್ ಅವರಿಗೆ ಮೂರ್ನಾಲ್ಕು ಶೇಡ್‌ಗಳಿವೆ. ಅವುಗಳಲ್ಲಿ ಒಂದು ಶೇಡ್ ಈ 'ಬಿಗ್ ಡ್ಯಾಡಿ'. ಮಲ್ಟಿವರ್ಸ್ ಕಾನ್ಸೆಪ್ಟ್ ಈ ಸಿನಿಮಾದಲ್ಲಿದೆ. ಘೋಸ್ಟ್‌ನಲ್ಲಿ 'ಬೀರ್‌ಬಲ್' ಎನ್ನುವ ಪಾತ್ರ ಬರಲಿದೆ. ಅದಲ್ಲದೆ ಇನ್ನೂ ಒಂದು ಹೊಸ ಪಾತ್ರ ಹುಟ್ಟಿಕೊಳ್ಳಲಿದೆ, ಅದು ಇನ್ನೊಂದು ಸಿನಿಮಾದಲ್ಲಿ ಬರಲಿದೆ. ಹೀಗೆ ಹಲವು ಪಾತ್ರಗಳನ್ನು ಇಂಟರ್‌ಲಿಂಕ್ ಮಾಡಲಿದ್ದೇವೆ. ಸಿನಿಮಾ ಕನ್ನಡ, ತಮಿಳು ಹಾಗೂ ತೆಲುಗಿನಲ್ಲಿ ರಿಲೀಸ್ ಆಗಲಿದೆ' ಎಂದರು ನಿರ್ದೇಶಕ ಶ್ರೀನಿ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಬಾಹ್ಯಾಕಾಶದಲ್ಲಿ ಟೊಮೆಟೊ ಬೀಜ ಸಂಸ್ಕರಣೆಗೆ ನಾಲ್ಕು ದಶಕ



• ಇ.ಎಸ್. ಸುಧೀಂದ್ರ ಪ್ರಸಾದ್

ಬೆಂಗಳೂರು: ಬೆಲೆ ಕುಸಿದಾಗ ರಸ್ತೆಗೆ ಬೀಳುವ ಹಾಗೂ ಬೆಲೆ ಏರಿದಾಗ ಬಂದೂಕಿನ ಭದ್ರತೆ ಪಡೆಯುವ ಟೊಮೆಟೊ ಸದ್ಯ ಚರ್ಚೆಯಲ್ಲಿರುವ ತರಕಾರಿ.

ಟೊಮೆಟೊ ಬೀಜವನ್ನು ಬಾಹ್ಯಾಕಾಶದಲ್ಲಿಟ್ಟು ಆರು ವರ್ಷಗಳ ನಂತರ ಭೂಮಿ ಮೇಲೆ ಬೆಳೆಯುವ ನಾಸಾದ ಪ್ರಯೋಗಕ್ಕೆ ಈಗ ನಾಲ್ಕು ದಶಕದ ಸಂಭ್ರಮ.

ನೆಲದ ಮೇಲೆ ಬಲು ಪ್ರಸಿದ್ಧಿ ಪಡೆದ ಟೊಮೆಟೊವನ್ನು ಬಾಹ್ಯಾಕಾಶದಲ್ಲಿ ದೀರ್ಘಕಾಲದವರೆಗೆ ಸಂಸ್ಕರಿಸಿ ಇಡುವ ಪ್ರಯತ್ನವನ್ನು ನಾಸಾ 1984ರಲ್ಲಿ ನಡೆಸಿತ್ತು. ಸುಮಾರು 1.25 ಕೋಟಿ ಬೀಜವನ್ನು ವಿಶೇಷ ಉಪಗ್ರಹದಲ್ಲಿಟ್ಟು ಬಾಹ್ಯಾಕಾಶಕ್ಕೆ ಕಳುಹಿಸಿತ್ತು.

ನಿರಂತರವಾಗಿ ಆರು ವರ್ಷಗಳ ಕಾಲ ಟೊಮೆಟೊ ಬೀಜ ಹೊತ್ತ ಈ ಉಪಗ್ರಹವು ಭೂಮಿಯನ್ನು ಸುತ್ತಿತು. ಆರು ವರ್ಷಗಳ ನಂತರ ಕೊಲಂಬಿಯಾ ಬಾಹ್ಯಾಕಾಶ ನೌಕೆಯ ಮೂಲಕ ತೆರಳಿದ ವಿಜ್ಞಾನಿಗಳು, ಈ ಉಪಗ್ರಹವನ್ನು ಮರಳಿ ಭೂಮಿಗೆ ತಂದಿದ್ದರು. ಬಾಹ್ಯಾಕಾಶದಲ್ಲಿದ್ದ ಈ ಬೀಜದಿಂದ ಸಸಿ ಬೆಳೆಯಲು ಪ್ರಯೋಗದ ಭಾಗವಾಗಿ ವಿದ್ಯಾರ್ಥಿಗಳಿಗೆ ನಾಸಾ ನೀಡಿತ್ತು.

ಆಶ್ಚರ್ಯವೆಂದರೆ ಭೂಮಿಯಲ್ಲಿ ಬೀಜೋತ್ಪಾದನೆ ಮಾಡಿದ ಟೊಮೆಟೊಗಿಂತ, ಬಾಹ್ಯಾಕಾಶದಲ್ಲಿದ್ದ ಬೀಜಗಳಿಂದ ಬೆಳೆದ ಟೊಮೆಟೊಗಳು ಹೆಚ್ಚು ರುಚಿಕರವಾಗಿ, ರಸಭರಿತವಾಗಿ ಹಾಗೂ ಸಿಹಿಯಾಗಿದ್ದವು ಎಂದು ವಿದ್ಯಾರ್ಥಿಗಳು ತಮ್ಮ ವರದಿಯನ್ನು ನಾಸಾಗೆ ನೀಡಿದರು. ಇದನ್ನು ಆಧರಿಸಿದ ನಾಸಾ, ಯಾವುದೇ ಸಸ್ಯದ ಬೀಜಗಳನ್ನು ಬಾಹ್ಯಾಕಾಶದಲ್ಲಿ ದೀರ್ಘಕಾಲದವರೆಗೆ ಇಟ್ಟರೂ, ಅದರ ಫಲವಂತಿಕೆಯಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ ಎಂದು ನಾಸಾ ತನ್ನ ವರದಿಯಲ್ಲಿ ಹೇಳಿದೆ.

ಹೀಗೆ ವರದಿ ಸಲ್ಲಿಸಿದ ಮಕ್ಕಳಲ್ಲಿ ಅಮೆರಿಕಾದ ಒಂಟಾರಿಯೊದ 2ನೇ ತರಗತಿಯ ವಿದ್ಯಾರ್ಥಿ ಮ್ಯಾಟ್ ಬರೆದ ಪತ್ರ ಹೀಗಿತ್ತು. 'ಪ್ರೀತಿಯ ನಾಸಾ. ನನ್ನ ಹೆಸರು ಮ್ಯಾಟ್. ನಾನು 2ನೇ ತರಗತಿಯಲ್ಲಿ ಓದುತ್ತಿದ್ದೇನೆ. ಗಿಡಗಳನ್ನು ಬೆಳೆಸುವುದನ್ನು ಹೆಚ್ಚಾಗಿ ಸಂಭ್ರಮಿಸುತ್ತೇನೆ. ಇದು ನನಗೆ ಲಭಿಸಿದ ಫಲಿತಾಂಶ. ಭೂಮಿಯಲ್ಲಿದ್ದ ಬೀಜವು ಚೆನ್ನಾಗಿ ಬೆಳೆಯಲಿಲ್ಲ. ಬಾಹ್ಯಾಕಾಶದಲ್ಲಿದ್ದ ಬೀಜ ಚೆನ್ನಾಗಿ ಬೆಳೆಯಿತು' ಎಂದಿತ್ತು.

ಒಂದಲ್ಲಾ ಒಂದು ತಿನಿಸುಗಳ ಮೂಲಕ ನಿತ್ಯ ಹೊಟ್ಟೆ ಸೇರುವ ಟೊಮೆಟೊ ಈಗ ಬಲು ದುಬಾರಿ. ಇಷ್ಟೊಂದು ಸುದ್ದಿಯಲ್ಲಿರುವ ಟೊಮೆಟೊ ದಕ್ಷಿಣ ಅಮೆರಿಕದ ಪೆರು ದೇಶದಿಂದ ಜಗತ್ತಿಗೆ ಪರಿಚಯಗೊಂಡು ಅತ್ಯಂತ ಜನಪ್ರಿಯ ತರಕಾರಿ ಎನಿಸಿಕೊಂಡಿದೆ. ತಿಳಿಸಾರಿನಿಂದ ಹಿಡಿದು ಪಿಜ್ಜಾವರೆಗೂ ಟೊಮೆಟೊ ಹಲವು ರೂಪದಲ್ಲಿ ಬಳಕೆಯಾಗುತ್ತಿದೆ.

ಕೆಲವೆಡೆ ತಾಜಾ ತರಕಾರಿಯಾಗಿ, ಇನ್ನೂ ಕೆಲವೆಡೆ ಕೆಚಪ್ ಆಗಿ, ಮತ್ತೂ ಕೆಲವೆಡೆ ಜ್ಯಾಮ್ ರೂಪದಲ್ಲೂ ಟೊಮೆಟೊ ನಿತ್ಯ ಬಳಕೆಯಲ್ಲಿದೆ. ಟೊಮೆಟೊ ಭಾರತಕ್ಕೆ ಬಂದ ಬಗೆಯನ್ನು ಪ್ರೊ. ಬಿ.ಜಿ.ಎಲ್.ಸ್ವಾಮಿ ಅವರು 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕಾ' ಕೃತಿಯಲ್ಲಿ ಹಲವು ಸ್ವಾರಸ್ಯಕರ ಸಂಗತಿಯನ್ನು ದಾಖಲಿಸಿದ್ದಾರೆ.

ಕಾಡಿನಲ್ಲಿ ಪುಟ್ಟ ಹಣ್ಣುಗಳ ರೀತಿಯಲ್ಲಿ ಪತ್ತೆಯಾದ ಟೊಮೆಟೊ ತರಕಾರಿಯೂ ಹೌದು, ಹಣ್ಣೂ ಹೌದು. ಸ್ಪ್ಯಾನಿಷ್ ಭಾಷೆಯಲ್ಲಿ ಕರೆಯಲಾಗುತ್ತಿದ್ದ 'ತೊಮ್ಯಾಟೆ' ಎಂಬ ಪದವು ಈಗ ಟೊಮೆಟೊ ಆಗಿದೆ. ತೊಮಟ್ಸ್ ಎಂದರೆ 'ಉಬ್ಬಿಕೊಂಡು ರಸ ಉಕ್ಕುವ' ಎಂಬ ಅರ್ಥವಾಗಿದ್ದು, ಇದು ಟೊಮೆಟೊದ ನಿಜ ಸ್ವರೂಪವನ್ನು ವಿವರಿಸುತ್ತದೆ.

ಮೆಣಸಿನಕಾಯಿ, ಬದನೆಕಾಯಿ ಕುಟುಂಬಕ್ಕೆ ಸೇರಿದ ಸೊಲನೇಸಿ ಸಸ್ಯ ಪ್ರಬೇಧಕ್ಕೆ ಟೊಮೆಟೊ ಸೇರಿದೆ. ಕಾಡಿನಲ್ಲಿ ಪುಟ್ಟ ಹಣ್ಣುಗಳಾಗಿ ಪರಿಚಯಗೊಂಡ ಟೊಮೆಟೊ ಈಗ ಆಧುನಿಕ ಸ್ವರೂಪ ಪಡೆದಿದೆ. ಅಲೆಕ್ಸಾಂಡರ್ ಲಿವಿಂಗ್‌ಸ್ಟನ್ ಎಂಬುವವರು ತಮ್ಮ ಬಾಲ್ಯದಲ್ಲಿ ತಾಯಿಯ ಎಚ್ಚರಿಕೆಯ ನಡುವೆಯೂ ಕುತೂಹಲಕ್ಕೆ ಈ ಟೊಮೆಟೊ ಹಣ್ಣಿಗೆ ಬಾಯಿ ಹಾಕಿದ್ದರು. ಮುಂದೆ ಅದೇ ತರಕಾರಿಗೆ ಆಧುನಿಕ ಸ್ವರೂಪ ನೀಡುವ ಸಸ್ಯ ವಿಜ್ಞಾನಿಯಾದರು. ಇದರ ಆಧಾರದಲ್ಲಿ 1850ರಲ್ಲಿ 'ಲಿವಿಂಗ್‌ಸ್ಟನ್' ಎಂಬ ಸಸ್ಯ ತಳಿ ಕಂಪನಿಯನ್ನೂ ಆರಂಭಿಸಿದರು.

ಆಧಾರ: ನಾಸಾ, ನ್ಯಾಷನಲ್ ಜಿಯಾಗ್ರಾಫಿಕ್

ಮತ್ತಷ್ಟು ಸ್ವಾರಸ್ಯಕರ ಸಂಗತಿಗಳು

- ಕೆಂಪು ಬಣ್ಣದಲ್ಲಿ ಇರುವುದು ಮಾತ್ರ ಟೊಮೆಟೊ ಅಲ್ಲ. ಬದಲಿಗೆ ಹಳದಿ, ಗುಲಾಬಿ, ನೇರಳೆ, ಕಪ್ಪು ಹಾಗೂ ಬಿಳಿ ಬಣ್ಣಗಳ ಟೊಮೆಟೊಗಳು ಇವೆ.
- ಯುರೋಪ್‌ನಲ್ಲಿ ಮೊದಲ ಬಾರಿಗೆ ಬೆಳೆದ ಟೊಮೆಟೊ ಹಳದಿ ಬಣ್ಣದ್ದಾಗಿತ್ತು. ಹೀಗಾಗಿ ಅಲ್ಲಿ ಇದನ್ನು ಆರಂಭದಲ್ಲಿ 'ಪೊಮೊ ಡಿ'ಒರೊ' (ಚಿನ್ನದ ಸೇಬು) ಎಂದು ಕರೆಯಲಾಗಿತ್ತು.
- ಜಗತ್ತಿನಾದ್ಯಂತ ಟೊಮೆಟೊದ ಸುಮಾರು 10 ಸಾವಿರ ತಳಿಗಳಿವೆ ಎಂದು ಸಸ್ಯ ವಿಜ್ಞಾನಿಗಳು ಹೇಳುತ್ತಾರೆ.
- ಅಮೆರಿಕಾದ ಫ್ಲೋರಿಡಾದಲ್ಲಿರುವ ವಾಲ್ಟ್ ಡಿಸ್ನಿ ರೆಸಾರ್ಟ್‌ನಲ್ಲಿ ಈವರೆಗೂ ಪತ್ತೆಯಾದ ಟೊಮೆಟೊ ಗಿಡಗಳಲ್ಲಿ ಅತ್ಯಂತ ದೊಡ್ಡದು. ಈ ಗಿಡ 56.73 ಚದರ ಮೀಟರ್‌ನಷ್ಟು ವ್ಯಾಪ್ತಿ ಹೊಂದಿದೆ.
- ಹಾಗೆಯೇ ಜಗತ್ತಿನ ಅತಿ ದೊಡ್ಡ ಟೊಮೆಟೊ 1986ರಲ್ಲಿ ಅಮೆರಿಕಾದ ಒಕ್ಲಹೊಮಾದಲ್ಲಿ ಪತ್ತೆಯಾಗಿತ್ತು. ಒಂದು ಟೊಮೆಟೊ 3.5 ಕೆ.ಜಿ. ತೂಗುತ್ತಿತ್ತು.
- ಸ್ಪೇನ್‌ನಲ್ಲಿ ನಡೆಯುವ ಲಾ ಟೊಮಾಟಿನಾ ಎಂಬ ವಾರ್ಷಿಕ ಹಬ್ಬದಲ್ಲಿ ಸುಮಾರು 1.5ಲಕ್ಷ ಟೊಮೆಟೊವನ್ನು ಹೋಳಿ ಹಬ್ಬದ ಬಣ್ಣದ ರೀತಿಯಲ್ಲಿ ಜನರು ಪರಸ್ಪರ ಎರಚಿಕೊಂಡು ಸಂಭ್ರಮಿಸುತ್ತಾರೆ. ಈ ವರ್ಷ ಆಗಸ್ಟ್ 30ರಂದು ಈ ಹಬ್ಬಕ್ಕೆ ದಿನಾಂಕ ನಿಗದಿಯಾಗಿದೆ.
- ' ಝಿಂದಗಿ ನಾ ಮಿಲೇಗಿ ದೊಬಾರಾ' ಹಿಂದಿ ಚಿತ್ರದಿಂದ ಪ್ರೇರಣೆಗೊಂಡು ಬೆಂಗಳೂರು ಹಾಗೂ ಮೈಸೂರಿನಲ್ಲಿ ಆಯೋಜನೆಗೊಂಡಿದ್ದ ಟೊಮೆಟೊ ಎರಚುವ ಮೋಜಿನಾಟ (ಲಾ ಟೊಮಾಟಿನಾ)ಕ್ಕೆ ಕೋಲಾರದ ಟೊಮೆಟೊ ಬೆಳಗಾರರು, ಪರಿಸರವಾದಿಗಳು ವ್ಯಾಪಕ ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಅದನ್ನು ರದ್ದುಪಡಿಸಲಾಗಿತ್ತು.
- ಅಮೆರಿಕಾದ ಒಹಿಯೊದಲ್ಲಿ ಟೊಮೆಟೊ ಪೇಯವನ್ನು ಆ ರಾಜ್ಯದ ಅಧಿಕೃತ ಪೇಯವಾಗಿ ಘೋಷಿಸಲಾಗಿದೆ

ಬೆಳೆಯುತ್ತಿದೆ ಟೊಮೆಟೊ ಉತ್ಪನ್ನಗಳ ಉದ್ಯಮ

ಭಾರತದಲ್ಲಿ ಈರುಳ್ಳಿ, ಬೆಳ್ಳುಳ್ಳಿ ಇಲ್ಲದ ಊಟವನ್ನು ನಿರೀಕ್ಷಿಸಬಹುದು. ಆದರೆ ಟೊಮೆಟೊ ಇಲ್ಲದ ಊಟ ಇಲ್ಲದಿರಲು ಸಾಧ್ಯವಿಲ್ಲ. ಅಂದರೆ ವಾರ್ಷಿಕ ಸುಮಾರು 20ಸಾವಿರ ಟನ್ ಟೊಮೆಟೊ ದೇಶದಲ್ಲಿ ಬೆಳೆಯಲಾಗುತ್ತಿದೆ. ಆದರೆ 2028ರ ಹೊತ್ತಿಗೆ ಸಂಸ್ಕರಿಸಿದ ಟೊಮೆಟೊ ಉದ್ಯಮ ದೊಡ್ಡಮಟ್ಟದಲ್ಲಿ ಬೆಳೆಯುವ ಸಾಧ್ಯತೆ ಇದೆ ಎಂದು ಐಎಂಎಆರ್‌ಸಿ ಸಮೂಹ ವರದಿ ಹೇಳಿದೆ. 2028ರ ಹೊತ್ತಿಗೆ ಈ ಉದ್ಯಮದ ಗಾತ್ರ ಶೇ 6.06ರ ವೃದ್ಧಿದರದಲ್ಲಿ ₹15,848 ಕೋಟಿಗೆ ಬೆಳೆಯಲಿದೆ ಎಂದು ಅಂದಾಜಿಸಲಾಗಿದೆ.

ಇಡೀ ಜಗತ್ತಿನಲ್ಲಿ ಚೀನಾದಲ್ಲಿ ಅತಿ ಹೆಚ್ಚು ಟೊಮೆಟೊ ಬೆಳೆಯಲಾಗುತ್ತಿದೆ. ಇದು ಜಾಗತಿಕ ಮಟ್ಟದ ಶೇ 34.75ರಷ್ಟಾಗಿದೆ. ಭಾರತದ ಪಾಲು ಶೇ 10. ಜಗತ್ತಿನಲ್ಲೇ ಎರಡನೇ ಅತಿ ಹೆಚ್ಚು ಟೊಮೆಟೊ ಉತ್ಪಾದನೆ ಹೊಂದಿರುವ ಭಾರತದಲ್ಲಿ ಶೇ 1.45ರಂತೆ ಪ್ರತಿ ವರ್ಷ ಉತ್ಪಾದನೆ ಹೆಚ್ಚುತ್ತಿದೆ. ನಂತರದ ಸ್ಥಾನಗಳಲ್ಲಿ ಟರ್ಕಿ ಹಾಗೂ ಅಮೆರಿಕಾ ಇವೆ. ಹೀಗಿದ್ದರೂ ರಫ್ತು ಕ್ಷೇತ್ರದಲ್ಲಿ ಮೆಕ್ಸಿಕೊ ರಾಷ್ಟ್ರ ಶೇ 26ರಷ್ಟು ಪಾಲುದಾರಿಕೆ ಹೊಂದುವ ಮೂಲಕ ಅಗ್ರಸ್ಥಾನ ಕಾಯ್ದುಕೊಂಡಿದೆ.

ತಾಜಾ ಟೊಮೆಟೊ ಬಳಕೆಯ ಜತೆಗೆ ಪಾಶ್ಚಿಮಾತ್ಯ ಆಹಾರ ಶೈಲಿಯನ್ನು ಭಾರತೀಯರು ವೇಗವಾಗಿ ಅಳವಡಿಸಿಕೊಳ್ಳುತ್ತಿರುವ ಪರಿಣಾಮ ಟೊಮೆಟೊ ಪೇಸ್ಟ್, ಜ್ಯೂಸ್, ಸಾಸ್, ಕೆಚಪ್ ತಯಾರಿಸುವ ಸ್ಟಾರ್ಟ್‌ಅಪ್‌ಗಳು ಹಾಗೂ ಉದ್ಯಮಗಳು ಹೆಚ್ಚುತ್ತಿವೆ. ಅದರಲ್ಲೂ ದೇಶದಲ್ಲೇ ಅತಿ ಹೆಚ್ಚು ಟೊಮೆಟೊ ಬೆಳೆಯುವ ಆಂಧ್ರಪ್ರದೇಶ, ಮಧ್ಯಪ್ರದೇಶ ಹಾಗೂ ಕರ್ನಾಟಕದಲ್ಲಿ ಟೊಮೆಟೊ ಉತ್ಪನ್ನಗಳ ತಯಾರಿಕೆಯೂ ಬೆಳವಣಿಗೆ ಹಾದಿಯಲ್ಲಿದೆ.



ಟೊಮೆಟೊ ಉದ್ಯಮ ಬೆಳೆಯುತ್ತಿದ್ದರೂ ಬೆಳೆಗಾರನಿಗೆ ಅದರ ಸಂಪೂರ್ಣ ಲಾಭ ಸಿಗುತ್ತಿಲ್ಲ ಎಂಬ ಅಳಲು ಇದ್ದೇ ಇದೆ. ಬಹುತೇಕ ಟೊಮೆಟೊ ಬೆಳೆಗಾರರು ತಾವು ಬೆಳೆದ ಉತ್ಪನ್ನವನ್ನು ಸ್ಥಳೀಯ ಮಾರುಕಟ್ಟೆಯಲ್ಲೇ ಮಾರುತ್ತಾರೆ. ಹೀಗಾಗಿ ಇಲ್ಲಿ ಅವರಿಗೆ ಲಭ್ಯವಾಗುತ್ತಿರುವುದು ಶೇ 30ರಿಂದ 50ರಷ್ಟು ದರ ಮಾತ್ರ. ಆದರೆ ಉಳಿದ ಹಣ ಮಧ್ಯವರ್ತಿಗಳ ಪಾಲಾಗುತ್ತಿದೆ. ಆದರೆ ಇದಕ್ಕೆ ಪರಿಹಾರವೆಂಬಂತೆ ಕೆಲವೆಡೆ ಕೃಷಿ ಉತ್ಪನ್ನ ಕಂಪನಿಗಳು ರೈತರಿಂದ ಟೊಮೆಟೊ ಖರೀದಿಸಿ, ಹಲವು ಬಗೆಯ ಉತ್ಪನ್ನಗಳನ್ನು ತಯಾರಿಸುತ್ತಿವೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ನಿವೃತ್ತಿ ಮಾರ್ಗದೆಡೆಗೆ

ತೊಲಗೆಲವೊ ಮನೆಯಿಂದ ಮನವು ಬರಡಾದಂದೆ |
ಹೊಲಸ ತೊಳೆಯಲು ತೋಳ್ಗೆ ಬಲ ಕುಗ್ಗಿದಂದೆ ||
ತೊಲಗು ಜಗದಿಂ ದೂರ, ಇಳೆಗಾಗದಿರು ಭಾರ |
ತೊಲಗಿ ನೀಂ ಮರೆಯಾಗು – ಮಂಕುತಿಮ್ಮ
|| **926** ||

ಪದ-ಅರ್ಥ: ತೊಲಗೆಲವೊ = ತೊಲಗು + ಎಲವೊ, ಬರಡಾದಂದೆ = ಬರಡು + ಆದಂದೆ, ಕುಗ್ಗಿದಂದೆ = ಕುಗ್ಗಿದ + ಅಂದೆ, ಇಳೆಗಾಗದಿರು- = ಇಳೆಗೆ + ಆಗದಿರು.

ವಾಚ್ಯಾರ್ಥ: ಮನಸ್ಸು ಬರಡಾದ ದಿನ, ಹೊಲಸನ್ನು ತೊಳೆಯಲು ತೋಳಿಗೆ ಶಕ್ತಿ ಕುಗ್ಗಿದ ದಿನ, ನೀನು ಮನೆಯಿಂದ ತೊಲಗು. ಜಗತ್ತಿನಿಂದ ದೂರ ಹೋಗು. ಭೂಮಿಗೆ ಭಾರವಾಗದೆ ತೊಲಗಿ ಮರೆಯಾಗು.

ವಿವರಣೆ: ಹಿಂದೂ ಧರ್ಮದಲ್ಲಿ ಎರಡು ಮಾರ್ಗಗಳು. ಒಂದು ಪ್ರವೃತ್ತಿ ಮಾರ್ಗ, ಇನ್ನೊಂದು ನಿವೃತ್ತಿ ಮಾರ್ಗ. ಸುಖವನ್ನು, ಯಶಸ್ಸನ್ನು ಕಂಡುಕೊಳ್ಳುವುದು ಪ್ರವೃತ್ತಿ ಮಾರ್ಗದಲ್ಲಿ. ಬದುಕು ಮಾಗಿದಂತೆಲ್ಲ ಮಕ್ಕಳ ಆಟಿಕೆಗಳಿಂತಿದ್ದ ನಾವು ಆಸೆಪಡುವ ವಸ್ತುಗಳು, ಆಕರ್ಷಣೆಯನ್ನು ಕಳೆದುಕೊಳ್ಳುತ್ತವೆ. ಆಸೆ-ಉತ್ಸಾಹಗಳನ್ನು ಹೊಂದಿ ಸುಖ- ಯಶಸ್ಸುಗಳನ್ನು ಬೆಂಬತ್ತಿ ಹೋಗುವ ಮನುಷ್ಯ ಒಂದು ದಿನ ಅವುಗಳನ್ನು ಮೀರಿ ಬೆಳೆಯುತ್ತಾನೆ. ಆಗ ಬರುವುದು ನಿವೃತ್ತಿ ಮಾರ್ಗ. ನಿವೃತ್ತಿ ಮಾರ್ಗ ಪ್ರವೃತ್ತಿ ಮಾರ್ಗದ ನಂತರ ಬರುತ್ತದೆಂಬುದನ್ನು ಮರೆಯಬಾರದು. ಈ ಪ್ರಪಂಚದಲ್ಲಿ ಒಳ್ಳೆಯದಾಗಿ ಕಾಣುವ ಪ್ರತಿಯೊಂದೂ ಪರಿಮಿತವಾದದ್ದು, ಕ್ಷೀಣಿಸುವಂಥದ್ದು. ಅದು ಒಮ್ಮೆ ಕರಗಿದ ನಂತರ ಮತ್ತೊಂದರ ಅಗತ್ಯತೆಯನ್ನು ನಮ್ಮೆದುರು ಬಿಟ್ಟು ಹೋಗುವಂಥದ್ದು. ಎಲ್ಲವೂ ಮರೆಯಾಗಿ ಹೋಗುತ್ತದೆ ಎಂಬ ಅರಿವಿನ ಹಂತವನ್ನು ತಲುಪಿದಾಗ ಅತ್ಯಂತ ಶ್ರೇಷ್ಠ ಕೊಡುಗೆಯೂ ಕೂಡ ಬೇಡವಾಗುತ್ತದೆ. ಹಾಗಾದಾಗ ಪ್ರಪಂಚದ ಬಂಧನಗಳು ಬೇಡವೆನ್ನಿಸುತ್ತವೆ. ಜನಜಂಗುಳಿಯಿಂದ ದೂರವಿರಬೇಕು, ಏಕಾಂತತೆ ಬೇಕು, ಅಂತರಂಗದ ನಿಗೂಢತೆಯಲ್ಲಿ ನಿರಂತತೆಯನ್ನು ಕಾಣಲು ಮನ ಅಪೇಕ್ಷಿಸುತ್ತದೆ. ಈ ಕಗ್ಗ, ಆ ಮನಸ್ಥಿತಿಯನ್ನು ತೋರುತ್ತದೆ. ಮನಸ್ಸು ಬರಡಾದಂದು ಮನೆಯಿಂದ ತೊಲಗು ಎನ್ನುತ್ತದೆ. ಹೊರಡು ಎನ್ನುವುದು ಮೃದುವಾದ ಆದೇಶ. ತೊಲಗು ಎನ್ನುವುದು ಒರಟಾದದ್ದು. ಪ್ರಪಂಚದ ಆಕರ್ಷಣೆ ಬಲವಾದದ್ದು. ಮನಸ್ಸು ಬರಡಾಗಿ ಆಸಕ್ತಿ ಕಳೆದುಕೊಂಡಿದ್ದರೂ ಪ್ರಪಂಚಕ್ಕೇ ಅಂಟಿಕೊಂಡು ಕುಳಿತುಕೊಳ್ಳುತ್ತದೆ. ಅದಕ್ಕೇ ತೊಲಗು ಎಂದು ಒರಟಾಗಿ ಹೇಳಬೇಕಾಗುತ್ತದೆ.ಅದರಂತೆ ಸಮಾಜಸೇವೆ ಮಾಡುವ ಶಕ್ತಿ ಕುಂದಿದಾಗಲೂ ಅಲ್ಲಿಂದ ತೊಲಗಬೇಕು. ಸಮಾಜದ ಕೊಳಕನ್ನು ತೊಳೆಯುವ ಶಕ್ತಿ ಇರುವವರೆಗೂ ನಾನು ಪ್ರಯೋಜನಕಾರಿ. ಅದು ಕಳೆದು ಹೋದ ನಂತರ ನಾನು ಸಮಾಜಕ್ಕೆ ಭಾರವಾಗುವ ಆತಂಕ. ಕಗ್ಗ ತೊಲಗು ಜಗದಿಂದ ಎನ್ನುತ್ತದೆ. ಹಾಗಾದರೆ ಕಗ್ಗ ನಿರಾಶಾವಾದವನ್ನು, ಋಣಾತ್ಮಕತೆಯನ್ನು ಪ್ರೇರೇಪಿಸುತ್ತದೆಯೇ? ಇಲ್ಲ. ಅದು ಸೂಚ್ಯವಾಗಿ ತಿಳಿಸುವುದು, ಪ್ರವೃತ್ತಿ ಮಾರ್ಗದಿಂದ ನಿವೃತ್ತಿ ಮಾರ್ಗಕ್ಕೆ ತೆರಳುವ ಸಮಯವನ್ನು. ಚಟುವಟಿಕೆಯ ಪ್ರವೃತ್ತಿಯಿಂದ ಅಂತರ್‌ಶೋಧದ ನಿವೃತ್ತಿಯೆಡೆಗೆ ಸಾಗುವುದನ್ನು ನೆನಪಿಸುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜುಲೈ 13, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಏಕಾದಶಿ ಗಂ. 18-25, ನಕ್ಷತ್ರ: ಕೃತ್ತಿಕಾ ಗಂ. 20-52 ಯೋಗ: ಶೂಲ ಗಂ. 08-52 ಕರಣ: ಬವ ಗಂ. 06-09, ಮಿಥುನ ಮಾಸದ 28 ನೇ ದಿನ, ಮಳೆನಕ್ಷತ್ರ: ಪುನರ್ವಸು 3. ರಾಹುಕಾಲ : ಮಧ್ಯಾಹ್ನ 01-30 - 03-00, ಸೂರ್ಯೋದಯ : 06-14 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 24 ಜುಲ್‌ಹಿಜಾ
ದಿನ ವಿಶೇಷ : ಕಾಮಿಕ ಏಕಾದಶಿ, ಹುತಾತ್ಮರ ದಿನ (ಕಾಶ್ಮೀರ)
ಅದೃಷ್ಟ ಸಂಖ್ಯೆ : 4, 10

ಮೇಷ: ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿರಲು ಶಿಸ್ತಿನ ಜೀವನವನ್ನು ನಡೆಸಬೇಕಾಗುತ್ತದೆ. ನೌಕರರ ಜತೆಗಿನ ವಿಶ್ವಾಸ ಅತಿಯಾಗಿ ನಷ್ಟವಾಗುವಂತಾಗಬಹುದು.

ವೃಷಭ: ನೈತಿಕ ಶಕ್ತಿ ಹೆಚ್ಚುವುದರಿಂದ ಕೆಲಸದಲ್ಲಿ ಉತ್ತಮ ಅಭಿವೃದ್ಧಿಯನ್ನು ಕಾಣುವಿರಿ. ಮಗನೊಡನೆ ಬಾಂಧವ್ಯ ಹೆಚ್ಚಿ ವ್ಯವಹಾರದಲ್ಲಿ ಲಾಭ ಹೆಚ್ಚಿಸಿಕೊಳ್ಳುವಿರಿ. ಅವಶ್ಯಕ ವಸ್ತುಗಳ ಗಳಿಕೆಯಿಂದ ಸಂತೋಷ ಉಂಟಾಗುವುದು.

ಮಿಥುನ: ಸಂಸಾರದ ಜೊತೆಯಲ್ಲಿ ಕಾಲಕಳೆಯುವ ಸಮಯವಾಗಿದೆ. ಸಾಧ್ಯವಾದಷ್ಟು ಸಮಾಧಾನ ತಾಳ್ಮೆಯಿಂದ ಮುಂದುವರಿದಲ್ಲಿ ಮಾನಸಿಕ ನೆಮ್ಮದಿ ಕಾಣುವಿರಿ. ನೂತನ ಕಾರ್ಯಗಳ ಆರಂಭಕ್ಕೆ ಇದು ಸೂಕ್ತ ಕಾಲ.

ಕರ್ಕಾಟಕ: ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸುವ ಯೋಚನೆ ಬರಲಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆತು ಮುಂದಿನ ವಿದ್ಯಾಭ್ಯಾಸಕ್ಕೆ ಅವಕಾಶಗಳು ದೊರೆಯುತ್ತವೆ. ಸಂತೋಷದ ದಿನ.

ಸಿಂಹ: ಸಾಧಿಸಲೇಬೇಕೆಂಬ ಛಲವಿರುವ ನಿಮಗೆ ಕಾರ್ಯಗಳೆಲ್ಲವೂ ಕಷ್ಟಕರವಾಗಿ ಸಿದ್ಧಿಸಲಿದೆ. ಈ ದಿನದಂದು ನಡೆಯುವ ಕಹಿ ವಿಚಾರದ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಇದೆಲ್ಲವು ಕ್ಷಣಿಕವಾದದ್ದೇ ಆಗಿರುತ್ತದೆ.

ಕನ್ಯಾ: ದೈವಕಾರ್ಯ ಮನೆಯಲ್ಲಿ ಜರುಗಲಿದೆ. ಪ್ರತಿಭೆ ಬೆಳಕಿಗೆ ಬರಲಿದೆ. ವ್ಯವಹಾರ ಒಪ್ಪಂದಗಳು ಲಾಭ ತರಲಿದೆ. ಸ್ನೇಹಿತರಿಗೆ ಸಹಾಯ ಮಾಡುವ ಬಗ್ಗೆ ನಿರ್ಧರಿಸಿ. ಕೆಲಸ ಕಾರ್ಯಗಳಲ್ಲಿ ಉತ್ಸಾಹವನ್ನು ಕಾಣುವಿರಿ.

ತುಲಾ: ದೇವತಾ ಕಾರ್ಯದ ಹೆಸರಿನಲ್ಲಿ ಕಠಿಣ ವ್ರತ ಆಚರಣೆ ಮಾಡುವಲ್ಲಿ ಆರೋಗ್ಯ ಕಡೆಗಾಣಿಸಬೇಡಿ. ಕೈಗೆ ಎಟಕುವ ವಿಷಯಗಳ ಬಗ್ಗೆ ಮಾತ್ರ ಚಿಂತಿಸಿ. ಪತಿ ಪತ್ನಿಯರು ಅನ್ಯೋನ್ಯತೆಯಿಂದಿರುವಿರಿ.

ವೃಶ್ಚಿಕ: ಎಣ್ಣೆ ಮತ್ತು ಬೇಳೆಕಾಳು ವ್ಯಾಪಾರದಲ್ಲಿ ಮಾರಾಟ ಉತ್ತಮವಾಗಿರುವುದು. ತಾಯಿಯ ಆರೋಗ್ಯದ ಬಗ್ಗೆ ಗಮನವಿರಲಿ. ಪುಣ್ಯ ಸಂಪಾದನೆ ಮುಖ್ಯ ಧ್ಯೇಯವಾಗಿರಲಿ. ಆಪ್ತರ ಸಹಾಯ ಸಿಗುವುದು.

ಧನು: ಬುದ್ಧಿವಂತರಾದ, ತಿಳಿವಳಿಕೆ ಹೊಂದಿದವರಾದ ನೀವು ಗ್ರಹಚಾರದ ಫಲವಾಗಿ ಮನೋಬಲದಿಂದ ಕಾರ್ಯ ಸಾಧಿಸುವಲ್ಲಿ ವಿಫಲರಾಗುವಿರಿ. ವಿದ್ಯಾರ್ಥಿಗಳಿಗೆ ಶಾರದಾ ಪರಮೇಶ್ವರಿಯ ಅನುಗ್ರಹ ಸಿಗಲಿದೆ.

ಮಕರ: ದವಸ ಧಾನ್ಯಗಳ ಸಗಟು ವ್ಯಾಪಾರಿಗಳು ಹಾಗೂ ದಲ್ಲಾಳಿಗಳು ಹೆಚ್ಚಿನ ಅನುಕೂಲವನ್ನು ಪಡೆಯುವರು. ಉದ್ಯೋಗದಲ್ಲಿ ಸ್ಥಳ ಬದಲಾವಣೆಯ ಅಥವಾ ಅಧಿಕವಾದ ಜವಾಬ್ದಾರಿ ಹೊರಬೇಕಾಗುವ ಸಾಧ್ಯತೆಗಳಿವೆ.

ಕುಂಭ: ಬೆಲೆ ಬಾಳುವ ವಸ್ತುವನ್ನು ಕಳೆದುಕೊಳ್ಳುವ ಯೋಗವಿರುವುದರಿಂದ ಜಾಗ್ರತೆ ಅತ್ಯಗತ್ಯ. ಜಾಹೀರಾತು ಏಜೆನ್ಸಿಯವರಿಗೆ ಅಧಿಕ ಆದಾಯವಿರುವುದು. ಆರೋಗ್ಯದಲ್ಲಿ ಉದಾಸೀನತೆ ತೋರದಿರಿ.


ಮೀನ: ಉದ್ಯೋಗದಲ್ಲಿ ವೈಯಕ್ತಿಕ ಅನಿಸಿಕೆಯು ಕಂಪನಿಗಳಿಗೆ ಉತ್ತಮ ರೀತಿ ಸಹಾಯಕಾರಿ ಆಗುವುದು. ಗುಂಪು ಚಟುವಟಿಕೆಗಳಿಗೆ ಮುಂದಾಳತ್ವವು ಅನಗತ್ಯವಾಗಿರುವುದು. ರಾಜಕೀಯ ವ್ಯಕ್ತಿಗಳಿಗೆ ಉತ್ತಮ ದಿನ.

ಪದಬಂಧ 5378

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಡಿಯಲ್ಲಿ ಉಪಾಯದಿಂದ ಹಾಕಿದ ತಳಹದಿ (4)
3.ಆಯಾಳ ಆದಾಯ ಮತ್ತು ಖರ್ಚು (4)
5.ಬಿಡದಿ ಹತ್ತಿರವಿರುವ ಹೆಂಡತಿ (3)
6.ಮರಳ ಬಳಿ ಹುಚ್ಚನಿದ್ದಾನಲ್ಲಾ? (3)
7.ಗಮನವಿಟ್ಟು ನೋಡಿ! ಗಂಭೀರವಾದುದು ಕಂಡಿದೆ (3)
9.ತನಯ ಹೀಗೆ ಮಗ್ನ! (3)
11.ರಾಮನಿಗೆ ಸಿಕ್ಕ ಬಿಡುವು (3)
12.ಮರದಲ್ಲಿರುವ ಲೆನ್ಸು ಕಾಣುತ್ತಿದೆಯೇ? (3)
14.ಈತ ಮೃತ್ಯುದೇವತೆಯ ಮಗ (4)
15.ಗಣಪತಿಯ ಇನ್ನೊಂದು ಹೆಸರು (4)

ಮೇಲಿಂದ ಕೆಳಕ್ಕೆ
1.ರಾಗದಿಂದ ಕೂಡಿರುವ ಪ್ರೀತಿ (4)
2.ನಿಯಮ ಹೇಳುವಾಗ ನರಕಾಧಿಪತಿ ಬಂದುಬಿಟ್ಟನಲ್ಲಾ? (2)
3.ಆದಿವಾಸಿಯಲ್ಲಿರುವ ಮೂಲ! (2)
4.ಯಮನ ಬಳಿ ಕಾಣುತ್ತಿರುವ ಜೋಡಿ (3)
6.ಈತ ಸಂಪ್ರದಾಯವನ್ನು ಅನುಸರಿಸುವವನು (4)
8.ಹೊಸ ಹೂವಿದು (4)
10.ನಳ ಮಾಡಿದ ರುಚಿಯಾದ ಅಡುಗೆ (4)
11.ದಾಯಾದಿಯ ಬೀಳ್ಕೊಡುವಿಕೆ (3)
12.ತಮ್ಮ ನೀಡಿರುವ ಓಟು (2)
13.ವಿರಮಿಸುತ್ತಿದ್ದಾಗ ಸೂರ್ಯಕಾಣುತ್ತಿದ್ದಾನಲ್ಲಾ (2)



5377ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಭಾಷಾಂತರ
5.ಮಲಯಜ 6.ನಿಯಮ
9.ಜವಾನ
10.ಹಯವದನ
11.ಕಡಲು 12.ಕರಗ
14.ಕನ್ನಡಕ 15.ಕೆಂಗುಲಾಬಿ

ಮೇಲಿಂದ ಕೆಳಕ್ಕೆ:
1.ಅಭಾಗಿನಿ 2.ಸುರ
3.ಯಜಮಾನ
7.ಮಹಲು 8.ಕವಳ
9.ಜನಕ 11.ಕನಿಕರ
13ಗಡಿಬಿಡಿ 15.ಕೆಂಡ

ಸುಡೊಕು 5764

3	9		2		5		6	
			4			8		5
	4	5			9		3	
4	6		9		7			
				4		1		6
8		7	5		6		4	9
		4			2			7
7						6		3
	8		7			2		


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5763 ಸುಡೊಕು


6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

1ST DEATH ANNIVERSARY




G K Narasimha Murthy
Gavipuram / Hanumanthanagar
From Family, Relatives and Friends

SAD DEMISE



With profound grief we inform that our dear father
Dr. Prof. Doreswamy A.G
passed away on **Tuesday 11th July, 2023.**
He has lived his life with grace and kindness.
Please join us as we pray and bid farewell.
The cremation is scheduled on **Thursday 13th July, 2023 between 12 - 1 pm at Wilson Garden Crematorium**.
Rest in eternal peace Pappa, Dore, Friend and Mentor.
You will forever be missed but your memory will live on in our hearts.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,439
ಇಂದಿನ ಅಂತ್ಯ	19,384
▼	55
ದಿನದ ಕನಿಷ್ಠ	19,361

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಗುಬ್ಬಿ (ಮಿಲ್ಲಿಂಗ್)	₹5000-5000
ಗುಬ್ಬಿ (ಸಣ್ಣ)	₹5000-5000
ಕೆ.ಆರ್.ಪೇಟೆ (ಇತರೆ)	₹7000-7750

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹475

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1715(1715)
ಸೋಯಾ (ರಿಫೈನ್ಡ್)	₹950(950)
ಸೂರ್ಯಕಾಂತಿ (ರಿಫೈನ್ಡ್)	₹950(950)
ಪಾಮೋಲಿನ್	₹863(864)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹146
ಗುಡ್ ಲಾಟ್	₹129

ಧಾನ್ಯಗಳ ಬೆಲೆಯಲ್ಲಿ ಹೆಚ್ಚಳ | ರೆಪೊ ದರ ಮತ್ತೆ ಯಥಾಸ್ಥಿತಿ ಸಾಧ್ಯತೆ

ಜೂನ್‌ನಲ್ಲಿ ಏರಿದ ಹಣದುಬ್ಬರ

ನವದೆಹಲಿ (ಪಿಟಿಐ): ಜೂನ್ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇಕಡ 4.81ಕ್ಕೆ ಹೆಚ್ಚಳವಾಗಿದೆ. ಇದು ಮೂರು ತಿಂಗಳ ಗರಿಷ್ಠ ಮಟ್ಟ. ಆದರೆ ಇದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗರಿಷ್ಠ ಪ್ರಮಾಣಕ್ಕಿಂತ ಕಡಿಮೆ. ಧಾನ್ಯಗಳ ಬೆಲೆ ಏರಿಕೆಯು ಹಣದುಬ್ಬರ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ.

ಫೆಬ್ರುವರಿಯ ನಂತರದಲ್ಲಿ ಚಿಲ್ಲರೆ ಹಣದುಬ್ಬರ ದರವು ಇಳಿಕೆ ಕಾಣುತ್ತಿತ್ತು. ಮುಂದಿನ ತಿಂಗಳ ಮೊದಲ ವಾರದಲ್ಲಿ ಆರ್‌ಬಿಐ ತನ್ನ ಹಣಕಾಸು ನೀತಿಯನ್ನು ಪ್ರಕಟಿಸಲಿದೆ. ಆಗ ಅದು ರೆಪೊ ದರದಲ್ಲಿ ಬದಲಾವಣೆ ತರಬೇಕೇ ಎಂಬುದನ್ನು ನಿರ್ಧರಿಸುವಾಗ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಪರಿಗಣನೆಗೆ ತೆಗೆದುಕೊಳ್ಳಲಿದೆ.

ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 4.31 ಆಗಿತ್ತು. ಹಿಂದಿನ ವರ್ಷದ ಜೂನ್‌ನಲ್ಲಿ ಇದು ಶೇ 7ರಷ್ಟು ಇತ್ತು. ಜೂನ್‌ನಲ್ಲಿ ಆಹಾರ ವಸ್ತುಗಳ ಹಣದುಬ್ಬರವು ಹೆಚ್ಚಾಗಿದೆ. ಗ್ರಾಹಕರ ಬೆಲೆ ಸೂಚ್ಯಂಕದಲ್ಲಿ ಆಹಾರ ವಸ್ತುಗಳಿಗೆ ಹೆಚ್ಚಿನ ಪ್ರಾಧಾನ್ಯ ಇದೆ.


ಈಗ ತರಕಾರಿಗಳ ಬೆಲೆ ಹೆಚ್ಚಳವಾಗಿರುವ ಕಾರಣ ಜುಲೈ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 5.3 ಅಥವಾ ಶೇ 5.5ರ ಮಟ್ಟಕ್ಕೆ ತಲುಪಲಿದೆ. ಇದು ಆರ್‌ಬಿಐ ನಿರೀಕ್ಷೆಯ ಮಟ್ಟವಾದ ಶೇ 5.2ಕ್ಕಿಂತ ಹೆಚ್ಚು. ಹೀಗಾಗಿ, ಆಗಸ್ಟ್‌ನಲ್ಲಿ ಆರ್‌ಬಿಐ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವ ಸಾಧ್ಯತೆ ಇದೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಹೇಳಿದ್ದಾರೆ.

ಅಂಕಿ ಅಂಶ

4.72%
ಗ್ರಾಮೀಣ ಪ್ರದೇಶಗಳಲ್ಲಿ ಹಣದುಬ್ಬರ

4.96%
ನಗರ ಪ್ರದೇಶಗಳಲ್ಲಿ ಹಣದುಬ್ಬರ

(ಹಣದುಬ್ಬರ ದರ ತಿಳಿಯಲು ಬೇಕಿರುವ ಮಾಹಿತಿಯನ್ನು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಒಟ್ಟು 1,114 ನಗರ ಮಾರುಕಟ್ಟೆಗಳು ಮತ್ತು 1,181 ಗ್ರಾಮೀಣ ಮಾರುಕಟ್ಟೆಗಳಿಂದ ಸಂಗ್ರಹಿಸಲಾಗುತ್ತದೆ)



ಕೈಗಾರಿಕಾ ಉತ್ಪಾದನೆ ಶೇ 5.2 ಏರಿಕೆ

ನವದೆಹಲಿ (ಪಿಟಿಐ): ಮೇ ತಿಂಗಳಲ್ಲಿ ದೇಶದ ಕೈಗಾರಿಕಾ ಉತ್ಪಾದನೆ ಪ್ರಮಾಣವು ಶೇಕಡ 5.2ರಷ್ಟು ಹೆಚ್ಚಳವಾಗಿದೆ. ಇದು ಏಪ್ರಿಲ್‌ನಲ್ಲಿ ಶೇ 4.5ರಷ್ಟು ಇತ್ತು. ತಯಾರಿಕೆ ಹಾಗೂ ಗಣಿಗಾರಿಕೆ ವಲಯಗಳಲ್ಲಿನ ಉತ್ತಮ ಬೆಳವಣಿಗೆಯ ಕಾರಣದಿಂದಾಗಿ ಈ ಏರಿಕೆ ಕಂಡುಬಂದಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ ತಯಾರಿಕಾ ವಲಯದ ಉತ್ಪಾದನೆಯು ಶೇ 5.7ರಷ್ಟು ಹೆಚ್ಚಾಗಿದೆ. ವಿದ್ಯುತ್ ಉತ್ಪಾದನೆಯು ಶೇ 0.9ರಷ್ಟು ಜಾಸ್ತಿಯಾಗಿದೆ. ಗಣಿಗಾರಿಕೆಯ ಉತ್ಪಾದನೆಯು ಶೇ 6.4ರಷ್ಟು ಹೆಚ್ಚಾಗಿದೆ. ಬಂಡವಾಳ ಸರಕು ವಲಯವು ಶೇ 8.2ರಷ್ಟು ಏರಿಕೆ ಕಂಡಿದೆ.

ಸುದ್ದಿ 2 ನಿಮಿಷ

ಪ್ರಯಾಣಿಕ ವಾಹನ ಸಗಟು ಮಾರಾಟ ಅಲ್ಪ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನಗಳ ಸಗಟು ಮಾರಾಟವು ಕಳೆದ ವರ್ಷದ ಜೂನ್‌ಗೆ ಹೋಲಿಸಿದರೆ ಈ ವರ್ಷದ ಜೂನ್‌ನಲ್ಲಿ ಶೇಕಡ 2ರಷ್ಟು ಏರಿಕೆ ಕಂಡಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ಮಾಹಿತಿ ನೀಡಿದೆ.

2022ರ ಜೂನ್‌ನಲ್ಲಿ 3.20 ಲಕ್ಷ ವಾಹನಗಳು ಮಾರಾಟ ಆಗಿದ್ದವು. ಮಾರಾಟವು ಈ ವರ್ಷದ ಜೂನ್‌ನಲ್ಲಿ 3.27 ಲಕ್ಷಕ್ಕೆ ಏರಿಕೆ ಕಂಡಿದೆ.

ದ್ವಿಚಕ್ರ ವಾಹನ ಮಾರಾಟವು ಶೇ 2ರಷ್ಟು ಹೆಚ್ಚಾಗಿ 13.30 ಲಕ್ಷಕ್ಕೆ ತಲುಪಿದೆ. ತ್ರಿಚಕ್ರ ವಾಹನ ಮಾರಾಟ 26,701ರಿಂದ 53,019ಕ್ಕೆ ಏರಿಕೆ ಕಂಡಿದೆ. ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಪ್ರಯಾಣಿಕ ವಾಹನ ಮಾರಾಟ 9.95 ಲಕ್ಷದಷ್ಟು ಆಗಿದ್ದು, ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 9ರಷ್ಟು ಏರಿಕೆ ಕಂಡಿದೆ.



ವಾಹನಗಳ ಒಟ್ಟು ಮಾರಾಟವು 49.35 ಲಕ್ಷದಿಂದ 54.98 ಲಕ್ಷಕ್ಕೆ ಏರಿಕೆ ಆಗಿದೆ. ಬಡ್ಡಿದರವು ಗರಿಷ್ಠ ಮಟ್ಟದಲ್ಲಿ ಇರುವುದು ಆತಂಕ ಮೂಡಿಸಿದೆ ಎಂದು ಒಕ್ಕೂಟದ ಅಧ್ಯಕ್ಷ ವಿನೋದ್ ಅಗರ್ವಾಲ್ ಹೇಳಿದ್ದಾರೆ.

‘ಫ್ಯೂಚರ್’ ಖರೀದಿ: ಸ್ಪರ್ಧೆಯಲ್ಲಿ ರಿಲಯನ್ಸ್, ಜಿಂದಾಲ್, ಜೆಬಿಟಿಎಲ್

ನವದೆಹಲಿ (ಪಿಟಿಐ): ದಿವಾಳಿ ಪ್ರಕ್ರಿಯೆಯಲ್ಲಿ ಇರುವ ಫ್ಯೂಚರ್ ಎಂಟರ್‌ಪ್ರೈಸಸ್ ಕಂಪನಿಯನ್ನು ಖರೀದಿಸಲು ರಿಲಯನ್ಸ್ ರಿಟೇಲ್ ವೆಂಚರ್ಸ್ ಸೇರಿದಂತೆ ಮೂರು ಕಂಪನಿಗಳನ್ನು ‘ನಿರೀಕ್ಷಿತ ಖರೀದಿದಾರ’ ಕಂಪನಿಗಳನ್ನಾಗಿ ಆಯ್ಕೆ ಮಾಡಲಾಗಿದೆ.

ಫ್ಯೂಚರ್ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ದಿವಾಳಿ ಪ್ರಕ್ರಿಯೆ ನಿರ್ವಹಿಸುವ ವೃತ್ತಿಪರ ಅಧಿಕಾರಿಯು ರಿಲಯನ್ಸ್ ರಿಟೇಲ್, ಜಿಂದಾಲ್ ಮತ್ತು ಜೆಬಿಟಿಎಲ್ ಕಂಪನಿಗಳ ಅರ್ಜಿ ಅಂತಿಮಗೊಳಿಸಿದ್ದಾರೆ. ಕಂಪನಿಯು ಷೇರುಪೇಟೆಗೆ ಈ ಮಾಹಿತಿ ನೀಡಿದೆ.

ಈ ಮೂರು ಕಂಪನಿಗಳು ಆಗಸ್ಟ್ 24ರ ಒಳಗಾಗಿ ಪುನಶ್ಚೇತನ ಯೋಜನೆಯನ್ನು ಸಲ್ಲಿಸಬೇಕಿದೆ.

ಹೆಚ್ಚಿದ ಹೊಸ ಬೇಡಿಕೆ: ಮಾರುಕಟ್ಟೆ ನಿರೀಕ್ಷೆ ಮೀರಿ ಗಳಿಕೆ

ಟಿಸಿಎಸ್ ಲಾಭ ಶೇ 17ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಸಾಫ್ಟ್‌ವೇರ್ ಸೇವೆಗಳನ್ನು ಒದಗಿಸುವ ದೇಶದ ಅತಿದೊಡ್ಡ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್), ಜೂನ್ ತ್ರೈಮಾಸಿಕದಲ್ಲಿ ₹11,074 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭ ಶೇ 16.83ರಷ್ಟು ಏರಿಕೆ ಕಂಡಿದೆ.

ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ನಿವ್ವಳ ಲಾಭ ₹9,478 ಕೋಟಿ ಇತ್ತು.

ಲಾಭವು ₹ 8,938 ಕೋಟಿ ಆಗಲಿದೆ ಎಂದು ರಿಫಿನಿಟಿವ್ ಐಬಿಇಎಸ್ ಅಂದಾಜು ಮಾಡಿತ್ತು. ಆದರೆ, ಕಂಪನಿಯ ಲಾಭವು ಅಂದಾಜನ್ನು ಮೀರಿದೆ.

ಕಂಪನಿಯ ಕಾರ್ಯಾಚರಣಾ ವರಮಾನ ಶೇ 12.55ರಷ್ಟು ಹೆಚ್ಚಾಗಿ ₹59,381 ಕೋಟಿಗೆ ತಲುಪಿದೆ. ಮಾರ್ಚ್ ತ್ರೈಮಾಸಿಕದಲ್ಲಿ ಇದ್ದ ₹59,162 ಕೋಟಿಗೆ ಹೋಲಿಸಿದರೆ ಅಲ್ಪ ಏರಿಕೆ ಕಂಡಿದೆ. ಕಂಪನಿಯು ಜೂನ್ ತ್ರೈಮಾಸಿಕದಲ್ಲಿ ಹೊಸದಾಗಿ ನೇಮಿಸಿಕೊಂಡ ಉದ್ಯೋಗಿಗಳ ನಿವ್ವಳ ಸಂಖ್ಯೆ 523. ಕಂಪನಿಯ ಒಟ್ಟು ಸಿಬ್ಬಂದಿ ಸಂಖ್ಯೆಯು 6.15 ಲಕ್ಷಕ್ಕೆ ತಲುಪಿದೆ. ಕಂಪನಿ ಬಿಟ್ಟು ಹೋಗುತ್ತಿರುವವರ ಪ್ರಮಾಣವು ಶೇ 17.8ರಷ್ಟು ಇದೆ.

ಕಂಪನಿಗೆ ಲೈಫ್ ಸೈನ್ಸಸ್ ಮತ್ತು ಆರೋಗ್ಯಸೇವಾ ವಿಭಾಗದಿಂದ ಬರುವ ವರಮಾನ ಶೇ 10.1ರಷ್ಟು ಬೆಳವಣಿಗೆ ಕಂಡಿದ್ದರೆ, ಬ್ಯಾಂಕಿಂಗ್, ಹಣಕಾಸು ಸೇವೆಗಳು ಮತ್ತು ವಿಮೆಯಿಂದ ಬರುವ ವರಮಾನವು ಶೇ 3ರಷ್ಟು ಮಾತ್ರವೇ ಬೆಳವಣಿಗೆ ಕಂಡಿದೆ.

> **ಹೊಸ ತಂತ್ರಜ್ಞಾನಗಳ ಉದಯದಿಂದಾಗಿ ನಮ್ಮ ಸೇವೆಗಳಿಗೆ ದೀರ್ಘಾವಧಿಯ ಬೇಡಿಕೆ ಇರುವ ವಿಶ್ವಾಸ ಇದೆ**
> **ಕೆ. ಕೃತಿವಾಸನ್,** ಟಿಸಿಎಸ್ ಸಿಇಒ

ಕಂಪನಿಯು ವರಮಾನ ಗಳಿಕೆಯಲ್ಲಿ ಬ್ರಿಟನ್ ಪಾಲು ಶೇ 16.1ರಷ್ಟು ಇದ್ದರೆ, ಉತ್ತರ ಅಮೆರಿಕದ ಪಾಲು ಶೇ 4.6ರಷ್ಟು ಆಗಿದೆ.

ವರಮಾನದಲ್ಲಿ ಹೆಚ್ಚಿನ ಪಾಲು ಹೊಂದಿರುವ ಉತ್ತರ ಅಮೆರಿಕದ ಮಾರುಕಟ್ಟೆ, ಬ್ಯಾಂಕಿಂಗ್, ಹಣಕಾಸು ಸೇವೆಗಳು ಮತ್ತು ವಿಮೆ (ಬಿಎಫ್‌ಎಸ್‌ಐ) ವಿಭಾಗದ ಮೇಲೆ ಹೆಚ್ಚಿನ ಪರಿಣಾಮ ಉಂಟಾಗಿದೆ. ಅಮೆರಿಕದಲ್ಲಿ ಹಣದುಬ್ಬರ ನಿಯಂತ್ರಿಸಲು ಫೆಡರಲ್ ರಿಸರ್ವ್ ಬಡ್ಡಿದರ ಹೆಚ್ಚಳ ಮಾಡುತ್ತಿರುವ ಬೆನ್ನಲ್ಲೇ ಅಲ್ಲಿನ ಕೆಲವು ಬ್ಯಾಂಕ್‌ಗಳಲ್ಲಿ ಆಸ್ತಿ–ಹೊಣೆಗಾರಿಕೆಯ ಲೆಕ್ಕಾಚಾರ ತಾಳೆ ಆಗದೇ ನಷ್ಟ ಅನುಭವಿಸುತ್ತಿವೆ.

ಎಚ್‌ಸಿಎಲ್ ಲಾಭ ಶೇ 7ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಎಚ್‌ಸಿಎಲ್ ಟೆಕ್ನಾಲಜೀಸ್ ಜೂನ್ ತ್ರೈಮಾಸಿಕದಲ್ಲಿ ₹3,534 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹3,324 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 7ರಷ್ಟು ಹೆಚ್ಚಾಗಿದೆ.

ವರಮಾನ ಶೇ 12.1ರಷ್ಟು ಹೆಚ್ಚಾಗಿ ₹26,296 ಕೋಟಿಗೆ ತಲುಪಿದೆ. ಐ.ಟಿ. ಸೇವೆಗಳಿಗೆ ಸಂಬಂಧಿಸಿದ 7 ಮತ್ತು ಸಾಫ್ಟ್‌ವೇರ್‌ಗೆ ಸಂಬಂಧಿಸಿದ 11 ದೊಡ್ಡ ಮೊತ್ತದ ಒಪ್ಪಂದಗಳು ತ್ರೈಮಾಸಿಕದಲ್ಲಿ ಆಗಿರುವುದೇ ಲಾಭದಲ್ಲಿ ಹೆಚ್ಚಳಕ್ಕೆ ಕಾರಣ ಎಂದು ಕಂಪನಿ ತಿಳಿಸಿದೆ.


ಟಾಟಾ ಟೆಕ್ನಾಲಜೀಸ್: ರಾಜ್ಯದಲ್ಲಿ ₹ 2 ಸಾವಿರ ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಟೆಕ್ನಾಲಜೀಸ್ ಕಂಪನಿ ಹಾಗೂ ಸರ್ಕಾರದ ಸಹಭಾಗಿತ್ವದಲ್ಲಿ ₹ 2 ಸಾವಿರ ಕೋಟಿ ವೆಚ್ಚದಲ್ಲಿ ಮೂರು ಎಂಜಿನಿಯರಿಂಗ್ ಸೌಲಭ್ಯ ಕೇಂದ್ರಗಳನ್ನು ರಾಜ್ಯದಲ್ಲಿ ಸ್ಥಾಪಿಸುತ್ತಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ವಿಧಾನಸೌಧದಲ್ಲಿ ಬುಧವಾರ ಟಾಟಾ ಟೆಕ್ನಾಲಜೀಸ್ ಕಂಪನಿಯ ಉನ್ನತಾಧಿಕಾರಿಗಳ ಜತೆ ನಡೆಸಿದ ಸಭೆಯ ನಂತರ ಅವರು ಮಾತನಾಡಿದರು.

ಸಣ್ಣ ಮತ್ತು ಮಧ್ಯಮ ಉದ್ದಿಮೆಗಳನ್ನು ಗಮನದಲ್ಲಿಟ್ಟುಕೊಂಡು ಈ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಟಾಟಾ ಟೆಕ್ನಾಲಜೀಸ್ ಶೇ 70, ಸರ್ಕಾರದ ಪಾಲು ಶೇ 30ರಷ್ಟು ಇರಲಿದೆ. ಪ್ರತಿ ಕೇಂದ್ರಕ್ಕೆ ₹ 630 ಕೋಟಿ ವೆಚ್ಚವಾಗಲಿದೆ. ಪ್ರತಿ ಕೇಂದ್ರಕ್ಕೂ ಐದು ಎಕರೆ ಜಾಗ ಗುರುತಿಸಲಾಗುವುದು. ಇದರಿಂದ ಎಲೆಕ್ಟ್ರಿಕ್ ವಾಹನಗಳು, ಬಾಹ್ಯಾಕಾಶ ಹಾಗೂ ರಕ್ಷಣಾ ವಲಯದ ಉದ್ದಿಮೆ, ನವೋದ್ಯಮಗಳಿಗೆ ಹೆಚ್ಚಿನ ಉಪಯೋಗ ಆಗುತ್ತದೆ ಎಂದು ಅವರು ಹೇಳಿದರು.



ಎಂ.ಬಿ.ಪಾಟೀಲ

ಟಾಟಾ ಟೆಕ್ನಾಲಜೀಸ್ ಅಧ್ಯಕ್ಷ ಪವನ್ ಭಗೇರಿಯಾ, ಉಪಾಧ್ಯಕ್ಷ ಪುಷ್ಕರಾಜ್ ಕೌಲಗೂಡ್, ಮುಖ್ಯಸ್ಥ ಪ್ರವೀಣ್ ದಿವೇಕರ್, ಕೈಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ ಇದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು -	495-500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-41500
ಹಳತು	46000-49000
ಕಾರ್ಕಳ	
ಹೊಸತು	30000-42500
ಹಳತು	40000-49000
ಕುಮಟಾ	
ಚಿಪ್ಪು	31069-34399
ಕೋಕ	25090-35019
ಫ್ಯಾಕ್ಟರಿ	14609-22969
ಹಳೆಚಾಲಿ	37399-41039
ಹೊಸಚಾಲಿ	36099-39869
ಶಿರಸಿ	
ಬೆಟ್ಟೆ	40601-49839
ಬಿಳಿಗೋಟು	26099-36000
ಚಾಲಿ	37099-40799
ಕೆಂಪುಗೋಟು	34199-36399
ರಾಶಿ	46289-52499

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13900	14200	14200	159.85ಸೆಂಟ್ಸ್
ಎಸಿ	7140	7200	7250	
ಆರ್‌ಪಿ	10100	10350	10200	ಲಂಡನ್
ಆರ್‌ಸಿ	5960	232	5900	2576 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

12-7-2023

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1725(1725)
ಒಂದು ವಾರದ ಡೆಲಿವರಿ	1720(1720)
ಸೋಯಾ ಕಚ್ಚಾ	887(885)
ಪಾಮ್ ವಾರದ ಡೆಲಿವರಿ	861(862)
ಸೂರ್ಯಕಾಂತಿ ಎಣ್ಣೆ ಕಚ್ಚಾ	860(860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	58,550(58,700)
ಬೆಳ್ಳಿ ಕೆ.ಜಿ	70,900(70,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜೋಸ್ ಅಲುಕ್ಕಾಸ್‌ಗೆ ಪ್ರತಿಷ್ಠಿತ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಸ್ ಅಲುಕ್ಕಾಸ್ ಕಂಪನಿಯು ಪ್ಲಾಟಿನಂ ಗಿಲ್ಡ್ ಇಂಟರ್‌ನ್ಯಾಷನಲ್ (ಪಿಜಿಐ) ಇಂಡಿಯಾ ಆಯೋಜಿಸುವ ‘ಇಂಡಿಯಾಸ್ ಪ್ಲಾಟಿನಂ ಸೀಸನ್ ಆಫ್ ಲವ್ ಅವಾರ್ಡ್ಸ್ 2023’ ಕಾರ್ಯಕ್ರಮದಲ್ಲಿ ಪ್ರತಿಷ್ಠಿತ ‘ಪ್ರವರ್ಧಮಾನಕ್ಕೆ ಬರುತ್ತಿರುವ ಮಳಿಗೆಗಳ ಸಮೂಹ’ ಪ್ರಶಸ್ತಿಯನ್ನು ಗೆದ್ದುಕೊಂಡಿದೆ.

ಗ್ರಾಹಕರ ಪಾಲಿಗೆ ಸಾಟಿಯಿಲ್ಲದ ಖರೀದಿ ಅನುಭವವನ್ನು ಒದಗಿಸುವ ಮೂಲಕ ಜೋಸ್ ಅಲುಕ್ಕಾಸ್ ಕಂಪನಿಯು ತನ್ನ ಸಾಮರ್ಥ್ಯವನ್ನು ತೋರಿಸಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ಹೇಳಿದೆ.

‘ಪ್ಲಾಟಿನಂ ಸೀಸನ್ ಆಫ್ ಲವ್ ಅವಾರ್ಡ್ಸ್ ಕಾರ್ಯಕ್ರಮದಲ್ಲಿ ಪಡೆದಿರುವ ಪ್ರಶಸ್ತಿಯು ಶ್ರೇಷ್ಠತೆಯನ್ನು ಸಾಧಿಸಲು ನಾವು ನಿರಂತರವಾಗಿ ಶ್ರಮಿಸುತ್ತಿರುವುದಕ್ಕೆ ದ್ಯೋತಕ’ ಎಂದು ಕೂಡ ಕಂಪನಿಯು ಹೇಳಿಕೊಂಡಿದೆ.

ರಷ್ಯಾದ 11 ಡ್ರೋನ್‌ಗಳನ್ನು ಹೊಡೆದುರುಳಿಸಿದ ಉಕ್ರೇನ್

ಕೀವ್(ಉಕ್ರೇನ್)(ಎಎಫ್‌ಪಿ): ರಾಜಧಾನಿ ಕೀವ್ ಮೇಲೆ ದಾಳಿ ನಡೆಸಲು ಬಂದಿದ್ದ ರಷ್ಯಾದ 11 ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ಉಕ್ರೇನ್ ಬುಧವಾರ ಹೇಳಿದೆ.

ಇರಾನ್ ನಿರ್ಮಿತ ರಷ್ಯಾದ ಡ್ರೋನ್‌ಗಳನ್ನು ಉಕ್ರೇನ್ ಸೋಮವಾರ ರಾತ್ರಿಯೂ ಹೊಡೆದುಹಾಕಿತ್ತು. ಎರಡನೇ ದಿನವಾದ ಮಂಗಳವಾರ ರಾತ್ರಿಯೂ ಕೀವ್‌ನತ್ತ ಬಂದ ಡ್ರೋನ್‌ಗಳನ್ನು ನಾಶಪಡಿಸುವಲ್ಲಿ ಉಕ್ರೇನ್ ಸಫಲವಾಗಿದೆ.

‘ಒಟ್ಟು 15 ಕಾಮಿಕೇಜ್ ಡ್ರೋನ್‌ಗಳು ದಾಳಿಗೆ ಬಂದಿದ್ದವು. ಕೀವ್‌ನ ಕೇಂದ್ರ ಮತ್ತು ಪೂರ್ವ ಭಾಗದ ವಾಯುಪ್ರದೇಶದಲ್ಲಿ ಪತ್ತೆಯಾದ 11 ಡ್ರೋನ್‌ಗಳನ್ನು ನಾಶಪಡಿಸಲಾಗಿದೆ’ ಎಂದು ಉಕ್ರೇನ್‌ನ ವಾಯುಪಡೆ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದೆ.

ಇನ್ನುಳಿದ ಡ್ರೋನ್‌ಗಳನ್ನು ಹೊಡೆದುರುಳಿಸಲಾಯಿತೇ ಎಂಬುದರ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಡ್ರೋನ್ ದಾಳಿಯಿಂದಾಗಿ ಚರ್ಕಸೆ ಪ್ರಾಂತ್ಯದಲ್ಲಿ ಇಬ್ಬರು ಗಾಯಗೊಂಡಿದ್ದಾರೆ ಎಂದು ಅಲ್ಲಿನ ರಾಜ್ಯಪಾಲ ಇಗೋರ್ ಟಬುರೆಟ್ಸ್ ತಿಳಿಸಿದ್ದಾರೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹222-450
ದ್ವಿತಳಿ (ಬಿ.ವಿ)	₹293-606

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-1800
ಮಧ್ಯಮ	₹1200-1500
ಸಣ್ಣ	₹800-1200

‘ಉಕ್ರೇನ್‌ಗೆ ಮಿಲಿಟರಿ ನೆರವು ಖಚಿತ, ಸದಸ್ಯತ್ವ ಸದ್ಯಕ್ಕಿಲ್ಲ’

ವಿಲ್ನಿಯಸ್ (ಲಿಥುವೇನಿಯಾ) (ಎಪಿ): ರಷ್ಯಾ ವಿರುದ್ಧ ಹೋರಾಡಲು ಉಕ್ರೇನ್‌ಗೆ ಹೆಚ್ಚಿನ ಮಿಲಿಟರಿ ನೆರವು ಒದಗಿಸಲು ಬದ್ಧವಾಗಿರುವುದಾಗಿ ನ್ಯಾಟೊ ರಾಷ್ಟ್ರಗಳು ಹೇಳಿವೆ. ಆದರೆ, ಸದಸ್ಯತ್ವದ ಬಗ್ಗೆ ಸ್ಪಷ್ಟವಾದ ಭರವಸೆ ನೀಡುವಲ್ಲಿ ವಿಫಲವಾಗಿವೆ.

ರಷ್ಯಾ ಆಕ್ರಮಣದ ವಿರುದ್ಧ ಉಕ್ರೇನ್‌ಗೆ ನೆರವು ನೀಡುವ ಉದ್ದೇಶದಿಂದಲೇ ನ್ಯಾಟೊ–ಉಕ್ರೇನ್ ಮಂಡಳಿಯನ್ನು ಹೊಸದಾಗಿ ರಚಿಸಲಾಗಿದ್ದು, 31 ಮಿತ್ರರಾಷ್ಟ್ರಗಳು ಮತ್ತು ಉಕ್ರೇನ್ ಅನ್ನು ಈ ಮಂಡಳಿ ಒಳಗೊಂಡಿದೆ. ಈ ಮಂಡಳಿಯಲ್ಲಿ ತುರ್ತು ಸಮಾಲೋಚನೆಗಳನ್ನು ನಡೆಸಲು ಅವಕಾಶವಿರಲಿದೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ನ್ಯಾಟೊ ರಾಷ್ಟ್ರಗಳ ನಾಯಕರು ಮಂಡಳಿಯಲ್ಲಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಜತೆ ಚರ್ಚಿಸಲಿದ್ದಾರೆ.

ಉಕ್ರೇನ್ ಅನ್ನು ನ್ಯಾಟೊಗೆ ಸೇರಿಸಿಕೊಳ್ಳದೇ ಇದ್ದರೂ, ಅದನ್ನು ಮಿಲಿಟರಿ ಮೈತ್ರಿಗೆ ಹತ್ತಿರ ತರುವುದು ನ್ಯಾಟೊ–ಉಕ್ರೇನ್ ಮಂಡಳಿ ರಚನೆಯ ಉದ್ದೇಶವಾಗಿದೆ

’ಮಿತ್ರರಾಷ್ಟ್ರಗಳು ಅಂಗೀಕರಿಸಿದರೆ ಮತ್ತು ಷರತ್ತುಗಳನ್ನು ಒಪ್ಪಿಕೊಂಡರೆ ಉಕ್ರೇನ್ ಅನ್ನು ನ್ಯಾಟೊಗೆ ಸೇರಿಸಿಕೊಳ್ಳಬಹುದು’ ಎಂದು ಮಂಗಳವಾರ ನಡೆದಿದ್ದ ನ್ಯಾಟೊ ಶೃಂಗ ಸಭೆಯ ಬಳಿಕ ಬಿಡುಗಡೆ ಮಾಡಿದ್ದ ಹೇಳಿಕೆಯಲ್ಲಿ ತಿಳಿಸಲಾಗಿತ್ತು.

ನ್ಯಾಟೊ ರಾಷ್ಟ್ರಗಳ ಮಿಲಿಟರಿ ನೆರವಿನ ಬಗ್ಗೆ ಝೆಲೆನ್‌ಸ್ಕಿ ಮೆಚ್ಚುಗೆ ವ್ಯಕ್ತಪಡಿಸಿದ್ದರೂ, ಸದಸ್ಯತ್ವ ನೀಡದೇ ಇರುವುದು ಅವರಿಗೆ ನಿರಾಶೆ ಮೂಡಿಸಿದೆ.

ನಿರ್ಧಾರ ಶ್ಲಾಘಿಸಿದ ಝೆಲೆನ್‌ಸ್ಕಿ: ನ್ಯಾಟೊದಲ್ಲಿ ಸದಸ್ಯತ್ವ ಪಡೆಯುವ ಉಕ್ರೇನ್‌ನ ಹಾದಿಯನ್ನು ಸರಳಗೊಳಿಸುವ ಸದಸ್ಯರ ರಾಷ್ಟ್ರಗಳ ನಿರ್ಧಾರವನ್ನು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಬುಧವಾರ ಶ್ಲಾಘಿಸಿದರು. ಭದ್ರತೆಗೆ ಸಂಬಂಧಿಸಿದಂತೆ ಹೊಸದಾಗಿ ನೀಡಿರುವ ಖಾತ್ರಿ, ಸೇನಾ ನೆರವಿನ ಭರವಸೆಗೆ ಅವರು ಹರ್ಷ ವ್ಯಕ್ತಪಡಿಸಿದರು.


‘ನ್ಯಾಟೊ ಶೃಂಗಸಭೆಯಿಂದ ಉತ್ತಮವಾದ ಫಲಿತಾಂಶ ಬಂದಿದೆ. ಆದರೆ, ನ್ಯಾಟೊ ಸೇರಲು ಆಮಂತ್ರಣ ಸಿಕ್ಕಿದ್ದರೆ ಅದು ಸೂಕ್ತವಾಗಿರುತ್ತಿತ್ತು’ ಎಂದು ಅವರು ನ್ಯಾಟೊದ ಮಹಾನಿರ್ದೇಶಕರ ಜತೆಗಿನ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಬರಹಗಾರ ಮಿಲನ್ ಕುಂದೆರಾ ನಿಧನ

ಪ್ಯಾರಿಸ್: ಕಮ್ಯುನಿಸ್ಟ್ ಜೆಕೊಸ್ಲೊವಾಕಿಯಾದ ಕುರಿತ ವಿಮರ್ಶಾತ್ಮಕ ಬರಹಗಳ ಮೂಲಕ, ದೇಶದಿಂದ ಹೊರಬಿದ್ದು ಫ್ರಾನ್ಸ್‌ನಲ್ಲಿ ನೆಲೆನಿಂತಿದ್ದ ಬರಹಗಾರ ಮಿಲನ್ ಕುಂದೆರಾ ಅವರು ತಮ್ಮ 94ನೇ ವಯಸ್ಸಿನಲ್ಲಿ ಪ್ಯಾರಿಸ್‌ನಲ್ಲಿ ನಿಧನರಾಗಿದ್ದಾರೆ.

1929ರ ಏಪ್ರಿಲ್ 1ರಂದು ಜನಿಸಿದ್ದ ಕುಂದೆರಾ ಬ್ರನೋದಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣ ಪಡೆದಿದ್ದರು. ಸಾಹಿತ್ಯ, ವಿಜ್ಞಾನ ಮತ್ತು ಚಿತ್ರಕಥೆ ಅಧ್ಯಯನಕ್ಕಾಗಿ ಪ್ರೇಗ್‌ಗೆ ತೆರಳಿದ್ದರು. ಅವರ ಮೊದಲ ಕಾದಂಬರಿ ‘ದಿ ಜೋಕ್’. ಆದರೆ, ‘ದಿ ಅನ್‌ಬೇರಬಲ್ ಲೈಟ್‌ನೆಸ್ ಆಫ್ ಬೀಯಿಂಗ್,’ ಅವರಿಗೆ ಅಪಾರ ಖ್ಯಾತಿ ತಂದುಕೊಟ್ಟಿತ್ತು. 1988ರಲ್ಲಿ ಈ ಕಾದಂಬರಿ ಸಿನಿಮಾ ಕೂಡ ಆಗಿದೆ.

ಪ್ರೀತಿ ಮತ್ತು ಗಡಿಪಾರು, ರಾಜಕೀಯ ಮತ್ತು ಆಳವಾದ ವೈಯಕ್ತಿಕ ವಿಷಯಗಳನ್ನು ಒಟ್ಟೊಟ್ಟಿಗೆ ಬೆಸೆದಿದ್ದ ಅವರ ಕಾದಂಬರಿ ವಿಮರ್ಶಾತ್ಮಕ ಮೆಚ್ಚುಗೆಯನ್ನು ಗಳಿಸಿತ್ತು. ಅವರ ಕೃತಿಗಳಲ್ಲಿ ವ್ಯಕ್ತವಾಗುತ್ತಿದ್ದ ಸೋವಿಯತ್ ವಿರೋಧಿ ನಿಲುವು ಮತ್ತು ಕಾಮಪ್ರಚೋದಕತೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅವರಿಗೆ ವ್ಯಾಪಕ ಓದುಗ ಬಳಗವನ್ನು ಸೃಷ್ಟಿ ಮಾಡಿತ್ತು. ಅವರ ಕೊನೆ ಕೃತಿ ಫ್ರೆಂಚ್ ಭಾಷೆಯಲ್ಲಿತ್ತಾದರೂ, ಅದು ಜೆಕ್ ಭಾಷೆಗೆ ಭಾಷಾಂತರಗೊಳ್ಳಲೇ ಇಲ್ಲ. 1975ರಲ್ಲಿ ಕಮ್ಯುನಿಸ್ಟ್ ಆಳ್ವಿಕೆಯ ಜೆಕೊಸ್ಲೊವಾಕಿಯಾದಿಂದ ಹೊರಬಂದಿದ್ದ ಅವರು, ಈ ವರೆಗೆ ಫ್ರಾನ್ಸ್‌ನಲ್ಲೇ ನೆಲೆನಿಂತಿದ್ದರು. 1981ರಲ್ಲಿ ಅವರಿಗೆ ಫ್ರಾನ್ಸ್ ಪೌರತ್ವ ಸಿಕ್ಕಿತ್ತು.



ಮಾನವನ ಪರಿಸ್ಥಿತಿಗೆ ಸಂಬಂಧಿಸಿದ ಕಾದಂಬರಿಗಳಿಗೆ ಅವರು ಹೆಸರಾಗಿದ್ದರು. ಭಿನ್ನಾಭಿಪ್ರಾಯದ ಕಾರಣಕ್ಕೆ ಜೆಕ್ ಪೌರತ್ವ ಕಳೆದುಕೊಂಡಿದ್ದ ಅವರು, ತಮ್ಮ ಕೃತಿಗಳಲ್ಲಿ ಅದರ ಬಗೆಗಿನ ಅಸಮಾಧಾನವನ್ನು ಸದಾ ವ್ಯಕ್ತಪಡಿಸುತ್ತಿದ್ದರು.

ಉಕ್ಕಿ ಹರಿದಳು ಯಮುನೆ ಗಢಿ ಮಾಂಡು ಮುಳುಗಡೆ



ವಾಹನ ದಟ್ಟಣೆ • ಮುಖ್ಯಮಂತ್ರಿ ಕೇಜ್ರಿವಾಲ್ ಸಭೆ, ಪರಿಹಾರ ಕೇಂದ್ರಗಳಿಗೆ ಸಚಿವೆ ಆತಿಶಿ ಭೇಟಿ



ನವದೆಹಲಿಯಲ್ಲಿ ಹರಿಯುವ ಯಮುನಾ ನದಿ ನೀರಿನ ಮಟ್ಟ ಹೆಚ್ಚಳವಾದ ಕಾರಣ ತಗ್ಗುಪ್ರದೇಶದಲ್ಲಿ ವಾಸವಿದ್ದ ಕುಟುಂಬವೊಂದು ಸುರಕ್ಷಿತ ಸ್ಥಳ ಅರಸಿ ಸಾಗಿದ್ದ ವೇಳೆ ಅವರಿದ್ದ ಟ್ರ್ಯಾಕ್ಟರ್ ಪ್ರವಾಹದಲ್ಲಿ ಬುಧವಾರ ಸಿಲುಕಿತ್ತು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಉತ್ತರ ಭಾರತದ ಹಲವೆಡೆ ಬುಧವಾರ ಮಳೆ ಅಬ್ಬರ ಕಡಿಮೆಯಾಗಿತ್ತು. ಆದರೆ, ಕಳೆದ ಕೆಲ ದಿನಗಳಿಂದ ಸುರಿದ ಭಾರಿ ಮಳೆಯಿಂದಾಗಿ ದೆಹಲಿಯಲ್ಲಿ ಯಮುನಾ ನದಿ ಉಕ್ಕಿ ಹರಿಯುತ್ತಿದೆ. ನಾಲ್ಕು ದಶಕಗಳ ನಂತರ ನದಿಯ ನೀರಿನ ಮಟ್ಟ 207.55 ಮೀಟರ್ ಗಡಿ ದಾಟಿದೆ.

ಮುನ್ನೆಚ್ಚರಿಕೆ ಕ್ರಮವಾಗಿ, ಪ್ರವಾಹ ಇರುವ ಪ್ರದೇಶಗಳಲ್ಲಿ ಸಿಆರ್‌ಪಿಸಿ ಸೆಕ್ಷನ್ 144ರಡಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಸುರಕ್ಷಿತ ಜಾಗಗಳಿಗೆ ತೆರಳಬೇಕು ಹಾಗೂ ತಗ್ಗು ಪ್ರದೇಶಗಳ ಮೂಲಕ ಸಂಚರಿಸದಂತೆ ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರವು ಜನರಿಗೆ ಸಲಹೆ ನೀಡಿದೆ. ವಜಿರಾಬಾದ್‌ನ ಸಿಗ್ನೇಚರ್ ಬ್ರಿಜ್ ಬಳಿಯ ಗಢಿ ಮಾಂಡು ಗ್ರಾಮವು ಮುಳುಗಡೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ದೆಹಲಿ ಸಾರಿಗೆ ನಿಗಮದ ಕೇಂದ್ರ ಕಚೇರಿ ಆವರಣದಲ್ಲಿ ನೀರು ಮೂರು ಅಡಿಗಳಷ್ಟು ನೀರು ನಿಂತಿತ್ತು. ನೌಕರರು ನೀರಿನಲ್ಲಿ ಸಾಗಿಯೇ ಕಚೇರಿ ಸೇರಿದ್ದಾರೆ.

ರಸ್ತೆಗಳಲ್ಲಿ ನೀರು ನಿಂತಿದ್ದ ಪರಿಣಾಮ ನಗರದ ಬಹುತೇಕ ಕಡೆ ಸಂಚಾರ ದಟ್ಟಣೆ ಉಂಟಾಗಿತ್ತು. ಕೆಲವಡೆ ರಸ್ತೆಗಳು ಕೊಚ್ಚಿ ಹೋಗಿದ್ದರೆ, ಇನ್ನೂ ಕೆಲವಡೆ ಕನ್ವರ್ ಯಾತ್ರಿಗಳು ಸಾಗಿದ್ದು ಕೂಡ ವಾಹನಗಳ ಸಂಚಾರಕ್ಕೆ ಅಡ್ಡಿಯನ್ನುಂಟು ಮಾಡಿತ್ತು. ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಲು ಕೂಡ ಜನರು ಕಷ್ಟಪಟ್ಟರು.

ಸಚಿವೆ ಆತಿಶಿ ಮಾರ್ಲೆನಾ ಅವರು ಪರಿಹಾರ ಕೇಂದ್ರಗಳಿಗೆ ಭೇಟಿ ನೀಡಿ, ಪ್ರವಾಹ ಹಿನ್ನೆಲೆಯಲ್ಲಿ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ಪಡೆದರು.

ಸಭೆ: ಯಮುನಾ ನದಿ ಪ್ರವಾಹ ಹೆಚ್ಚಳ, ನಗರದ ವಿವಿಧೆಡೆ ನೀರು ನಿಂತು ಉಂಟಾಗಿರುವ ಸಮಸ್ಯೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಅಧಿಕಾರಿಗಳ ಸಭೆ ನಡೆಸಿದರು.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಮಾಚಲ ಪ್ರದೇಶದಿಂದ ಹರಿಯಾಣಕ್ಕೆ ಹರಿಯುವ ನೀರಿನ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿದೆ. ಇದರ ಪರಿಣಾಮ ದೆಹಲಿ ಮೇಲೂ ಆಗಲಿದೆ. ಯಮುನಾ ನದಿಗೆ ಒಳಹರಿವು ಕಡಿಮೆಯಾಗಿ ಪ್ರವಾಹ ಇಳಿಯಲು ಸಮಯ ಹಿಡಿಯಲಿದೆ' ಎಂದರು.

'ಒತ್ತುವರಿ, ಹೂಳು ಕಾರಣ': ನದಿಪಾತ್ರದ ಒತ್ತುವರಿ, ಭಾರಿ ಮಳೆ ಹಾಗೂ ಬಹಳ ವರ್ಷಗಳಿಂದ ಸಂಗ್ರಹವಾಗಿರುವ ಹೂಳಿನಿಂದಾಗಿ ದೆಹಲಿಯಲ್ಲಿ ಯಮುನಾ ನದಿ ಉಕ್ಕಿ ಹರಿಯಲು ಕಾರಣ ಎಂದು ತಜ್ಞರು ಹೇಳಿದ್ದಾರೆ.

'ಹಿಂದಿನ ವರ್ಷಗಳಿಗೆ ಹೋಲಿಸಿದರೆ, ಹರಿಯಾಣದ ಹಥಿನಿಕುಂಡ್ ಬ್ಯಾರೇಜ್‌ನಿಂದ ಬಿಟ್ಟ ನೀರು ಈ ಬಾರಿ ಕಡಿಮೆ ಸಮಯದಲ್ಲಿಯೇ ದೆಹಲಿ ತಲುಪಿದೆ. ಒತ್ತುವರಿ ಹಾಗೂ ಹೂಳು ತುಂಬಿರುವುದೇ ಇದಕ್ಕೆ ಕಾರಣ' ಎಂದು ಕೇಂದ್ರೀಯ ಜಲ ಆಯೋಗದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

- ಅನಗತ್ಯ ಪ್ರವಾಸ ಕೈಬಿಡುವಂತೆ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಜನರಿಗೆ ಮನವಿ ಮಾಡಿದ್ದಾರೆ
- ಹರಿಯಾಣ ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್ ಅವರು ಮಳೆ ಬಾಧಿತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿದ್ದಾರೆ
- ಮಳೆಯಿಂದಾದ ಅವಘಡಗಳಲ್ಲಿ ಮೃತಪಟ್ಟವರ ಕುಟುಂಬಕ್ಕೆ ₹ 4 ಲಕ್ಷ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಖಟ್ಟರ್ ಘೋಷಿಸಿದ್ದಾರೆ
- ಹಿಮಾಚಲ ಪ್ರದೇಶದ ಉನಾದಲ್ಲಿರುವ ಭಾಕ್ರಾ ಅಣೆಕಟ್ಟೆ ಒಳಹರಿವು ಹೆಚ್ಚಿದ್ದರಿಂದ ಗುರುವಾರ ಹೆಚ್ಚುವರಿಯಾಗಿ 16 ಸಾವಿರ ಕ್ಯುಸೆಕ್ ನಷ್ಟು ನೀರನ್ನು ಸಟ್ಲೆಜ್ ನದಿಗೆ ಬಿಡುವುದಾಗಿ ಜಿಲ್ಲಾಧಿಕಾರಿ ರಾಘವ ಶರ್ಮಾ ಹೇಳಿದ್ದಾರೆ

ಕೇಂದ್ರದ ಮಧ್ಯಸ್ಥಿಕೆಗೆ ಕೇಜ್ರಿವಾಲ್ ಆಗ್ರಹ

ನವದೆಹಲಿ (ಪಿಟಿಐ): ಯಮುನಾ ನದಿಯಲ್ಲಿ ನೀರಿನ ಹರಿವು ಸಾರ್ವಕಾಲಿಕ ಗರಿಷ್ಠ ಮಟ್ಟ ಮೀರಿದ್ದು, (207.55 ಮೀಟರ್) ಇದನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ತುರ್ತಾಗಿ ಮಧ್ಯಪ್ರವೇಶಿಸಬೇಕು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬುಧವಾರ ಆಗ್ರಹಿಸಿದ್ದಾರೆ.



ಅರವಿಂದ ಕೇಜ್ರಿವಾಲ್

'1978ರಲ್ಲಿ 207.49 ಮೀಟರ್‌ನಷ್ಟು ಹರಿದಿದ್ದೆ ಇದೂವರೆಗಿನ ದಾಖಲೆ. ಕೇಂದ್ರ ಜಲ ಆಯೋಗ ಯಮುನೆಯ ನೀರಿನ ಮಟ್ಟ 207.72 ಮೀಟರ್ ಹರಿವಿಗೆ ತಲುಪಬಹುದು ಎಂದು ಮುನ್ಸೂಚನೆ ನೀಡಿರುವುದು ದೆಹಲಿಯ ಜನರಿಗೆ ಒಳ್ಳೆಯ ಸುದ್ದಿಯಲ್ಲ' ಎಂದು ಟ್ವಿಟರ್‌ನಲ್ಲಿ ಉಲ್ಲೇಖಿಸಿದ್ದಾರೆ.

'ದೆಹಲಿಯಲ್ಲಿ ಎರಡು ದಿನದಿಂದಲೂ ಮಳೆಯಾಗಿಲ್ಲ. ಹರಿಯಾಣದ ಹಥಿನೀಕುಂಡ್ ಬ್ಯಾರೇಜ್‌ನಿಂದ ಅಸಹಜವಾಗಿ ಹೆಚ್ಚು ನೀರನ್ನು ಬಿಡುಗಡೆ ಮಾಡುತ್ತಿರುವುದರಿಂದ ಯಮುನೆಯ ಮಟ್ಟ ಹೆಚ್ಚಿದೆ. ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ನೀರಿನ ಮಟ್ಟ ಹೆಚ್ಚಾಗದಂತೆ ನೋಡಿಕೊಳ್ಳಬೇಕು' ಎಂದು ಕೇಜ್ರಿವಾಲ್ ಒತ್ತಾಯಿಸಿದ್ದಾರೆ.

ಉಕ್ಕಿ ಹರಿಯುತ್ತಿರುವ ಯಮುನಾ ನದಿ ನೋಡಲು, ದಂಡೆಯಲ್ಲಿ ನಿಂತು ಸೆಲ್ಫಿ ತೆಗೆದುಕೊಳ್ಳಲು ಕೆಲವರು ಮುಂದಾಗುತ್ತಿದ್ದು, ಕೂಡಲೇ ಇಂತಹ ದುಸ್ಸಾಹಸ ನಿಲ್ಲಿಸಬೇಕು

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ಉತ್ತರ ಪ್ರದೇಶ: 18ರವರೆಗೆ ಮಳೆ

ನವದೆಹಲಿ(ಪಿಟಿಐ): ಉತ್ತರ ಪ್ರದೇಶದಲ್ಲಿ ಮಳೆ ಮುಂದುವರಿದಿದೆ. ಜುಲೈ 18ರ ವರೆಗೆ ಉತ್ತರ ಪ್ರದೇಶದಲ್ಲಿ ಮಳೆಯಾಗಲಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ರಾಜ್ಯದ 58 ಜಿಲ್ಲೆಗಳಲ್ಲಿ ಗುರುವಾರ ಯಲ್ಲೊ ಅಲರ್ಟ್ ಘೋಷಿಸಿದೆ.

ರಾತ್ರಿ 8ಕ್ಕೆ ಕೊನೆಗೊಂಡ ಹಿಂದಿನ 24 ಗಂಟೆಯಲ್ಲಿ ಮಳೆ ಸಂಬಂಧಿತ ಅವಘಡಗಳಲ್ಲಿ 12 ಜನರು ಮೃತಪಟ್ಟಿದ್ದಾರೆ ಎಂದು ಉತ್ತರ ಪ್ರದೇಶ ಪರಿಹಾರ ಆಯುಕ್ತರು ಬುಧವಾರ ತಿಳಿಸಿದ್ದಾರೆ.

ಪಂಜಾಬ್‌ನಲ್ಲಿ ಕಳೆದ ಮೂರು ದಿನಗಳಲ್ಲಿ ಸುರಿದ ಭಾರಿ ಮಳೆ ಪರಿಣಾಮ ವಸತಿ ಪ್ರದೇಶಗಳಲ್ಲಿ ನೀರು ನುಗ್ಗಿ ಜನರು ಪರದಾಡಿದ್ದಾರೆ. 10 ಸಾವಿರ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಳೆ ಸಂಬಂಧಿತ ಅವಘಡಗಳಿಂದಾಗಿ ಪಂಜಾಬ್‌ನಲ್ಲಿ ಮೃತಪಟ್ಟವರ ಸಂಖ್ಯೆ ಬುಧವಾರ 11ಕ್ಕೆ ಏರಿಕೆಯಾಗಿದ್ದರೆ, ಹರಿಯಾಣದಲ್ಲಿ ಮೃತರ ಸಂಖ್ಯೆ 7ಕ್ಕೆ ಏರಿದೆ ಎಂದೂ ತಿಳಿಸಿದ್ದಾರೆ.



ನವದೆಹಲಿಯಲ್ಲಿ ಹರಿಯುವ ಯಮುನಾ ನದಿ ನೀರಿನ ಮಟ್ಟ ಹೆಚ್ಚಳವಾದ ಕಾರಣ ತಗ್ಗುಪ್ರದೇಶದಲ್ಲಿ ವಾಸವಿದ್ದ ಜನರು ಬುಧವಾರ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಂಡರು

ರಾಹುಲ್ ಬೆಂಬಲಿಸಿ 'ಮೌನ ಪ್ರತಿಭಟನೆ'

ನವದೆಹಲಿ(ಪಿಟಿಐ): ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿದ ವಿಚಾರವಾಗಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ವಿವಿಧ ರಾಜ್ಯಗಳಲ್ಲಿ ಬುಧವಾರ ಮೌನ ಪ್ರತಿಭಟನೆ ನಡೆಸಿದರು.

ತಿರುವನಂತಪುರದಲ್ಲಿ ಗಾಂಧಿ ಪಾರ್ಕ್‌ನಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಮಾನನಷ್ಟ ಮೊಕದ್ದಮೆಯಲ್ಲಿ ರಾಹುಲ್ ಗಾಂಧಿ ಅವರಿಗೆ ತಪ್ಪಾಗಿ ಶಿಕ್ಷೆ ವಿಧಿಸಲಾಗಿದೆ. ಅವರನ್ನು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳಿಸಿದ್ದು ಕೂಡ ತಪ್ಪು ಎಂದು ಆರೋಪಿಸಿದರು.

ಕೆಪಿಸಿಸಿ ಅಧ್ಯಕ್ಷ ಕೆ.ಸುಧಾಕರನ್, ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ನೇತೃತ್ವ ವಹಿಸಿದ್ದರು.

ಭೋಪಾಲ್‌ನಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಕಮಲ್ ನಾಥ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. 'ಪ್ರಜಾಪ್ರಭುತ್ವವನ್ನು ಅನರ್ಹಗೊಳಿಸಲಾಗಿದೆ' ಹೆಸರಿನಲ್ಲಿ ಕಾರ್ಯಕರ್ತರು ಪ್ರತಿಭಟಿಸಿದರು.

ರಾಜಸ್ಥಾನ, ದೆಹಲಿ, ಪಶ್ಚಿಮ ಬಂಗಾಳ, ಛತ್ತೀಸಗಢ, ಗುಜರಾತ್, ಉತ್ತರ ಪ್ರದೇಶ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಕೂಡ ಪಕ್ಷದ ಕಾರ್ಯಕರ್ತರು ಮೌನ ಪ್ರತಿಭಟನೆ ನಡೆಸಿದರು.

'ಶೀಘ್ರ ಮೇಲ್ಮನವಿ': 'ಮಾನನಷ್ಟ ಮೊಕದ್ದಮೆಯಲ್ಲಿ ಸೂರತ್ ಕೋರ್ಟ್ ನೀಡಿರುವ ಶಿಕ್ಷೆಗೆ ತಡೆ ನೀಡುವಂತೆ ಕೋರಿ ರಾಹುಲ್ ಗಾಂಧಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿ ಗುಜರಾತ್ ಹೈಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಈ ವಾರದೊಳಗೆ ಮೇಲ್ಮನವಿ ಸಲ್ಲಿಸಲಾಗುವುದು' ಎಂದು ಕಾಂಗ್ರೆಸ್ ವಕ್ತಾರ ಅಭಿಷೇಕ್ ಸಿಂಘ್ವಿ ನವದೆಹಲಿಯಲ್ಲಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು,'ಮೇಲ್ಮನವಿ ಸಲ್ಲಿಸುವ ಸಂಬಂಧ ಸಿದ್ಧತೆ ನಡೆದಿದೆ. ಆದಷ್ಟು ಬೇಗನೇ ಸಲ್ಲಿಸಲಾಗುವುದು' ಎಂದರು.



ರಾಹುಲ್ ಗಾಂಧಿ ಬೆಂಬಲಿಸಿ ಉತ್ತರ ಪ್ರದೇಶ ರಾಜಧಾನಿ ಲಖನೌದಲ್ಲಿ ಬುಧವಾರ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು 'ಮೌನ ಪ್ರತಿಭಟನೆ' ನಡೆಸಿದರು —ಪಿಟಿಐ ಚಿತ್ರ

ಸಿಎಂ, ಡಿಸಿಎಂ ಮೌನ ಧರಣಿ

ಒಂದನೇ ಪುಟದಿಂದ...

ದೇಶದ ಬ್ಯಾಂಕಿಂಗ್ ವ್ಯವಸ್ಥೆ ಹಾಳುಮಾಡುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ರಾಹುಲ್ ಹೋರಾಟ ಮಾಡುತ್ತಿದ್ದಾರೆ. ಕೋಲಾರದಲ್ಲಿ ಭಾಷಣ ಮಾಡುವಾಗ ನೀರವ್ ಮೋದಿ ಸಾಲ ಪಡೆದು ದೇಶ ಬಿಟ್ಟು ಹೋಗಿದ್ದ ಕುರಿತು ಪ್ರಸ್ತಾಪಿಸಿದ್ದರು. ಹಣ ದೋಚಿದ ಆರೋಪಿಗಳನ್ನು ಪರಾರಿಯಾಗಲು ಅವಕಾಶ ಮಾಡಿಕೊಟ್ಟದ್ದು ಏಕೆ ಎಂದು ಪ್ರಶ್ನಿಸಿದ್ದರು. ಅದು ತಪ್ಪೇ ಎಂದು ಸುರ್ಜೇವಾಲಾ ಪ್ರಶ್ನಿಸಿದರು.

ಉದ್ಯಮಿ ಗೌತಮ್ ಅದಾನಿ ಅವರ ಬೇನಾಮಿ ಕಂಪನಿಗೆ ₹ 22 ಸಾವಿರ ಕೋಟಿ ಕೊಟ್ಟಿದ್ದು ಏಕೆ? ಅದು ಯಾರ ಹಣ ಎಂದು ಸಂಸತ್ತಿನಲ್ಲಿ ರಾಹುಲ್ ಗಾಂಧಿ ಪ್ರಶ್ನಿಸಿದ್ದರು. ಈ ಪ್ರಶ್ನೆಗೆ ಉತ್ತರವೇ ಸಿಗಲಿಲ್ಲ. ಅವರ ಧ್ವನಿ ಅಡಗಿಸಲು ಷಡ್ಯಂತ್ರ ರೂಪಿಸಿದ್ದಾರೆ ಎಂದೂ ದೂರಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಹುಲ್ ಅವರ ಸಂಸತ್ ಸದಸ್ಯತ್ವವನ್ನು ಕುತಂತ್ರದಿಂದ ಅನರ್ಹಗೊಳಿಸಲಾಗಿದೆ. ಬಿಜೆಪಿ ಸರ್ಕಾರ 9 ವರ್ಷಗಳಿಂದ ನೆಹರೂ ಕುಟುಂಬದ ಮೇಲೆ ನಿರಂತರ ಗದಾಪ್ರಹಾರ ಮಾಡುತ್ತಿದೆ. ಆರ್‌ಎಸ್‌ಎಸ್ ಜತೆಗೂಡಿ ನಿರಂತರವಾಗಿ ಅಪಪ್ರಚಾರ ಮಾಡುತ್ತಾ ಬಂದಿದೆ. 2024ರ ಚುನಾವಣೆಯಲ್ಲಿ ತಮ್ಮ ಸ್ಥಾನ ಉಳಿಸಿಕೊಳ್ಳಲು ಕಷ್ಟವಾಗಲಿದೆ ಎಂಬ ದುರಾಲೋಚನಯಿಂದ ಕಾಂಗ್ರೆಸ್ ನಾಯಕರ ರಾಜಕೀಯ ಜೀವನ ಮುಗಿಸಲು ಷಡ್ಯಂತ್ರ ಮಾಡುತ್ತಿದ್ದಾರೆ. ಭಾರತ ಜೋಡೊ ಯಾತ್ರೆ ಬಳಿಕ ರಾಹುಲ್ ಗಾಂಧಿಗೆ ದೇಶದ ಜನರಿಂದ ವ್ಯಕ್ತವಾದ ಭಾರಿ ಬೆಂಬಲ ಸಹಿಸಲಾಗದೆ ಕುತಂತ್ರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸಚಿವರಾದ ಜಿ.ಪರಮೇಶ್ವರ, ಕೆ.ಎಚ್.ಮುನಿಯಪ್ಪ, ರಾಮಲಿಂಗಾರೆಡ್ಡಿ, ಬೋಸರಾಜು, ಎಚ್.ಸಿ.ಮಹದೇವಪ್ಪ,ಎಂ.ಸಿ. ಸುಧಾಕರ್, ವಿಧಾನ ಪರಿಷತ್ತಿನ ಮುಖ್ಯ ಸಚೇತಕ ಸಲೀಂ ಅಹ್ಮದ್ ಮತ್ತಿತರರು ಇದ್ದರು.

'ರಾಜ್ಯದಲ್ಲಿ ಈಗ ಜಂಗಲ್ ರಾಜ್'

ಒಂದನೇ ಪುಟದಿಂದ...

ರಾಜ್ಯಪಾಲರ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, ರಾಜ್ಯದಲ್ಲಿ ಸಾಮಾನ್ಯ ಜನರಿಗೆ ರಕ್ಷಣೆ ಇಲ್ಲ. ಕೊಲೆ, ಸುಲಿಗೆ ಹೆಚ್ಚಾಗಿದ್ದು, ಕಾನೂನು ಸುವ್ಯವಸ್ಥೆ ಕುಸಿದು ಬಿದ್ದರೂ ಸರ್ಕಾರಕ್ಕೆ ಏನೂ ಅನ್ನಿಸುತ್ತಿಲ್ಲ ಎಂದು ಕಿಡಿಕಾರಿದರು.

'ಬಿಜೆಪಿ ಕಾರ್ಯಕರ್ತರ ಹತ್ಯೆಯಾಗಿದೆ. ಕಾರ್ಯಕರ್ತರ ಮೇಲೆ ಹಲ್ಲೆ ನಡೆಯುತ್ತಿದೆ. ದ್ವೇಷಕ್ಕೆ ನಮ್ಮ ಕಾರ್ಯಕರ್ತರ ಮೇಲೆ ಕೇಸುಗಳನ್ನು ಹಾಕುತ್ತಿದ್ದಾರೆ. ಜನಸಾಮಾನ್ಯರ ಕೊಲೆಗಳು ಆಗುತ್ತಿವೆ. ಐಟಿ ಕಂಪನಿಯ ಇಬ್ಬರು ಮುಖ್ಯಸ್ಥರನ್ನು ಕೊಲೆ ಮಾಡಲಾಗಿದೆ. ಅಪರಾಧ ಕೃತ್ಯ ಎಸಗುವವರಿಗೆ ಭೀತಿಯೇ ಇಲ್ಲ. ಆಡಳಿತದಲ್ಲಿರುವ ವರಿಂದ ರಕ್ಷಣೆ ಸಿಗುತ್ತದೆ. ಎಲ್ಲ ಸಮಾಜಘಾತುಕರು ಸಕ್ರಿಯರಾಗಿದ್ದಾರೆ' ಎಂದರು.

'ಈವರೆಗೆ ಕಲಬುರಗಿ, ಜೇವರ್ಗಿ, ಬೆಳಗಾವಿ, ಸಕಲೇಶಪುರ, ಹಾಸನ, ಮೈಸೂರು, ಚಾಮರಾಜನಗರ ಮತ್ತು ನಂಜನಗೂಡಿನಲ್ಲಿ ಆಗಿರುವ ದುರ್ಘಟನೆಗಳ ವಿವರವನ್ನು ರಾಜ್ಯಪಾಲರಿಗೆ ನೀಡಿದ್ದೇವೆ. ತಮ್ಮ ಅಧಿಕಾರ ಬಳಸಿ ಡಿಜಿಪಿ, ಸರ್ಕಾರದ ಮುಖ್ಯಕಾರ್ಯದರ್ಶಿಯವರನ್ನು ಕರೆಸಿಕೊಂಡು ಕಾನೂನು ಸುವ್ಯವಸ್ಥೆ ಮರಳಿ ಸ್ಥಾಪಿಸಬೇಕು ಮತ್ತು ಜೈನ ಮುನಿಗಳ ಹತ್ಯೆಯ ತನಿಖೆ ಸಿಬಿಐಗೆ ಒಪ್ಪಿಸಲು ನಿರ್ದೇಶನ ನೀಡುವಂತೆ ಮನವಿ ಮಾಡಿದ್ದೇವೆ' ಎಂದು ಬೊಮ್ಮಾಯಿ ಹೇಳಿದರು.

ಚುನಾವಣೆ: ಅಸಿಂಧುಗೊಳಿಸಲು ಕೋರಿದ್ದ ಅರ್ಜಿ ವಜಾ

ಕೋಲ್ಕತ್ತ (ಪಿಟಿಐ): ಸಂವಿಧಾನದ ಮೂಲ ತತ್ವಗಳು ಪಾಲನೆ ಆಗದಿರುವ ಹಾಗೂ ಮುಕ್ತ ಮತ್ತು ನ್ಯಾಯ ಸಮ್ಮತ ಚುನಾವಣೆ ನಡೆಯದಿರುವ ಕಾರಣ ಪಶ್ಚಿಮ ಬಂಗಾಳದ 2023ರ ಪಂಚಾಯತ್ ಚುನಾವಣೆಯನ್ನು ಅಸಿಂಧುಗೊಳಿಸಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಕಲ್ಕತ್ತ ಹೈಕೋರ್ಟ್ ಬುಧವಾರ ವಜಾಗೊಳಿಸಿದೆ.

ರಾಜ್ಯ ಚುನಾವಣಾ ಆಯುಕ್ತರನ್ನು ಹುದ್ದೆಯಿಂದ ತೆಗೆಯುವಂತೆ ಸಲ್ಲಿಕೆಯಾಗಿದ್ದ ಕೋರಿಕೆಯನ್ನೂ ಹೈಕೋರ್ಟ್ ಇದೇ ವೇಳೆ ತಿರಸ್ಕರಿಸಿತು. ಇದು ಸ್ವತಂತ್ರ ಸಾಂವಿಧಾನಿಕ ಸಂಸ್ಥೆ ಆಗಿರುವುದರಿಂದ ಈ ರೀತಿಯ ಕೋರಿಕೆಗಳನ್ನು ನಿರ್ವಹಿಸಲು ಸಾಧ್ಯವಿಲ್ಲ ಎಂದು ಹೇಳಿತು.

ಮುಖ್ಯ ನ್ಯಾಯಮೂರ್ತಿ ಟಿ.ಎಸ್.ಶಿವಜ್ಞಾನಂ ಮತ್ತು ಹಿರಣ್ಮಯ್ ಭಟ್ಟಾಚಾರ್ಯ ಅವರ ಪೀಠವು ಈ ಕುರಿತ ರಿಟ್ ಅರ್ಜಿಗಳನ್ನು ವಜಾಗೊಳಿಸಿತು. ಇದೇ ರೀತಿ ಎರಡು ಅರ್ಜಿಗಳನ್ನು ಪೀಠ ಈ ಹಿಂದೆ ವಜಾಗೊಳಿಸಿತ್ತು.

ಈ ರೀತಿಯ ಅರ್ಜಿಗಳನ್ನು ಈಗಾಗಲೇ ಇತ್ಯರ್ಥಪಡಿಸ ಲಾಗಿದ್ದು, ಅದನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದೆ ಎಂದು ಪೀಠ ತಿಳಿಸಿದೆ.

ನಾಮಪತ್ರ ಸಲ್ಲಿಕೆ ಕೊನೆಗೊಳ್ಳುವ 2 ದಿನಗಳಲ್ಲಿ ಆಡಳಿತ ಪಕ್ಷದ ಅಭ್ಯರ್ಥಿಗಳಿಂದ 76 ಸಾವಿರ ನಾಮಪತ್ರ ಸಲ್ಲಿಕೆಯಾಗಿವೆ. ಭಾರತದಲ್ಲಿಯೇ ಇಲ್ಲದ ವ್ಯಕ್ತಿಯೊಬ್ಬರೂ ನಾಮಪತ್ರ ಸಲ್ಲಿಸಿದ್ದಾರೆ. ಆದ್ದರಿಂದ ಈ ಕುರಿತು ಸ್ವತಂತ್ರ ಸಂಸ್ಥೆಯೊಂದರಿಂದ ತನಿಖೆಗೆ ನಿರ್ದೇಶಿಸುವಂತೆ ಅರ್ಜಿಯಲ್ಲಿ ಕೋರಲಾಗಿತ್ತು.

'ಸುಪ್ರೀಂ'ಗೆ ಇಬ್ಬರು ನ್ಯಾಯಮೂರ್ತಿಗಳು

ನವದೆಹಲಿ: ತೆಲಂಗಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಮತ್ತು ಕೇರಳ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿ ವೆಂಕಟನಾರಾಯಣ ಭಟ್ಟಿ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳನ್ನಾಗಿ ಕೇಂದ್ರ ಸರ್ಕಾರ ಬುಧವಾರ ನೇಮಕ ಮಾಡಿದೆ.

ಜುಲೈ 5 ರಂದು ಕೊಲಿಜಿಯಂ ಮಾಡಿದ್ದ ಶಿಫಾರಿಸಿನ ಆಧಾರದ ಮೇಲೆ ಕೇಂದ್ರ ಸರ್ಕಾರ ಈ ಇಬ್ಬರ ನೇಮಕವನ್ನು ಅಂತಿಮಗೊಳಿಸಿದೆ.

ಭುಯಾನ್ ಆಂಧ್ರಪ್ರದೇಶದವರು. 2011ರಲ್ಲಿ ಗುವಾಹಟಿ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕವಾಗಿದ್ದರು. ವೆಂಕಟನಾರಾಯಣ ಭಟ್ಟಿ ಅವರು 2013ರಲ್ಲಿ ಆಂಧ್ರ ಪ್ರದೇಶ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕವಾಗಿದ್ದರು. ಈ ಇಬ್ಬರ ನೇಮಕದೊಂದಿಗೆ, ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಸಂಖ್ಯೆ 33ಕ್ಕೆ ಏರಿಕೆಯಾಗಿದೆ.

ಎಸ್‌ಡಿಆರ್‌ಎಫ್: ₹348 ಕೋಟಿ ರಾಜ್ಯಕ್ಕೆ ಬಿಡುಗಡೆ

ಒಂದನೇ ಪುಟದಿಂದ...

ಮಾರ್ಗಸೂಚಿಗಳ ಪ್ರಕಾರ, ಹಿಂದಿನ ಕಂತಿನಲ್ಲಿ ಬಿಡುಗಡೆಯಾದ ಮೊತ್ತದ ಬಳಕೆಯ ಪ್ರಮಾಣಪತ್ರದ ಸ್ವೀಕೃತಿ ಮತ್ತು ಎಸ್‌ಡಿಆರ್‌ಎಫ್‌ನಿಂದ ಕೈಗೊಂಡ ಚಟುವಟಿಕೆಗಳ ಕುರಿತು ರಾಜ್ಯ ಸರ್ಕಾರದಿಂದ ವರದಿ ಸ್ವೀಕರಿಸಿದ ನಂತರ ಹಣ ಬಿಡುಗಡೆ ಮಾಡಲಾಗುತ್ತದೆ. ಆದರೆ, ತುರ್ತು ದೃಷ್ಟಿಯಿಂದ ಈ ಬಾರಿ ಹಣ ಬಿಡುಗಡೆ ಮಾಡುವಾಗ ಮಾರ್ಗಸೂಚಿ ಸಡಿಲಿಸಲಾಗಿದೆ.

ಚಂಡಮಾರುತ, ಬರ, ಭೂಕಂಪ, ಬೆಂಕಿ, ಪ್ರವಾಹ, ಸುನಾಮಿ, ಆಲಿಕಲ್ಲು, ಭೂಕುಸಿತ, ಹಿಮಕುಸಿತಗಳಂತಹ ಅಧಿಸೂಚಿತ ವಿಪತ್ತುಗಳ ಸಂತ್ರಸ್ತರಿಗೆ ತಕ್ಷಣದ ಪರಿಹಾರ ಒದಗಿಸಲು ಎಸ್‌ಡಿಆರ್‌ಎಫ್ ಹಣ ಬಳಸಲಾಗುತ್ತದೆ.

15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಕೇಂದ್ರ ಸರ್ಕಾರವು ಎಸ್‌ಡಿಆರ್‌ಎಫ್‌ಗೆ 2021–22ರಿಂದ 2025–26ರ ಅವಧಿಗೆ ₹1,28,122 ಕೋಟಿ ಹಂಚಿಕೆ ಮಾಡಿದೆ. ಇದರಲ್ಲಿ ಕೇಂದ್ರ ಸರ್ಕಾರದ ಪಾಲು ₹98,080 ಕೋಟಿ. ಕೇಂದ್ರ ಸರ್ಕಾರ ಬುಧವಾರದ ವರೆಗೆ ₹42,366 ಕೋಟಿ ಬಿಡುಗಡೆ ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರೊ.ಜೋಸೆಫ್ ಹೇಳಿಕೆ

'ಸೋಲು ಇದ್ದದ್ದೇ, ಹೋರಾಟ ನಿಲ್ಲದು'

ಕೊಚ್ಚಿ(ಪಿಟಿಐ): 'ಯಾವುದೇ ಹೋರಾಟದಲ್ಲಿ ಸೋಲು ಇದ್ದದ್ದೇ. ನಾನು ಗೆದ್ದಿರುವೆ ಎಂದು ನನ್ನಂತೆ ಹೇಳುವವರಿಗೂ ಸೋಲುಂಟಾಗುತ್ತದೆ. ಆದರೆ, ನಾನು ಹೋರಾಟ ನಿಲ್ಲಿಸುವುದಿಲ್ಲ' ಎಂದು ಪ್ರೊ. ಟಿ.ಜೆ.ಜೋಸೆಫ್ ಬುಧವಾರ ಹೇಳಿದರು.



ಟಿ.ಜೆ.ಜೋಸೆಫ್

ಸದ್ಯ ನಿಷೇಧಿಸಲಾಗಿರುವ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ(ಪಿಎಫ್ಐ)ಕ್ಕೆ ಸೇರಿದವರು ಎನ್ನಲಾದ ಕಾರ್ಯಕರ್ತರು 2010ರ ಜುಲೈ 4ರಂದು ಜೋಸೆಫ್ ಅವರ ಬಲ ಮುಂಗೈಯನ್ನು ಕತ್ತರಿಸಿದ್ದರು. ಆರೋಪಿಗಳ ಪೈಕಿ ಆರು ಜನರಿಗೆ ಇಲ್ಲಿನ ವಿಶೇಷ ಎನ್‌ಐಎ ನ್ಯಾಯಾಲಯ ಶಿಕ್ಷೆ ವಿಧಿಸಿದ ಹಿನ್ನೆಲೆಯಲ್ಲಿ ಅವರು ಈ ರೀತಿ ಪ್ರತಿಕ್ರಿಯಿಸಿದ್ದಾರೆ.

ಪ್ರಕರಣ ಕುರಿತು ಎರಡನೇ ಹಂತದ ವಿಚಾರಣೆಯಲ್ಲಿ ಇತರ ಐವರು ಆರೋಪಿಗಳನ್ನು ಖುಲಾಸೆ ಮಾಡಿದೆ.

ಮೊದಲ ಹಂತದ ವಿಚಾರಣೆ ನಂತರ 13 ಜನರಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿತ್ತು. ಯುಎಪಿಎ, ಸ್ಫೋಟಕ ವಸ್ತುಗಳ ಕಾಯ್ದೆ ಮತ್ತು ಐಪಿಸಿಯ ವಿವಿಧ ಸೆಕ್ಷನ್‌ಗಳಡಿ ಶಿಕ್ಷೆ ವಿಧಿಸಲಾಗಿತ್ತು.

'ನನ್ನ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಯಾವುದೇ ದ್ವೇಷ ಭಾವನೆ ಇಲ್ಲ. ಆದರೆ, ಆ ಘಟನೆಯಿಂದ ಜೀವನದಲ್ಲಿ ಬದಲಾವಣೆಯಾಗಿದೆ. ಹಾನಿಯೂ ಆಗಿದೆ' ಎಂದರು.

'ಶಿಕ್ಷೆ ವಿಧಿಸುವುದರಿಂದ ಸಂತ್ರಸ್ತನಿಗೆ ನ್ಯಾಯ ಸಿಗುತ್ತದೆ ಎಂಬ ನಂಬಿಕೆ ನನಗಿಲ್ಲ. ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಿರುವ ಕಾರಣ ನನ್ನ ನಿಲುವಿನಲ್ಲಿ ಬದಲಾವಣೆ ಇಲ್ಲ' ಎಂದು ಪ್ರತಿಕ್ರಿಯಿಸಿದರು.

'ಈ ಪ್ರಕರಣದಲ್ಲಿ ಸಿಕ್ಕಿ ಬಿದ್ದು, ಶಿಕ್ಷೆಗೆ ಗುರಿಯಾದವರು ಮತ್ತೊಬ್ಬರ ಕೈಯಲ್ಲಿರುವ ಅಸ್ತ್ರಗಳಿದ್ದಂತೆ. ನನ್ನ ಮೇಲೆ ದಾಳಿಯನ್ನು ಹೆಣೆದ ನಿಜವಾದ ದೋಷಿಗಳು ಇನ್ನೂ ಹೊರಗಡೆಯೇ ಇದ್ದಾರೆ. ಇಂಥವರ ವಿರುದ್ಧ ನನ್ನ ಹೋರಾಟ ಮುಂದುವರಿಯಲಿದೆ' ಎಂದು ಜೋಸೆಫ್ ಹೇಳಿದರು.

'ಈ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾದವರು ತಮ್ಮ ನಂಬಿಕೆಗಳ ಸಂತ್ರಸ್ತರೇ ಆಗಿದ್ದಾರೆ. ಈ ನಂಬಿಕೆ ವ್ಯವಸ್ಥೆ ಬದಲಾಗದೇ ಹೋದರೆ ಭವಿಷ್ಯದಲ್ಲಿ ಇಂಥ ಘಟನೆಗಳು ಮತ್ತೆ ಸಂಭವಿಸಬಹುದು' ಎಂದರು.

'ನಿಮ್ಮ ಮುಂಗೈಯನ್ನು ಕತ್ತರಿಸಿದ್ದ, ಮುಖ್ಯ ಆರೋಪಿ ಸಾವದ್ ಇನ್ನೂ ತಲೆಮರೆಸಿಕೊಂಡಿರುವುದರಿಂದ ನಿಮಗೆ ಭಯವಾಗುವುದಿಲ್ಲವೇ' ಎಂಬ ಪತ್ರಕರ್ತರ ಪ್ರಶ್ನೆಗೆ 'ನನಗೆ ಭಯ ಇಲ್ಲ. ನಾನು ನನ್ನ ನಂಬಿಕೆ ಅನುಸಾರ ಬದುಕಿರುವೆ, ಮುಂದೆಯೂ ಬದುಕುವೆ. ಆರೋಪಿಯನ್ನು ಇನ್ನೂ ಬಂಧಿಸಿಲ್ಲ ಅಂದರೆ, ಅದು ಈ ವ್ಯವಸ್ಥೆಯ ವೈಫಲ್ಯ ತೋರಿಸುತ್ತದೆ' ಎಂದರು.

ಘಟನೆ: ಪ್ರೊ.ಜೋಸೆಫ್ ಅವರು ಇಡುಕ್ಕಿ ಜಿಲ್ಲೆಯ ತೋಡುಪುಳದಲ್ಲಿರುವ ನ್ಯೂಮನ್ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. 2010ರ ಜುಲೈ 4ರಂದು ಅವರು ಎರ್ನಾಕುಲಂ ಜಿಲ್ಲೆಯ ಮುವತ್ತುಪುಳದಲ್ಲಿರುವ ಚರ್ಚ್‌ನಲ್ಲಿ ಭಾನುವಾರದ ಸಾಮೂಹಿಕ ಪ್ರಾರ್ಥನೆಯಲ್ಲಿ ಕುಟುಂಬದೊಂದಿಗೆ ಪಾಲ್ಗೊಂಡಿದ್ದರು.

ಪ್ರಾರ್ಥನೆ ಮುಗಿಸಿ ಮನೆಗೆ ಮರಳುವಾಗ ಏಳು ಜನರಿದ್ದ ಗುಂಪು ವಾಹನದಿಂದ ಅವರನ್ನು ಹೊರಗೆಳೆದು, ಬಲ ಮುಂಗೈಯನ್ನು ಕತ್ತರಿಸಿತ್ತು. ನಂತರ ಅವರು ಉದ್ಯೋಗ ಕಳೆದುಕೊಂಡಿದ್ದರು. ಅವರ ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದರು.

'ಜೋಸೆಫ್ ಸಿದ್ಧಪಡಿಸಿದ್ದ ಪ್ರಶ್ನೆಪತ್ರಿಕೆಯಲ್ಲಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಅಂಶಗಳಿದ್ದವು ಎಂಬ ಕಾರಣಕ್ಕೆ ಆರೋಪಿ ಅವರ ಹತ್ಯೆಗೆ ಮುಂದಾಗಿದ್ದ' ಎಂದು ಪೊಲೀಸರು ಹೇಳಿದ್ದರು.

ಗುಂಡಿಕ್ಕಿ ಆರ್‌ಎಸ್‌ಎಸ್ ಮುಖಂಡನ ಹತ್ಯೆ

ಧನಬಾದ್, ಜಾರ್ಖಂಡ್ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಧನ್‌ಬಾದ್ ಜಿಲ್ಲೆಯ ಸಂಪರ್ಕ ಪ್ರಮುಖ್ ಶಂಕರ್ ಪ್ರಸಾದ್ (55) ಅವರನ್ನು ಅಪರಿಚಿತ ದುಷ್ಕರ್ಮಿಗಳು ಮಂಗಳವಾರ ರಾತ್ರಿ ಡುಮ ಗ್ರಾಮದಲ್ಲಿ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.


ಪ್ರಸಾದ್ ಮನೆಯಿಂದ 500 ಮೀಟರ್ ದೂರದಲ್ಲೇ ಬುಧವಾರ ಬೆಳಿಗ್ಗೆ ಅವರ ಮೃತದೇಹ ಬುಲೆಟ್ ಜೊತೆಗೆ ಪತ್ತೆಯಾಗಿದೆ ಎಂದು ಪೂರ್ವ ಟುಂಡಿ ಪೊಲೀಸ್ ಠಾಣಾಧಿಕಾರಿ ಕೃಷ್ಣಕುಮಾರ್ ಹೇಳಿದ್ದಾರೆ.

ಪೂರ್ವ ಟುಂಡಿಯ ಬ್ಲಾಕ್ ತೋಟಗಾರಿಕೆ ಅಧಿಕಾರಿಯಾಗಿದ್ದ ಪ್ರಸಾದ್ ಅವರಿಗೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ವನವಾಸಿ ಕಲ್ಯಾಣ ಕೇಂದ್ರದ ಸದಸ್ಯರೂ ಆಗಿದ್ದ ಇವರೊಟ್ಟಿಗೆ ಹಲವಾರು ಕೃಷಿ ಮಿತ್ರರು ಕೆಲಸ ಮಾಡುತ್ತಿದ್ದರು ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

'ಗ್ರಾಮದಲ್ಲಿ ಹೊಂದಿದ್ದ ಜಮೀನಿಗೆ ಸಂಬಂಧಿಸಿದ ವ್ಯಾಜ್ಯವಿತ್ತು. ಠಾಣೆಯಲ್ಲಿ ದೂರು ಸಹ ದಾಖಲಾಗಿತ್ತು' ಎಂದು ಕುಟುಂಬದವರು ಹೇಳಿಕೆ ನೀಡಿದ್ದಾರೆ.

ವಿಂಬಲ್ಡನ್: ನೇರ ಸೆಟ್‌ಗಳಿಂದ ಗೆದ್ದ ಸಬಲೆಂಕಾ ಸೆಮಿಗೆ, ರಿಬಾಕಿನಾಗೆ ಆಘಾತ

ಸೇಡು ತೀರಿಸಿಕೊಂಡ ಜೇಬರ್



ಗೆಲುವಿನ ಸಂಭ್ರಮದಲ್ಲಿ ಒನ್ಸ್ ಜೇಬರ್ –ಎಎಫ್‌ಪಿ ಚಿತ್ರ

ಲಂಡನ್ (ರಾಯಿಟರ್ಸ್): ಟ್ಯುನೀಷಿಯಾದ ಒನ್ಸ್ ಜೇಬರ್ ಕಳೆದ ವರ್ಷದ ವಿಂಬಲ್ಡನ್ ಫೈನಲ್‌ನಲ್ಲಿ ಕಜಕಸ್ತಾನದ ಎಲೆನಾ ರಿಬಾಕಿನಾ ಕೈಲಿ ಅನುಭವಿಸಿದ ಸೋಲಿಗೆ ತಕ್ಕ ಸೇಡು ತೀರಿಸಿಕೊಂಡರು. ಬುಧವಾರ ನಡೆದ ವಿಂಬಲ್ಡನ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಅವರು ಹಾಲಿ ಚಾಂಪಿಯನ್ ರಿಬಾಕಿನಾ ಅವರನ್ನು 6-7 (5), 6-4, 6-1 ರಿಂದ ಸೋಲಿಸಿ ಸೆಮಿಫೈನಲ್ ಪ್ರವೇಶಿಸಿದರು.

ವರ್ಷದ ಹಿಂದೆ ಜೇಬರ್ ವಿಂಬಲ್ಡನ್ ಸಿಂಗಲ್ಸ್ ಗೆದ್ದ ಮೊದಲ ಅರೇಬಿಕ್ ಮತ್ತು ಆಫ್ರಿಕಾದ ಮಹಿಳಾ ಚಾಂಪಿಯನ್ ಎನಿಸಿಕೊಳ್ಳುವ ಹಾದಿಯಲ್ಲಿದ್ದರು. ಆದರೆ, ಮೂರು ಸೆಟ್‌ಗಳ ಫೈನಲ್‌ನಲ್ಲಿ ಮಣಿದು ನಿರಾಶರಾಗಿದ್ದರು. ಈ ಬಾರಿ ಆರನೇ ಶ್ರೇಯಾಂಕದ ಆಟಗಾರ್ತಿ ಆ ಕನಸನ್ನು ಜೀವಂತವಾಗಿ ಉಳಿಸಿಕೊಂಡಿದ್ದಾರೆ. ಕಜಕಸ್ತಾನದ ಆಟಗಾರ್ತಿ ಎದುರು ಮೊದಲ ಸೆಟ್‌ಅನ್ನು ಟೈಬ್ರೇಕರ್‌ನಲ್ಲಿ ಕಳೆದುಕೊಂಡ ನಂತರ ಹತಾಶರಾದಂತೆ ಕಂಡುಬಂದರೂ, ಸ್ಫೂರ್ತಿಯುತ ಹೋರಾಟ ನಡೆಸಿದರು.

ಆಟದ ಮಟ್ಟವನ್ನು ಸುಧಾರಿಸಿಕೊಂಡ ಜೇಬರ್ ಸಕಾರಾತ್ಮಕವಾಗಿ ಆಡಿ, ಧೈರ್ಯದಿಂದ ಹೊಡೆತಗಳಿಗೆ ಹೋಗಿ ಯಶಸ್ಸು ಕಂಡರು. ಇನ್ನೊಂದೆಡೆ ಪ್ರಬಲ ಸರ್ವ್‌ಗಳಿಗೆ ಹೆಸರಾಗಿರುವ ಮೂರನೇ ಶ್ರೇಯಾಂಕದ ರಿಬಾಕಿನಾ ಎಡವಿದರು. ಟ್ಯುನೀಷಿಯಾ ಆಟಗಾರ್ತಿಯ ಮೇಲುಗೈ ಎಷ್ಟಿತ್ತೆಂದರೆ ಕೊನೆಯ 9 ಗೇಮ್‌ಗಳಲ್ಲಿ ಎಂಟನ್ನು ಅವರೇ ಗೆದ್ದರು.

ಸೆಮಿಫೈನಲ್‌ಗೆ ಸಬಲೆಂಕಾ: 28 ವರ್ಷದ ಜೇಬರ್ ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಅರಿನಾ ಸಬಲೆಂಕಾ ಅವರನ್ನು ಎದುರಿಸಲಿದ್ದಾರೆ. 87 ನಿಮಿಷಗಳ ಕಾಲ ನಡೆದ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಸಬಲೆಂಕಾ 6-2, 6-4 ರಿಂದ ಅಮೆರಿಕದ ಮ್ಯಾಡಿಸನ್ ಕೀಸ್ ಅವರನ್ನು ಹಿಮ್ಮೆಟ್ಟಿಸಿ ಎರಡನೇ ಬಾರಿ ಸೆಮಿಫೈನಲ್ ತಲುಪಿದರು.

ಬೆಲಾರಸ್‌ನ ಸಬಲೆಂಕಾ, 2021ರ ಸೆಮಿಫೈನಲ್‌ನಲ್ಲಿ ಜೆಕ್ ರಿಪಬ್ಲಿಕ್‌ನ ಕರೊಲಿನಾ ಪ್ಲಿಸ್ಕೋವಾ ಎದುರು ಸೋತಿದ್ದರು. ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿದ ಕಾರಣಕ್ಕೆ ಕಳೆದ ವರ್ಷ ರಷ್ಯಾ ಮತ್ತು ಬೆಲಾರಸ್ ಆಟಗಾರರಿಗೆ ಈ ಟೂರ್ನಿಗೆ ನಿಷೇಧ ಹೇರಲಾಗಿತ್ತು. ಬೆಲಾರಸ್, ರಷ್ಯಾದ ಆಪ್ತಮಿತ್ರ.

'ಮ್ಯಾಡಿಸನ್ ಅತ್ಯುತ್ತಮ ಆಟಗಾರ್ತಿ. ಎರಡನೇ ಸೆಟ್‌ನಲ್ಲಿ 2-4 ರಲ್ಲಿ 0-40 ಹಿಂದೆಬಿದ್ದಾಗ ಚೇತರಿಸಿಕೊಂಡ ರೀತಿಯಿಂದ ನನಗೆ ಅತೀವ ಖುಷಿಯಾಗಿದೆ' ಎಂದು ಸಬಲೆಂಕಾ ಪ್ರತಿಕ್ರಿಯಿಸಿದರು. 'ನಾನು ಸಣ್ಣವಳಿದ್ದಾಗ ವಿಂಬಲ್ಡನ್ ಗೆಲ್ಲುವ ಕನಸು ಕಂಡಿದ್ದೆ. ಇಲ್ಲಿ ಗೆಲ್ಲುವುದು ವಿಶೇಷವಾದದ್ದು' ಎಂದು ಹೇಳಿದರು.

ಮಹಿಳೆಯರ ವಿಭಾಗದ ಇನ್ನೊಂದು ಸೆಮಿಫೈನಲ್‌ನಲ್ಲಿ ಉಕ್ರೇನ್‌ನ ಎಲಿನಾ ಸ್ವಿಟೊಲಿನಾ, ಜೆಕ್ ರಿಪಬ್ಲಿಕ್‌ನ ಮಾರ್ಕೆಟ ವೊಂದ್ರೊಸೋವಾ ಅವರನ್ನು ಎದುರಿಸಲಿದ್ದಾರೆ.

ಸೆಮಿಗೆ ಅಲ್ಕರಾಜ್, ಮೆಡ್ವೆಡೆವ್: ಪುರುಷರ ಸಿಂಗಲ್ಸ್‌ನ ಅಗ್ರ ಶ್ರೇಯಾಂಕದ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ 7-6 (7-3), 6-4, 6-4ರಿಂದ ಡೆನ್ಮಾರ್ಕ್‌ನ ಹೋಲ್ಗರ್ ರೂನ್ ಅವರನ್ನು ಕ್ವಾರ್ಟರ್ ಫೈನಲ್‌ನಲ್ಲಿ ಮಣಿಸಿ, ಸೆಮಿಫೈನಲ್ ಪ್ರವೇಶಿಸಿದರು.

ರಷ್ಯಾದ ಡೇನಿಯಲ್ ಮೆಡ್ವೆಡೆವ್ 6-4, 1-6, 4-6, 7-6(4), 6-1ರಿಂದ ಅಮೆರಿಕದ ಕ್ರಿಸ್ಟೋಫರ್ ಯುಬ್ಯಾಂಕ್ಸ್ ಅವರನ್ನು ಮಣಿಸಿ ನಾಲ್ಕರ ಘಟ್ಟಕ್ಕೆ ಕಾಲಿಟ್ಟರು.

ಸೆಮಿಗೆ ಬೋಪಣ್ಣ

ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿಯು 6-7 (6-3),7-5, 6-2ರಿಂದ ಡಚ್ ಜೋಡಿ ಟ್ಯಾಲನ್ ಗ್ರೀಕ್ಸ್‌ಪೂರ್ ಮತ್ತು ಬಾರ್ಟ್ ಸ್ಟೀವನ್ಸ್ ಅವರನ್ನು ಮಣಿಸಿ ಪುರುಷರ ಡಬಲ್ಸ್ ವಿಭಾಗದ ಸೆಮಿ ಫೈನಲ್ ಪ್ರವೇಶಿಸಿತು.

ವಿಂಡೀಸ್‌ಗೆ ಅಶ್ವಿನ್ ಆಘಾತ

ಮೊದಲ ಟೆಸ್ಟ್: ಆತಿಥೇಯರಿಗೆ ನಿರಾಶೆ, ಮಿಂಚಿದ ಜಡೇಜ



ವಿಕೆಟ್ ಗಳಿಸಿದ ಆರ್. ಅಶ್ವಿನ್ ಅವರನ್ನು ಅಭಿನಂದಿಸಿದ ನಾಯಕ ರೋಹಿತ್ ಶರ್ಮಾ ಹಾಗೂ ಸಹ ಆಟಗಾರರು –ಎಎಫ್‌ಪಿ ಚಿತ್ರ

ರೊಸೆಯು, ಡಾಮಿನಿಕಾ (ಪಿಟಿಐ): ಭಾರತದ ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರ ಮೋಡಿಯ ಮುಂದೆ ವೆಸ್ಟ್ ಇಂಡೀಸ್ ತಂಡವು ಇಲ್ಲಿ ಬುಧವಾರ ಆರಂಭವಾದ ಟೆಸ್ಟ್ ಪಂದ್ಯದ ಆರಂಭದಲ್ಲಿಯೇ ಆಘಾತ ಅನುಭವಿಸಿತು.

ಆತಿಥೇಯ ತಂಡವು ಮೊದಲ ಇನಿಂಗ್ಸ್‌ನಲ್ಲಿ 64.3 ಓವರ್‌ಗಳಲ್ಲಿ 150 ರನ್‌ಗಳಿಗೆ ಆಲೌಟ್ ಆಯಿತು. ಅಶ್ವಿನ್ ಐದು ಮತ್ತು ಜಡೇಜ ಮೂರು ವಿಕೆಟ್ ಪಡೆದು, ಎದುರಾಳಿ ತಂಡವನ್ನು ಅಲ್ಪ ಮೊತ್ತಕ್ಕೆ ಕಟ್ಟಿಹಾಕಿದರು.

ಟಾಸ್ ಗೆದ್ದ ವೆಸ್ಟ್ ಇಂಡೀಸ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್‌ಗಳಾದ ಕ್ರೇಗ್ ಬ್ರಾಥ್‌ವೇಟ್ (20; 46ಎ) ಮತ್ತು ತೇಜನಾರಾಯಣ ಚಂದ್ರಪಾಲ್ (12; 44ಎ) ಅವರ ವಿಕೆಟ್‌ಗಳನ್ನು ಅಶ್ವಿನ್ ತಮ್ಮ ಬುಟ್ಟಿಗೆ ಹಾಕಿಕೊಂಡರು. ಆತಿಥೇಯ ತಂಡದ ಖಾತೆಯಲ್ಲಿ ಕೇವಲ 38 ರನ್‌ಗಳು ಇದ್ದವು. ತಮ್ಮ ಎಸೆತಗಳ ವೇಗವನ್ನು ತುಸು ಕಡಿಮೆಗೊಳಿಸಿದ ಅಶ್ವಿನ್, ಲಭ್ಯವಿದ್ದ ಟ್ರಿಪ್ ಬಳಸಿಕೊಂಡ ಅವರು ಬ್ಯಾಟರ್‌ಗಳ ಲಯ ತಪ್ಪಿಸುವಲ್ಲಿ ಯಶಸ್ವಿಯಾದರು.

ಆದರೆ ಅನುಭವದ ಕೊರತೆ ಇರುವ ಆಟಗಾರರಿರುವ ವಿಂಡೀಸ್ ತಂಡಕ್ಕೆ ಚೇತರಿಸಿಕೊಳ್ಳಲು ಭಾರತದ ಬೌಲರ್‌ಗಳೂ ಬಿಡಲಿಲ್ಲ. ಶಾರ್ದೂಲ್ ಠಾಕೂರ್ ತುಸು ವೈಡ್ ಆ್ಯಂಗಲ್‌ನಲ್ಲಿ ಹಾಕಿದ್ದ ಎಸೆತವನ್ನು ಡ್ರೈವ್ ಮಾಡಲು ಯತ್ನಿಸಿದ ರೈಮನ್ ಬ್ಯಾಟ್ ಅಂಚಿಗೆ ಸವರಿದ ಚೆಂಡು ಕೀಪರ್ ಹತ್ತಿರ ನುಗ್ಗಿತು. ವಿಕೆಟ್‌ಕೀಪರ್ ಇಶಾನ್ ಕಿಶನ್ ಚುರುಕಾದ ಪ್ರತಿಕ್ರಿಯೆ ನೀಡಿದರು. ಕ್ಯಾಚ್ ಪಡೆದು ಮಿಂಚಿದರು. ಇಶಾನ್‌ಗೆ ಇದು ಪದಾರ್ಪಣೆ ಪಂದ್ಯವಾಗಿದೆ. ಊಟದ ವಿರಾಮಕ್ಕೂ ಮುನ್ನ ರವೀಂದ್ರ ಜಡೇಜ ಅವರ ನಿಧಾನಗತಿಯ ಸ್ಪಿನ್ ಎಸೆತವನ್ನು ಆಡುವ ಭರದಲ್ಲಿ ಬ್ಲ್ಯಾಕ್‌ವುಡ್ ಕೂಡ ವಿಕೆಟ್ ಒಪ್ಪಿಸಿದರು. ಮೊಹಮ್ಮದ್ ಸಿರಾಜ್ ಪಡೆದ ಕ್ಯಾಚ್‌ಗೆ ಅವರು ನಿರ್ಗಮಿಸಿದರು. ಈ ಅವಧಿಯಲ್ಲಿ ಎಂಟು ಓವರ್ ಬೌಲಿಂಗ್ ಮಾಡಿದ ಸಿರಾಜ್ ತಮ್ಮ ಶಾರ್ಟ್‌ಪಿಚ್ ಎಸೆತಗಳಿಂದ ಬ್ಯಾಟರ್‌ಗಳಿಗೆ ಸವಾಲೊಡ್ಡಿದರು. ಎಡಗೈ ಮಧ್ಯಮವೇಗಿ ಜಯದೇವ್ ಉನದ್ಕತ್ ಕೂಡ ನಿಖರ ದಾಳಿ ನಡೆಸಿದರು.

ಭಾರತ ತಂಡದಲ್ಲಿ ಇಬ್ಬರು ಯುವ ಆಟಗಾರರು ಪದಾರ್ಪಣೆ ಮಾಡಿದರು. ಆರಂಭಿಕ ಬ್ಯಾಟರ್, ಮುಂಬೈನ ಯಶಸ್ವಿ ಜೈಸ್ವಾಲ್ ಮತ್ತು ವಿಕೆಟ್‌ಕೀಪರ್ ಇಶಾನ್ ಕಿಶನ್ ಅವರು ಟೆಸ್ಟ್ ಕ್ರಿಕೆಟ್‌ಗೆ ಕಾಲಿಟ್ಟರು. ವೆಸ್ಟ್ ಇಂಡೀಸ್ ತಂಡದಲ್ಲಿ ಅಲಿಕ್ ಅಥನೇಜ್ ಕೂಡ ಪದಾರ್ಪಣೆ ಮಾಡಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ವೆಸ್ಟ್ ಇಂಡೀಸ್: 64.3 ಓವರ್‌ಗಳಲ್ಲಿ 150 (ಕ್ರೇಗ್ ಬ್ರಾಥ್‌ವೇಟ್ 20, ತೇಜನಾರಾಯಣ ಚಂದ್ರಪಾಲ್ 12, ಜರ್ಮೈನ್ ಬ್ಲ್ಯಾಕ್‌ವುಡ್ 14, ಅಲಿಕ್ ಅಥನೇಜ್ 47, ಆರ್. ಅಶ್ವಿನ್ 60ಕ್ಕೆ 5, ರವೀಂದ್ರ ಜಡೇಜ 26ಕ್ಕೆ 3)



ಬರ್ಲಿನ್‌ನಲ್ಲಿ ಇದೇ 28ರಿಂದ ನಡೆಯಲಿರುವ 8ನೇ ಕುಬ್ಜರ ಅಂತರರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಿರುವ ಕ್ರೀಡಾಪಟುಗಳಾದ ರಾಜಣ್ಣ ಸಿವಿ, ನಾಗೇಶ್ ಎನ್, ತುಳಸೀಧರ, ಶಾಂತಕುಮಾರ್, ದೇವಪ್ಪ ಮೋರೆ, ಮಂಜುಳಾ, ಪ್ರಕಾಶ್ ಮತ್ತು ಮಧುಸೂದನ್ ಅವರಿಗೆ ರಾಜಭವನದಲ್ಲಿ ಬುಧವಾರ ಬೀಳ್ಕೊಡುಗೆ ಸಮಾರಂಭ ನಡೆಯಿತು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಕರ್ನಾಟಕ ರಾಜ್ಯ ಅಂಗವಿಕಲರ ಕ್ರೀಡಾ ಸಂಸ್ಥೆಯ ಉಪಾಧ್ಯಕ್ಷ ಕೆ.ವೈ. ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಎಂ.ಆರ್. ಮಹೇಶ್, ತಂಡ ವ್ಯವಸ್ಥಾಪಕ ಶಿವಾನಂದ ಗುಂಜಾಳ್ ಇದ್ದರು

ಸಂಕ್ಷಿಪ್ತ ಸುದ್ದಿ

ಟಿ–20: ಭಾರತಕ್ಕೆ 3–0 ಸ್ವೀಪ್ ಗುರಿ

ಮೀರ್‌ಪುರ್ (ಪಿಟಿಐ): ಭಾರತ ವನಿತೆಯರು ಮೂರನೇ ಹಾಗೂ ಅಂತಿಮ ಟಿ–20 ಪಂದ್ಯದಲ್ಲಿ ಗುರುವಾರ ಬಾಂಗ್ಲಾದೇಶ ತಂಡವನ್ನು ಎದುರಿಸಲಿದ್ದು ಸರಣಿಯನ್ನಯು 3–0 ಸ್ವೀಪ್ ಮಾಡುವ ಗುರಿ ಹೊಂದಿದ್ದಾರೆ. ಬ್ಯಾಟಿಂಗ್ ಸುಧಾರಿಸುವ ಕಡೆ ಹರ್ಮನ್‌ಪ್ರೀತ್ ಕೌರ್ ಬಳಗ ಚಿತ್ತ ನೆಟ್ಟಿದೆ.

ಭಾರತ ಎರಡನೇ ಪಂದ್ಯದಲ್ಲಿ 95 ರನ್ನಿಗೆ ಕುಸಿದಿತ್ತು. ಆದರೆ ಬೌಲರ್‌ಗಳ ಉತ್ತಮ ಪ್ರದರ್ಶನದ ಬಲದಿಂದ ಆತಿಥೇಯರನ್ನು 87 ರನ್ನಿಗೆ ಉರುಳಿಸಿ ಎಂಟು ರನ್‌ಗಳಿಂದ ಗೆದ್ದು ನಿಟ್ಟುಸಿರುಬಿಟ್ಟಿತ್ತು. ಅಲ್ಪಸ್ಕೋರುಗಳ ಕಳೆದ ಪಂದ್ಯದಲ್ಲಿ 14 ಎಸೆತಗಳಲ್ಲಿ ಗಳಿಸಿದ 19 ರನ್ ಅತ್ಯಧಿಕ ಎನಿಸಿದರೂ ಆರಂಭ ಆಟಗಾರ್ತಿ ಶಫಾಲಿ ವರ್ಮಾ ಒಟ್ಟಾರೆ ರನ್‌ಬರ ಎದುರಿಸುತ್ತಿದ್ದಾರೆ. ಏಕದಿನ ಸರಣಿ ಜುಲೈ 16ರಂದು ಆರಂಭವಾಗಲಿದೆ. ಅನುಭವಿ ಆಟಗಾರ್ತಿ ಸ್ಮೃತಿ ಮಂಧಾನಾ ಕೂಡ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ. ಜೆಮಿಮಾ ರಾಡ್ರಿಗಸ್ ಕೂಡ ಎಂದಿನ ಲಯದಲ್ಲಿಲ್ಲ. ಕಳೆದ ಪಂದ್ಯದಲ್ಲಿ ದೀಪ್ತಿ ಶರ್ಮಾ, ಮಿನ್ನು ಮಣಿ ಮತ್ತು ಶಫಾಲಿ ಅವರ ಉತ್ತಮ ಬೌಲಿಂಗ್‌ನಿಂದ ಭಾರತದ ಬ್ಯಾಟಿಂಗ್ ವೈಫಲ್ಯ ಮರೆಮಾಚಿತು.



ಜ್ಞಾನೇಶ್ವರಿ ಯಾದವ್

ವೇಟ್‌ಲಿಫ್ಟಿಂಗ್: ಚಿನ್ನ ಗೆದ್ದ ಜ್ಞಾನೇಶ್ವರಿ

ಗ್ರೇಟರ್ ನೋಯ್ಡಾ (ಪಿಟಿಐ): ಭಾರತದ ಜ್ಞಾನೇಶ್ವರಿ ಯಾದವ್ ಅವರು ಇಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 49 ಕೆಜಿ ವಿಭಾಗದಲ್ಲಿ ಚಿನ್ನ ಗೆದ್ದರು.

ಛತ್ತೀಸ್‌ಗಢದ 20 ವರ್ಷದ ಈ ಆಟಗಾರ್ತಿ ಸ್ನ್ಯಾಚ್, ಕ್ಲೀನ್ ಮತ್ತು ಜರ್ಕ್ ವಿಭಾಗದಲ್ಲಿ ಸಾಧನೆ ಮಾಡಿದರು. ಅವರು 176 ಕೆಜಿ (78 ಕೆಜಿ + 98 ಕೆಜಿ) ಎತ್ತುವ ಮೂಲಕ ಚಿನ್ನದ ಸಾಧನೆ ಮಾಡಿದರು.

ಪಶ್ಚಿಮ ವಲಯ ಬೌಲರ್‌ಗಳ ಪಾರಮ್ಯ

ದುಲೀಪ್ ಟ್ರೋಫಿ ಫೈನಲ್: ಹನುಮವಿಹಾರಿ ಅರ್ಧಶತಕ, ಮಳೆಯ ಆಟ

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾದ ದುಲೀಪ್ ಟ್ರೋಫಿ ಫೈನಲ್ ಪಂದ್ಯದ ಮೊದಲ ದಿನ ದಕ್ಷಿಣ ವಲಯ ತಂಡಕ್ಕೆ ಹನುಮವಿಹಾರಿ ಮತ್ತು ತಿಲಕ್ ವರ್ಮಾ ಅವರ ಜೊತೆಯಾಟವೊಂದೇ ನೆನಪಿನಲ್ಲಿ ಉಳಿಯುವಂತದ್ದು. ಇದನ್ನು ಬಿಟ್ಟರೆ ಇಡೀ ದಿನ ಪಶ್ಚಿಮ ವಲಯದ ಬೌಲರ್‌ಗಳದ್ದೇ ಪಾರುಪತ್ಯ ನಡೆಯಿತು.

ಬೆಳಿಗ್ಗೆ ಅಹ್ಲಾದಕರ ವಾತಾವರಣದಲ್ಲಿ ಟಾಸ್ ಗೆದ್ದ ಹಾಲಿ ಚಾಂಪಿಯನ್ ಪಶ್ಚಿಮ ವಲಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ತಮ್ಮ ನಾಯಕ ಪ್ರಿಯಾಂಕ್ ಪಾಂಚಾಲ್ ಅವರ ನಿರ್ಣಯವನ್ನು ಬೌಲರ್‌ಗಳು ಸಮರ್ಥಿಸಿಕೊಂಡರು.

ಮಧ್ಯಾಹ್ನ ಚಹಾ ವಿರಾಮದ ನಂತರ ಮಳೆ ಸುರಿದು ದಿನದಾಟ ಮುಗಿಯುವ ಸಮಯಕ್ಕೆ ದಕ್ಷಿಣ ವಲಯದ ಪ್ರಮುಖ ಬ್ಯಾಟರ್‌ಗಳಿಗೆ ಪೆವಿಲಿಯನ್ ದಾರಿ ತೋರುವಲ್ಲಿ ವೇಗಿ ಅರ್ಜನ್ ನಾಗಸವಾಲಾ, ಚಿಂತನ್ ಗಜ ಮತ್ತು ಸ್ಪಿನ್ನರ್ ಶಮ್ಸ್ ಮುಲಾನಿ ಯಶಸ್ವಿಯಾದರು. ಮೂವರು ತಲಾ ಎರಡು ವಿಕೆಟ್ ಗಳಿಸಿದರು. ಇದರಿಂದಾಗಿ ದಿನದಾಟ ಮುಗಿದಾಗ ದಕ್ಷಿಣ ವಲಯವು 65 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 182 ರನ್ ಗಳಿಸಿತು. ವಾಷಿಂಗ್ಟನ್ ಸುಂದರ್ (ಬ್ಯಾಟಿಂಗ್ 9) ಮತ್ತು ವೈಶಾಖ ವಿಜಯಕುಮಾರ್ (ಬ್ಯಾಟಿಂಗ್ 5) ಕ್ರೀಸ್‌ನಲ್ಲಿದ್ದಾರೆ.

ಮಧ್ಯಮವೇಗಿ ಚಿಂತನ್ ಗಜ ಹಾಕಿದ 7ನೇ ಓವರ್‌ನಲ್ಲಿ ಆರ್. ಸಮರ್ಥ್ ಅವರ ಕ್ಯಾಚ್ ಪಡೆ ವಿಕೆಟ್ ಕೀಪರ್ ಹರ್ವಿಕ್ ದೇಸಾಯಿ ಸಂಭ್ರಮಿಸಿದರು. ಮಯಂಕ್ ಅಗರವಾಲ್ ಜೊತೆಗೂಡಿದ ತಿಲಕ್ ವರ್ಮಾ ಎರಡನೇ ವಿಕೆಟ್ ಜೊತೆಯಾಟದಲ್ಲಿ 27 ರನ್ ಸೇರಿಸಿದರು. ಇನಿಂಗ್ಸ್‌ಗೆ ಚೇತರಿಕೆ ನೀಡುವ ಪ್ರಯತ್ನ ಮಾಡಿದರು. ಆದರೆ ಮಧ್ಯಮವೇಗಿ ಆತಿಥ್ ಶೇಠ್ ಹಾಕಿದ ಎಸೆತವನ್ನು ಆಡುವಲ್ಲಿ ಎಡವಿದ ಮಯಂಕ್ ಅಗರವಾಲ್ ಫೀಲ್ಡರ್ ಸರ್ಫರಾಜ್ ಖಾನ್‌ಗೆ ಕ್ಯಾಚಿತ್ತರು.

ಸೆಮಿಫೈನಲ್‌ನಲ್ಲಿ ಎರಡು ಅರ್ಧ ಶತಕ ಗಳಿಸಿದ್ದ ಮಯಂಕ್ ವಿಜಯದ ರೂವಾರಿಯಾಗಿದ್ದರು. ಇಲ್ಲಿ ಅವರು 47 ಎಸೆತಗಳಲ್ಲಿ 28 ರನ್ ಗಳಿಸಿದರು.

ತಿಲಕ್ ವರ್ಮಾ ಜೊತೆಗೂಡಿದ ಹನುಮವಿಹಾರಿ ಜವಾಬ್ದಾರಿಯುತ ಆಟವಾಡಿದರು. ಮಧ್ಯಮವೇಗಿಗಳ ಶಾಟ್ ಪಿಚ್ ಮತ್ತು ಗುಡ್‌ಲೆಂಗ್ತ್ ಎಸೆತಗಳಿಗೆ ಎಚ್ಚರಿಕೆಯಿಂದ ಉತ್ತರ ಕೊಟ್ಟರು. ಇದರಿಂದಾಗಿ ಭೋಜನ ವಿರಾಮಕ್ಕೆ ತಂಡದ ಮೊತ್ತವು 100ರ ಗಡಿ ಮುಟ್ಟಿತು.

ನಂತರದ ಆಟದಲ್ಲಿ ತಿಲಕ್‌ವರ್ಮಾ ಅರ್ಧಶತಕ ಪೂರೈಸಲು ಅರ್ಜನ್ ನಾಗಸವಾಲಾ ಬಿಡಲಿಲ್ಲ. ಹರ್ವಿಕ್ ದೇಸಾಯಿ ಅವರ ಚುರುಕಾದ ವಿಕೆಟ್‌ಕೀಪಿಂಗ್ ಫಲ ನೀಡಿತು. ತಿಲಕ್ ಬ್ಯಾಟ್ ಸವರಿದ ಚೆಂಡು ಅರ್ಜನ್ ಕೈಗವಸು ಸೇರಿತ್ತು. ತಿಲಕ್ ಯುಡಿಆರ್‌ಎಸ್ (ಅಂಪೈರ್ ತೀರ್ಪು ಮರುಪರಿಶೀಲನೆ ವ್ಯವಸ್ಥೆ) ಮೊರೆ ಹೋದರೂ ಫಲ ನೀಡಲಿಲ್ಲ. ಜೊತೆಯಾಟ ಮುರಿಯಿತು.

ಇದರ ನಂತರ ಹನುಮವಿಹಾರಿಗೆ ಇನ್ನೊಂದು ಬದಿಯಿಂದ ಉತ್ತಮ ಬೆಂಬಲ ಲಭ್ಯವಾಗಲಿಲ್ಲ. ಆದ್ದರಿಂದ ತಮ್ಮ ರನ್ ಗಳಿಕೆಯ ವೇಗ ಹೆಚ್ಚಿಸುವುದು ಹನುಮವಿಹಾರಿಗೆ ಅನಿವಾರ್ಯವಾಯಿತು. 103 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ನಂತರವೂ ಬೌಂಡರಿ ಗಳಿಸಿ ಸ್ಕೋರ್ ಹೆಚ್ಚಿಸಲು ಪ್ರಯತ್ನಿಸಿದರು.

ಇನ್ನೊಂದು ಕಡೆ ರಿಕಿ ಭುಯಿ ಮತ್ತು ಸಚಿನ್ ಬೇಬಿ ಅವರ ವಿಕೆಟ್ ಉರುಳಿದವು. ಚಹಾ ವಿರಾಮಕ್ಕೂ ಸ್ವಲ್ಪ ಮುನ್ನ ವಿಹಾರಿ ವಿಕೆಟ್ ಉರುಳಿಸುವಲ್ಲಿ ಮುಲಾನಿ ಯಶಸ್ವಿಯಾದರು.

ಸಂಕ್ಷಿಪ್ತ ಸ್ಕೋರ್: ದಕ್ಷಿಣ ವಲಯ: ಮೊದಲ ಇನಿಂಗ್ಸ್ 65 ಓವರ್‌ಗಳಲ್ಲಿ 7ಕ್ಕೆ182 (ಮಯಂಕ್ 28, ತಿಲಕ್ ವರ್ಮಾ 40, ಹನುಮ 63; ಅರ್ಜನ್ ನಾಗಸವಾಲಾ 45ಕ್ಕೆ 2, ಚೇತನ್ ಗಜ 27ಕ್ಕೆ 2, ಶಮ್ಸ್ ಮುಲಾನಿ 19ಕ್ಕೆ 2



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಟೂರ್ನಿ ಫೈನಲ್ ಪಂದ್ಯದಲ್ಲಿ ಪಶ್ಚಿಮ ವಲಯದ ವಿರುದ್ಧ ಅರ್ಧಶತಕ ಗಳಿಸಿದ ದಕ್ಷಿಣ ವಲಯದ ಹನುಮವಿಹಾರಿ –ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್.

ಮಳೆಯ ಆಟ

ವಿರಾಮದ ನಂತರ ನಾಲ್ಕು ಎಸೆತಗಳಾಗುವಷ್ಟರಲ್ಲಿ ಮಳೆ ಸುರಿಯಿತು. ಆಟ ಸ್ಥಗಿತವಾಯಿತು. ಸುಮಾರು ಒಂದು ಗಂಟೆಯ ನಂತರ ಆಟ ಆರಂಭವಾಯಿತು.

ಆದರೆ ಐದು ನಿಮಿಷವಾಗುಷ್ಟರಲ್ಲಿ ಮೊಡಗಳು ದಟ್ಟೈಸಿ ಬೆಳಕು ಮಂದವಾಯಿತು. ಇದರಿಂದಾಗಿ ಆಟ ಮತ್ತೆ ನಿಂತಿತು. ಮಳೆಯೂ ಸುರಿದುಹೋಯಿತು. ನಂತರದ ಎಳೆಬಿಸಿಲಿನಲ್ಲಿ ಸಂಜೆ 5.05ಕ್ಕೆ ಆಟ ಆರಂಭವಾಯಿತು. ಐದು ಓವರ್‌ಗಳಷ್ಟು ಆಟ ನಡೆಯಿತು. ಇದರಲ್ಲಿಯೇ ಸಾಯಿ ಕಿಶೋರ್ ವಿಕೆಟ್ ಪತನವಾಯಿತು.

ಮೈದಾನದ ಎಡಭಾಗದಲ್ಲಿ ತುಂತುರು ಮಳೆ ಮತ್ತು ಬಲಭಾಗದಲ್ಲಿ ಎಳೆಬಿಸಿಲಿನ ವಿಸ್ಮಯವೂ ಗಮನ ಸೆಳೆಯಿತು!



ಇಂಡಿಯನ್ ಆಯಿಲ್ ಅಲ್ಟಿಮೇಟ್ ಟೇಬಲ್ ಟೆನಿಸ್ 4ನೇ ಆವೃತ್ತಿ ಗುರುವಾರ ಪುಣೆಯಲ್ಲಿ ಆರಂಭವಾಗಲಿದ್ದು, ಬುಧವಾರ ಪತ್ರಿಕಾಗೋಷ್ಠಿಯಲ್ಲಿ (ಎಡದಿಂದ ಬಲಕ್ಕೆ) ಆಚಂತಾ ಶರತ್ ಕಮಲ್, ಮಣಿಕಾ ಬಾತ್ರಾ, ಸತ್ಯನ್ ಜ್ಞಾನಶೇಖರನ್, ಲಿಲಿ ಜಾಂಗ್, ಹನಾ ಮಾಟೆಲೋವಾ, ಅಲ್ವಾರೊ ರೋಬಲ್ಸ್ ಅವರು ಟ್ರೋಫಿ ಅನಾವರಣ ಮಾಡಿದರು

'ಕುದುರೆ ರೇಸಿಂಗ್: ತೆರಿಗೆ ಭಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುದುರೆ ರೇಸಿಂಗ್ ಮೇಲೆ ಶೇ 28ರಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸಿರುವುದರಿಂದ ದೊಡ್ಡ ನಷ್ಟವಾಗಲಿದೆ ಎಂದು ಬೆಂಗಳೂರು ಟರ್ಫ್ ಕ್ಲಬ್ ಮುಖ್ಯಸ್ಥ ಶಿವಕುಮಾರ್ ಖೇಣಿ ಹೇಳಿದ್ದಾರೆ.

ಕುದುರೆ ರೇಸಿಂಗ್, ಕಸಿನೋ ಮತ್ತು ಆನ್‌ಲೈನ್ ಗೇಮಿಂಗ್‌ಗಳ ಮೇಲೆ ಶೇ 28ರಷ್ಟು ಜಿಎಸ್‌ಟಿ ವಿಧಿಸಲಾಗುವುದು ಎಂದು ಬುಧವಾರ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದರು. ಇದರಿಂದಾಗಿ ರೇಸಿಂಗ್‌ನಲ್ಲಿ ಆಗುವ ನಷ್ಟದ ಕುರಿತು ಹಣಕಾಸು ಇಲಾಖೆಗೆ ಮನವರಿಕೆ ಮಾಡಲು ಟರ್ಫ್ ಅಥಾರಿಟಿಸ್ ಆಫ್ ಇಂಡಿಯಾ (ಟಿಎಐ) ಮುಂದಾಗಿದೆ.

'ಕಳೆದ ಕೆಲವು ದಿನಗಳ ಹಿಂದೆ ಹಣಕಾಸು ಕಾರ್ಯದರ್ಶಿಗಳೊಂದಿಗೆ ಈ ವಿಷಯ ಮಾತನಾಡಿದ್ದೆವು. ಅದರಿಂದ ಜಿಎಸ್‌ಟಿ ವಿಷಯದಲ್ಲಿ ರಿಯಾಯಿತಿ ಸಿಗಬಹುದೆಂಬ ಭರವಸೆ ಇತ್ತು. ಆದರೆ ಹಾಗಾಗಿಲ್ಲ. ಆದ್ದರಿಂದ ಬರುವ ಭಾನುವಾರ ಎಲ್ಲ ಟರ್ಫ್ ಕ್ಲಬ್‌ಗಳೊಂದಿಗೆ ಸಭೆ ನಡೆಸಲಿದ್ದೇವೆ. ಈ ವಿಷಯವನ್ನು ನಿರ್ವಹಿಸುವ ಕುರಿತು ನಮ್ಮ ಬಳಿ ಪ್ರಸ್ತಾವಗಳು ಇವೆ. ನಮ್ಮ ವಕೀಲರ ಸಲಹೆ ಪಡೆಯುತ್ತೇವೆ. ಕಾನೂನಾತ್ಮಕ ಹಾದಿಯ ಕುರಿತು ಚರ್ಚಿಸಲಾಗುವುದು'' ಎಂದು ಖೇಣಿ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರತಿ ₹ 100 ಬೆಟ್ಟಿಂಗ್ ಮಾಡಿದಾಗ ಅದರಲ್ಲಿ ಶೇ 28 ಜಿಎಸ್‌ಟಿಗೆ ಹೋಗುತ್ತದೆ. ಶೇ 30 ಟಿಡಿಎಸ್ (ಮೂಲದಲ್ಲಿ ತೆರಿಗೆ ಕಡಿತ) ಹಾಗೂ ಶೇ 6ರಷ್ಟು ಹೆಚ್ಚುವರಿ ಭಾಗವು ಕ್ಲಬ್ ಕಮಿಷನ್ ಕಡಿತವಾಗುತ್ತದೆ. ಪಂಟರ್‌ಗಳಿಗೆ ಕನಿಷ್ಠ ಆದಾಯ ಸಿಗುತ್ತದೆ' ಎಂದೂ ಅವರು ವಿವರಿಸಿದರು.

'ಇದರಿಂದ ರೇಸ್‌ಪ್ರಿಯ ಜನರು ಹೆಚ್ಚು ಆದಾಯ ಗಳಿಸಲು ವಾಮಮಾರ್ಗ ಹಿಡಿಯುವ ಸಾಧ್ಯತೆ ಇದೆ' ಎಂದೂ ಆತಂಕ ವ್ಯಕ್ತಪಡಿಸಿದರು.

'15 ದಿನಗಳ ಹಿಂದೆ ದೆಹಲಿಯಲ್ಲಿ ಹಣಕಾಸು ಇಲಾಖೆ ಕಾರ್ಯದರ್ಶಿಗಳನ್ನು ಭೇಟಿಯಾಗಿದ್ದೆವು. ಅವರಿಗೆ ಸಮಸ್ಯೆಯನ್ನು ವಿವರಿಸಿದ್ದೆವು. ಅವರೂ ಸಂಪೂರ್ಣ ವಿಷಯ ಅರ್ಥ ಮಾಡಿಕೊಂಡಂತೆ ಅನಿಸಿತ್ತು. ಭವಿಷ್ಯದಲ್ಲಿ ಸಮಸ್ಯೆಗೆ ಸೂಕ್ತ ಪರಿಹಾರ ಸಿಗಬಹುದು' ಎಂದು ಖೇಣಿ ಹೇಳಿದರು. ಟಿಡಿಎಸ್‌ನಲ್ಲಿ ರಿಯಾಯಿತಿ ಸಿಗಬಹುದೆಂಬ ನಿರೀಕ್ಷೆಯೂ ಇದೆ.

'ಈ ಕ್ರಮವು ರೇಸಿಂಗ್ ಸಮುದಾಯಕ್ಕೆ ಬಹಳ ದೊಡ್ಡ ಆತಂಕ ತಂದೊಡ್ಡಿದೆ. ಇದರಿಂದಾಗಿ ಆದಾಯ ನೆಲ ಕಚ್ಚುವ ಅಪಾಯವಿದೆ. ₹ 2000 ಕೋಟಿಯಿಂದ ₹ 200 ಕೋಟಿಗೆ ಆದಾಯ ಕುಸಿಯಬಹುದು. ಇದು ನುಂಗ ಲಾರದ ತುತ್ತು. ಸರ್ಕಾರಕ್ಕೆ ಕುದುರೆ ರೇಸಿಂಗ್ ಬಗ್ಗೆ ನಕಾರಾತ್ಮಕ ಧೋರಣೆ ಇರಬಹುದು. ಆದರೆ ರೇಸಿಂಗ್ ಚಟುವಟಿಕೆಯಿಂದ ಸರ್ಕಾರಕ್ಕೂ ಉತ್ತಮ ಆದಾಯ ದೊರೆಯುತ್ತದೆ ಎಂಬುದನ್ನು ಮನಗಾಣುತ್ತಿಲ್ಲ. ಹಾಂಗ್‌ಕಾಂಗ್ ದೇಶವು ಇದಕ್ಕೆ ಉತ್ತಮ ಉದಾಹರಣೆ. ಅಲ್ಲಿ ರೇಸಿಂಗ್‌ನಿಂದ ವಾರ್ಷಿಕ ₹ 150,000 ಕೋಟಿ ಅದಾಯ ಬರುತ್ತದೆ. ಅದರಲ್ಲಿಯೇ ₹ 3000–4000 ಕೋಟಿ ದತ್ತಿ ಕಾರ್ಯಗಳಿಗೆ ದೇಣಿಗೆಯಾಗಿ ನೀಡಲಾಗುತ್ತದೆ' ಎಂದು ಬಿಟಿಸಿಯ ಸೀನಿಯರ್ ಸ್ಟೀವರ್ಡ್ ಕೆ. ಬೆಳ್ಳಿಯಪ್ಪ ಹೇಳಿದರು.

ಏಷ್ಯಾ ಕಪ್: ದಂಬುಲಾದಲ್ಲಿ ಭಾರತದ ಪಂದ್ಯಗಳು

ನವದೆಹಲಿ (ಪಿಟಿಐ): ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡ ಆಡುವ ಪಂದ್ಯಗಳನ್ನು ಶ್ರೀಲಂಕಾದ ದಂಬುಲಾದಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಮುಖ್ಯಸ್ಥ ಅರುಣ ಧುಮಾಲ್ ಬುಧವಾರ ಖಚಿತಪಡಿಸಿದ್ದಾರೆ.

ಗುರುವಾರ ಡರ್ಬನ್‌ನಲ್ಲಿ ನಡೆಯಲಿರುವ ಐಸಿಸಿ ಮಂಡಳಿ ಸಭೆಗೂ ಮುನ್ನ ನಡೆದ ಸಭೆಯಲ್ಲಿ ಭೇಟಿಯಾದ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಮತ್ತು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಆಡಳಿತ ಸಮಿತಿ ಮುಖ್ಯಸ್ಥ ಝಕಾ ಅಶ್ರಫ್ ಈ ವಿಷಯದ ಕುರಿತು ಚರ್ಚಿಸಿದರು.

ಏಷ್ಯಾ ಕಪ್ ಟೂರ್ನಿಯು ಪಾಕಿಸ್ತಾನ ಮತ್ತು ಶ್ರೀಲಂಕಾದಲ್ಲಿ ಆಯೋಜನೆಯಾಗಲಿದೆ. ಆಗಸ್ಟ್ 31 ರಿಂದ ಸೆಪ್ಟೆಂಬರ್ 17ರವರೆಗೆ ಪಂದ್ಯಗಳು ನಡೆಯಲಿವೆ.

'ನಮ್ಮ (ಬಿಸಿಸಿಐ) ಕಾರ್ಯದರ್ಶಿ ಮತ್ತು ಪಿಸಿಬಿ ಮುಖ್ಯಸ್ಥ ಝಕಾ ಅಶ್ರಫ್ ಅವರು ಭೇಟಿಯಾಗಿ ಚರ್ಚಿಸಿದ್ದಾರೆ ಲೀಗ್ ಹಂತದ ನಾಲ್ಕು ಪಂದ್ಯಗಳು ಪಾಕಿಸ್ತಾನದಲ್ಲಿ ಮತ್ತು ಒಂಬತ್ತು ಪಂದ್ಯಗಳು ಶ್ರೀಲಂಕಾದಲ್ಲಿ ಆಯೋಜನೆಗೊಳ್ಳಲಿವೆ. ಅದರಲ್ಲಿ ಭಾರತವು ಪಾಕಿಸ್ತಾನ ವಿರುದ್ಧ ಮತ್ತು ಶ್ರೀಲಂಕಾ ವಿರುದ್ಧದ ಪಂದ್ಯಗಳು ಸೇರಿವೆ. ಒಂದೊಮ್ಮೆ ಭಾರತ ಮತ್ತು ಪಾಕ್ ಫೈನಲ್ ತಲುಪಿದರೆ, ಆ ಪಂದ್ಯವೂ ಲಂಕಾದಲ್ಲಿಯೇ ನಡೆಯಲಿದೆ' ಎಂದು ಧುಮಾಲ್ ಸ್ಪಷ್ಟಪಡಿಸಿದ್ದಾರೆ.

'ಭಾರತ ತಂಡವು ಪಾಕಿಸ್ತಾನಕ್ಕೆ ತೆರಳಿ ಪಂದ್ಯಗಳನ್ನು ಆಡಲಿದೆ ಎಂದಿರುವ ಕೆಲವು ವರದಿಗಳು ಸತ್ಯಕ್ಕೆ ದೂರವಾಗಿವೆ. ಪಾಕ್ ಕ್ರೀಡಾ ಸಚಿವ ಎಹಸಾನ್ ಮಾಝುರಿ ಹೇಳಿದ್ದಾರೆಂದೂ ಆ ವರದಿಗಳಲ್ಲಿದೆ. ಆದರೆ ಅಂತಹ ಯಾವುದೇ ಮಾತುಕತೆಗಳು ನಡೆದಿಲ್ಲ. ಭಾರತ ತಂಡವು ಪಾಕ್‌ಗೆ ಪ್ರಯಾಣಿಸುತ್ತಿಲ್ಲ' ಎಂದೂ ಧುಮಾಲ್ ಹೇಳಿದರು.

ಏಷ್ಯನ್ ಅಥ್ಲೆಟಿಕ್ಸ್: 10,000 ಮೀ. ನಡಿಗೆ

ಅಭಿಷೇಕ್ ಪಾಲ್‌ಗೆ ಕಂಚು



ಅಭಿಷೇಕ್ ಪಾಲ್



ಬ್ಯಾಂಕಾಕ್ (ಪಿಟಿಐ): ಭಾರತದ ಅಭಿಷೇಕ್ ಪಾಲ್, ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಆರಂಭದ ದಿನವಾದ ಬುಧವಾರ ಪುರುಷರ 10,000 ಮೀ. ನಡಿಗೆ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಇದು ಭಾರತಕ್ಕೆ ಈ ಬಾರಿಯ ಮೊದಲ ಪದಕ.

ಸೇನೆಯಲ್ಲಿರುವ 25 ವರ್ಷದ ಪಾಲ್ 29 ನಿಮಿಷ 33.26 ಸೆಕೆಂಡುಗಳಲ್ಲಿ ನಿಗದಿತ ದೂರವನ್ನು ಕ್ರಮಿಸಿದರು. ಜಪಾನ್‌ನ ರೆನ್ ತಝಾವಾ (29:18.44) ಮತ್ತು ಕಜಕಸ್ತಾನದ ಕಿಮುತ್ಯೆ ಶಾದ್ರಕ್ (29:31.63) ಅವರು ಕ್ರಮವಾಗಿ ಚಿನ್ನ ಮತ್ತು ರಜತ ಪದಕ ಗೆದ್ದುಕೊಂಡರು.

ಮಹಿಳೆಯರ ವಿಭಾಗದ ಜಾವೆಲಿನ್‌ನಲ್ಲಿ, ಅನುಭವಿ ಅನ್ನು ರಾಣಿ ಸ್ವಲ್ಪದರಲ್ಲೇ ಪದಕ ತಪ್ಪಿಸಿಕೊಂಡು ನಾಲ್ಕನೇ ಸ್ಥಾನ ಪಡೆದರು. 59.10 ಮೀ. ಅವರ ದಿನದ ಉತ್ತಮ ಥ್ರೊ ಎನಿಸಿತು. 2019ರ ಚಾಂಪಿಯನ್‌ಷಿಪ್‌ನಲ್ಲಿ 60.22 ಮೀ. ಸಾಧನೆಯೊಡನೆ ಬೆಳ್ಳಿ ಗೆದ್ದಿದ್ದ ಅನ್ನು ಮೇಲೆ ಇಲ್ಲಿ ನಿರೀಕ್ಷೆಯ ಭಾರ ಇತ್ತು. ಜಪಾನ್‌ನ ಮರಿನಾ ಸೈಟೊ (61.67 ಮೀ.) ಚಿನ್ನ ಗೆದ್ದರೆ, ಈನಾದ ಲಿಯು ಶಿಯಿಂಗ್ (61.51) ಬೆಳ್ಳಿ ಪದಕ ಪಡೆದರು. ಶ್ರೀಲಂಕಾ ನದೀಶಾ ದಿಲ್ಹಾನಿ (60.93) ಮೂರನೇ ಸ್ಥಾನ ಗಳಿಸಿದರು.

ಮಧ್ಯಮ ಅಂತರದ ಓಟಗಾರ್ತಿ ಲಿಲಿ ದಾಸ್, ಮಹಿಳೆಯರ 1,500 ಮೀಟರ್ ಓಟವನ್ನು 4 ನಿಮಿಷ 27 ಸೆಕೆಂಡುಗಳಲ್ಲಿ ಪೂರೈಸಿ ಏಳನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು.

ಬಿಸಿಲಿನ ಮತ್ತು ಸೆಕೆಯ ವಾತಾವರಣದಲ್ಲಿ 25 ಸುತ್ತುಗಳ ಓಟದಲ್ಲಿ ಜಪಾನ್‌ನ ರೆನ್ ತಝಾವಾ ಎರಡನೇ ಸುತ್ತಿನ ನಂತರ ಮುನ್ನಡೆ ಸಾಧಿಸಿದರು. ನಂತರ ಅವರಿಗೆ ಪ್ರತಿಸ್ಪರ್ಧಿಗಳಿಂದ ತೀವ್ರ ಸವಾಲು ಎದುರಾಗಲಿಲ್ಲ.

ಪಾಲ್ ಮತ್ತು ಭಾರತದ ಇನ್ನೊಬ್ಬ ಓಟಗಾರ ಗುಲ್ವೀರ್ ಸಿಂಗ್ ರೇಸ್‌ನ ಬಹುತೇಕ ಅವಧಿಯಲ್ಲಿ ಪ್ರಮುಖ ಅಥ್ಲೀಟುಗಳಿಗಿಂತ ಹಿಂದಿದ್ದರು. ಆದರೆ ಕೊನೆಯ ಲ್ಯಾಪ್‌ನಲ್ಲಿ ವೇಗ ಹೆಚ್ಚಿಸಿಕೊಂಡ ಪಾಲ್ ಅವರು ದಣಿದಿದ್ದ ಜಪಾನ್‌ನ ಯುಟೊ ಇಮೆ ಅವರನ್ನು ಹಿಂದೆಹಾಕಿದರು.

'ಕೊನೆಯ ಎರಡು ಸುತ್ತುಗಳಲ್ಲಿ ಇಮೆ ದಣಿದಿರುವುದನ್ನು ಗಮನಿಸಿದ್ದೆ. ವೇಗ ಹೆಚ್ಚಿಕೊಂಡು ಕೊನೆಯ 400 ಮೀ. ಇರುವಾಗ ಅವರನ್ನು ಹಿಂದೆ ಹಾಕಿದೆ' ಎಂದು ಸ್ಪರ್ಧೆಯ ನಂತರ ಪಾಲ್ ಸುದ್ದಿಗಾರರಿಗೆ ತಿಳಿಸಿದರು.

'ಸ್ಪರ್ಧೆಯ ಮೊದಲ ಅರ್ಧ ಅವಧಿಯಲ್ಲಿ ಹವೆ ಅಷ್ಟೇನೂ ಸಮಸ್ಯೆಯಾಗಲಿಲ್ಲ. ಆದರೆ ಕೊನೆಯಲ್ಲಿ ಸೆಕೆ ಹೆಚ್ಚಾಗಿ ಕಿರಿಕಿರಿಯಾಗತೊಡಗಿತು' ಎಂದರು.

ಕತಾರ್‌ನ ದೋಹಾದಲ್ಲಿ ನಡೆದ 2019ರ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ ಏಳನೇ ಸ್ಥಾನ ಪಡೆದಿದ್ದರು. 'ಕಂಚಿನ ಪದಕ ನನ್ನ ವಿಶ್ವಾಸ ಹೆಚ್ಚಿಸಿದೆ. 5,000 ಮೀ. ರೇಸ್‌ನಲ್ಲಿ ನಾನು ಉತ್ತಮ ಪ್ರದರ್ಶನ ನೀಡಬೇಕಾಗಿದೆ' ಎಂದೂ ಪಾಲ್ ಹೇಳಿದರು.

ಪುರುಷರ 400 ಮೀ. ಓಟದ ಸೆಮಿಫೈನಲ್‌ನಲ್ಲಿ ರಾಜೇಶ್ ರಮೇಶ್ (45.91 ಸೆ.) ಮತ್ತು ಮುಹಮ್ಮದ್ ಅಜ್ಮಲ್ (45.75) ಅವರು ಉತ್ತಮ ಸಾಧನೆ ತೋರಿದ್ದು ಇಬ್ಬರೂ ಫೈನಲ್‌ಗೆ ಅರ್ಹತೆ ಪಡೆದಿದ್ದಾರೆ. ಡೆಕಾಥ್ಲಾನ್‌ನಲ್ಲಿ ಮೊದಲ ದಿನದ ನಂತರ ತೇಜಸ್ವಿನ್ ಶಂಕರ್ 4,124 ಪಾಯಿಂಟ್‌ಗಳೊಂದಿಗೆ ಮುನ್ನಡೆಯಲ್ಲಿದ್ದಾರೆ.

ಬ್ರಿಟಿಷ್ ಗಾಲ್ಫ್: ₹25 ಕೋಟಿ ಬಹುಮಾನ

ಲಂಡನ್ (ರಾಯಿಟರ್ಸ್): ಈ ವರ್ಷದ ಬ್ರಿಟಿಷ್ ಓಪನ್ ಗಾಲ್ಫ್ ಚಾಂಪಿಯನ್‌ಷಿಪ್‌ನಲ್ಲಿ ಗೆಲ್ಲುವ ಆಟಗಾರ ₹24.68 ಕೋಟಿ (30 ಲಕ್ಷ ಡಾಲರ್) ಬಹುಮಾನ ಪಡೆಯಲಿದ್ದಾರೆ ಎಂದು ಸಂಘಟಕರಾದ ಆರ್ ಆ್ಯಂಡ್ ಎ ಬುಧವಾರ ತಿಳಿಸಿದೆ.

ಇದು ಟೂರ್ನಿಯ ಇತಿಹಾಸದಲ್ಲೇ ದಾಖಲೆ ಮೊತ್ತ. 2022ರ ಬಹುಮಾನ ನಿಧಿಗೆ ಹೋಲಿಸಿದರೆ ಶೇ 18ರಷ್ಟು ಏರಿಕೆ. ಕಳೆದ ವರ್ಷ ಈ ಟೂರ್ನಿಯನ್ನು ಆಸ್ಟ್ರೇಲಿಯಾದ ಕ್ಯಾಮೆರಾನ್ ಸ್ಮಿತ್ ಗೆದ್ದುಕೊಂಡಿದ್ದರು.

'ದಿ ಓಪನ್ ವಿಶ್ವ ಗಾಲ್ಫ್‌ನ ಕಿರೀಟಪ್ರಾಯವಾಗಿರಬೇಕು ಎಂಬುದನ್ನು ಖಚಿತಪಡಿಸುವುದು ನಮ್ಮ ಉದ್ದೇಶ. ಈಗಿನ ಬಹುಮಾನದ ಹಣ 2016ರ ಬಹುಮಾನ ಹಣಕ್ಕೆ ಹೋಲಿಸಿದರೆ ದುಪ್ಪಟ್ಟಾಗಿದೆ' ಎಂದು ಆರ್ ಆ್ಯಂಡ್‌ಎ ಸಂಸ್ಥೆಯ ಸಿಇಒ ಮಾರ್ಟಿನ್ ಸ್ಲಂಬರ್ಸ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.